

# ಮತಾತೀತ
# ದೇವರ ಮಾರ್ಗ


ಗ್ರಂಥಕರ್ತ : ತ್ರಿಮತ ಏಕೈಕ ಗುರುವು

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ
ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ
**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದ
**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**

---




ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ನವೆಂಬರ್–2017

ಪ್ರತಿಗಳು : 1000 **ಬೆಲೆ. /–**

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ-ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ದ್ಯಾನ - ಪ್ರಾರ್ಥನೆ - ನಮಾಜ್



## 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
    ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
    ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
    ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
    ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
    ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
    ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
    ದೇಹಂ ಮೋಹಂ.
65. ಜೀರ್ಣ+ಆಶಯಮು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

66. ಮೇಘಂ ಒಕಭೂತಂ–
    ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
    ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
    ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
    ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
    ಮಹೇಂದ್ರಜಾಲ,
    ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
    (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
    ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
     ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್**.B
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

**ತಪ್ಪದೆ ಓದಿರಿ!** **ಓದಿಸಿರಿ!!**

## ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಮೊದಲು ಹೇಳಬೇಕಾದ್ದು

ಸೃಷ್ಠಿಯಲ್ಲಿ ಕಾಣಿಸದ ಅತಿ ದೊಡ್ಡವು ಎರಡೇ ಎರಡು ಇವೆ. ಮೊದಲನೆಯದು ದೇವರು, ಎರಡನೆಯದು ಮಾಯೆ. ದೇವರು, ಮಾಯೆ ಎನ್ನುವ ಎರಡು ವಿಶ್ವವೆಲ್ಲಾ ವ್ಯಾಪಿಸಿವೆ. ದೇವರು ಪತಿಯಾಗಿ, ಮಾಯೆ ಪತ್ನಿಯಾಗಿ ಇದೆಯೆಂದು ಹೇಳಬಹುದು. ಇವರಿಬ್ಬರ ನಡುವೆ ನಡೆಯುವ ವ್ಯವಹಾರವೇ ಈ ಪ್ರಪಂಚವೊಂದರ ಹುಟ್ಟುವಿಕೆ ನಾಶ ಎಂದು ಹೇಳಬಹುದು. ಸೃಷ್ಠಿ ಪ್ರಭವದಿಂದ ಪ್ರಳಯದವರೆಗು ದೇವರ ಸಂಕಲ್ಪದಿಂದ ಮಾಯೆ ಕೆಲಸ ಮಾಡುತ್ತಿದೆ. ಇವರಿಬ್ಬರಿಗೂ ಹುಟ್ಟಿದವರೇ ಸಮಸ್ತ ಜೀವರಾಶಿಗಳು. ಆದ್ದರಿಂದ ಎಲ್ಲರಿಗೂ ಕಾಣಿಸದ ತಂದೆ ದೇವರು, ಕಾಣಿಸದ ತಾಯಿ ಮಾಯೆ. ನಮಗೆ ಶಾಶ್ವತವಾದ ತಾಯಿ ತಂದೆಯರಿದ್ದಾರೆನ್ನುವ ವಿಷಯ ಶೇಕಡ 99 ರಷ್ಟು ಮನುಷ್ಯರಿಗೆ ತಿಳಿದಿಲ್ಲ. ಸರ್ವರಿಗು ತಾಯಿ ತಂದೆಯರೊಂದರ ವಿಷಯವನ್ನೇ ಭಗವದ್ಗೀತೆಯಲ್ಲಿ ಗುಣತ್ರಯ ವಿಭಾಗ ಯೋಗದಲ್ಲಿ 4ನೇ ಶ್ಲೋಕದಲ್ಲಿ ***"ಸರ್ವ ಯೋನಿಷು ಕೌಂತೇಯ! ಮೂರ್ತಯಃ ಸಂಭವಂತಿಯಾಃ, ತಾಸಾಂ ಬ್ರಹ್ಮ ಮಹದ್ಯೋನಿಃ ಅಹಂ ಬೀಜ ಪ್ರದಃ ಪಿತಾ."*** ಎಂದಿದ್ದಾನೆ. ಇದರ ಭಾವ **"ಸರ್ವಯೋನಿಗಳಲ್ಲಿ ಹುಟ್ಟುವ ಎಲ್ಲ ಜೀವರಾಶಿಗಳಿಗು ತಾಯಿ ಪ್ರಕೃತಿ (ಮಾಯೆ). ಬೀಜದಾತನಾದ ನಾನು ತಂದೆ"** ಇದೇ ವಿಷಯವನ್ನು ಎಲ್ಲರಿಗೂ ತಂದೆ ದೇವರೆಂದು ಬೈಬಲ್‌ನಲ್ಲಿ ಹೇಳಲ್ಪಟ್ಟಿದೆ. ಪ್ರಪಂಚದಲ್ಲಿ ಹುಟ್ಟಿದ ಮನುಷ್ಯರಿಗೆ ಕಾಣಿಸುವ ತಾಯಿ ತಂದೆ ಹೊರತು ಕಾಣಿಸದ ತಾಯಿ ತಂದೆ ಇದ್ದಾರೆಂದು ಸಹ ತಿಳಿದಿಲ್ಲ.

ಕಾಣಿಸದ ದೇವರು, ಮಾಯೆ ಆಡುವ ಜಗನ್ನಾಟಕದಲ್ಲಿ ಪಕ್ಷ, ಪ್ರತಿಪಕ್ಷ ಎನ್ನುವ ಎರಡು ಇವೆ. ಪಕ್ಷ, ಪ್ರತಿಪಕ್ಷಗಳಲ್ಲಿ ದೇವರು ಒಂದು ಕಡೆ ಮಾಯೆ ಒಂದು ಕಡೆ ಇದ್ದು ಆಡುತ್ತಿದ್ದಾರೆ. ಈ ಆಟದಲ್ಲಿ ಕೆಲವರು ಮಾಯೆಕಡೆ ಇರುವಾಗ ಕೆಲವರು ದೇವರ ಕಡೆ ಇದ್ದಾರೆ. ಮಾಯೆ ಪಕ್ಷದಲ್ಲಿ ಶೇಕಡ 99.9 ರಷ್ಟು ಮನುಷ್ಯರು ಇರುವಾಗ, ದೇವರ ಕಡೆ ಕೇವಲ 0.1 ರಷ್ಟು ಮನುಷ್ಯರು ಅಪರೂಪವಾಗಿ ಇದ್ದಾರೆ. ಅಷ್ಟು ಕಡಿಮೆ ದೇವರ ಕಡೆ, ಎಷ್ಟೋ ಹೆಚ್ಚು ಮಾಯೆ ಕಡೆ ಏಕಿದ್ದಾರೆಂದು ಕೆಲವರು ಕೇಳಬಹುದು. ಅದಕ್ಕೆ ಸಮಾಧಾನ

ಏನೆಂದರೆ! ಮಾನವನು ಹುಟ್ಟಿದಾಗಲೇ ಮಾಯೆಪಕ್ಷದಲ್ಲಿ ಹುಟ್ಟುತ್ತಿದ್ದಾನೆ. ಹಾಗೆ ಹುಟ್ಟಿದವನನ್ನು ತನ್ನ ಕಡೆ ನೆಳೆದುಕೊಳ್ಳುವುದು ದೇವರ ಪದ್ಧತಿಯಾದಾಗ, ತನ್ನ ಕಡೆಯಿಂದ ಯಾರನ್ನು ದೇವರಕಡೆ ಹೋಗದಂತೆ ನೋಡಿಕೊಳ್ಳುವುದು ಮಾಯೆಯೊಂದರ ಕೆಲಸ. ಅದರಿಂದ ಎಲ್ಲಾ ಕಾಲ ಮನುಷ್ಯರಿಗೆ ತಾನೇ ದೇವರೆನ್ನುವಂತೆ ಪ್ರಚಾರ ಮಾಡಿಕೊಳ್ಳುತ್ತಾ, ತನ್ನ ಪ್ರತಿನಿಧಿಗಳನ್ನಾಗಿ ಎಷ್ಟೋ ಸ್ವಾಮಿಗಳನ್ನು, ಪೀಠಾಧಿಪತಿಗಳನ್ನು, ಗುರುಗಳನ್ನು, ಪಂಡಿತರನ್ನು ನೇಮಿಸಿ ಕೊಂಡು, ತಾನು ಮಾಯೆ ಎಂದು ಯಾರಿಗೂ ತಿಳಿಯದ ವಿಧವಾಗಿ ಪ್ರಚಾರ ಮಾಡಿಸಿಕೊಳ್ಳುತ್ತಿದೆ. ಅದರಿಂದ ಪ್ರಜೆಗಳೆಲ್ಲರೂ ದೇವರ ಕಡೆ ಇದ್ದೇವೆಂದು ಕೊಂಡು ಮಾಯೆ ಮಾರ್ಗದಲ್ಲಿಯೇ ಮುಂದುವರೆಯುತ್ತಿದ್ದಾರೆ.

ದೇವರು ಕೆಲವು ಸಾವಿರ ಸಂವತ್ಸರಗಳಿಗೆ ಒಂದು ಬಾರಿ ತನ್ನ ಪ್ರತಿನಿಧಿಯನ್ನು ಕಳುಹಿಸುತ್ತಿದ್ದಾನೆ. ತನ್ನ ಪ್ರತಿನಿಧಿಯಿಂದ ದೇವರ ವಿಷಯವನ್ನು ಪ್ರಚಾರ ಮಾಡಿಸುತ್ತಿದ್ದಾನೆ. ದೇವರ ಪ್ರತಿನಿಧಿಯಾದ ಪ್ರವಕ್ತ ಅಥವಾ ಭಗವಂತನು ಹೇಳಿದ ವಿಷಯಗಳನ್ನು ಮನುಷ್ಯರು ಕೇಳಿಸಿಕೊಂಡರೂ, ಅದು ಸತ್ಯವಲ್ಲವೆಂದು ಮಾಯೆ ಪ್ರತಿನಿಧಿಗಳು ಹೇಳುವುದರಿಂದ ದೇವರ ಮಾರ್ಗ ಪ್ರಚಾರ ಆಗಲಾರದೆ ಹೋಗುತ್ತಿದೆ. ಅದರಿಂದ ದೇವರ ಕಡೆ ಶೇ. 0.1 ರಷ್ಟು ಮನುಷ್ಯರು ಮಾತ್ರವೇ ಇರುತ್ತಾರೆ. ದೇವರು ಕೊಟ್ಟಿರುವ ಅಧಿಕಾರದಿಂದಲೇ ಮಾಯೆ ವಿಪರೀತವಾದ ಬಲವನ್ನು ಹೊಂದಿ ಮನುಷ್ಯರನ್ನು ದೇವರ ಕಡೆ ಹೋಗದಂತೆ ನೋಡಿ ಕೊಳ್ಳುತ್ತಿದೆ. ಅದಕ್ಕೆ ಮಾಯೆ ಮುಖ್ಯವಾದ ಸೂತ್ರವನ್ನು ಅನುಸರಿಸುತ್ತಿದೆ. ಅದೇನೆಂದರೆ! ದೇವರ ಜ್ಞಾನದ ಹಾಗೆ ತನ್ನ ಜ್ಞಾನವನ್ನು ಪ್ರವೇಶವಿಟ್ಟು, ದೇವರ ಪ್ರತಿನಿಧಿಗಳ ಹಾಗೆ ತನ್ನ ಪ್ರತಿನಿಧಿಗಳನ್ನು ಸ್ವಾಮಿಗಳಾಗಿ, ಗುರುಗಳಾಗಿ, ಪ್ರಚಾರಕರಾಗಿ ಇಟ್ಟು, ದೇವರ ಪ್ರತಿನಿಧಿ ಬರುವುದಕ್ಕಿಂತ ಮೊದಲು, ಬಂದು ಹೋದ ನಂತರ ಯಾವಾಗಲೂ ತನ್ನ ವಿಷಯವನ್ನೇ ಪ್ರಚಾರವಾಗುವಂತೆ ನೋಡಿಕೊಳ್ಳುತ್ತಿದೆ. ಆದ್ದರಿಂದ ಒಟ್ಟಾರೆ ಪ್ರಜೆಗಳೆಲ್ಲರೂ ತಾವು ದೇವರ ಭಕ್ತರೆಂದುಕೊಳ್ಳುತ್ತಾ ಮಾಯೆಗೆ ಭಕ್ತರಾಗಿ ಇದ್ದಾರೆ. ಯಾವಾಗಲೋ ಒಂದುಬಾರಿ ಹುಟ್ಟುವ ಭಗವಂತನು (ದೇವರ ಕುಮಾರನು) ಹೊರತು ಅಸಲಾದ ಜ್ಞಾನವನ್ನು, ಅಸಲಾದ ದೇವರನ್ನು ಕುರಿತು ಹೇಳುವವರಿಲ್ಲ. ಆದ್ದರಿಂದ ದೇವರ ವಿಷಯವಾಗಿ ಬಹು ಜಾಗ್ರತೆಯಾಗಿ ಪರಿಶೀಲಿಸಿ, ಭೂಮಿ ಮೇಲಿರುವ ಇಷ್ಟು ಜ್ಞಾನಗಳಲ್ಲಿ

ಯಾವುದು ಅಸಲಾದ ದೇವರ ಜ್ಞಾನವೆಂದು ನೋಡಬೇಕಾದ ಅವಶ್ಯವಿದೆ. ಹಾಗೆ ಸ್ವಲ್ಪ ಆಲೋಚನೆ ಬಂದವರಿಗೆ ಕೂಡ ಇದೇ ನಿಜಜ್ಞಾನವೆಂದು ಮಾಯೆ ತನ್ನ ಜ್ಞಾನವನ್ನೇ ಬೋಧಿಸಿದೆ. ಹಾಗೆ ದೇವರೆಂದು ಭ್ರಮಿಸಿ ಮಾಯೆಬಲೆಯಲ್ಲಿ ಬಿದ್ದವರು ಎಷ್ಟೋ ಇದ್ದಾರೆ. ಅಂತಹವರಲ್ಲಿ ಪರವಸ್ತು ಸೂರ್ಯ ನಾರಾಯಣ ರಾವು ಎನ್ನುವಾತನು ಒಬ್ಬನು. ಕಾಣಿಸುವುದು ಕೇಳುಸುವುದು ಎಲ್ಲಾ ಮಾಯೆ ಎಂದು ತಿಳಿಯದೆ ಕಾಣಿಸಿದ ಮಾಯೆಯನ್ನು ಪ್ರಭುವೆಂದು ಕೊಂಡಿದ್ದಾನೆ. ಮತ್ತಾಯ 11, 27 ವಾಕ್ಯದ ಪ್ರಕಾರ **"ತಂದೆಯಲ್ಲದೆ ಕುಮಾರನನ್ನು ಯಾರು ತಿಳಿಯನು"** ಎನ್ನುವ ಸೂತ್ರವನ್ನು ಮಾಯೆ ಮರೆಯುವಂತೆ ಮಾಡಿದೆ. ಕಾಣಿಸುವುದೇ ದೇವರೆಂದುಕೊಂಡ ಆತನು ತಾನು ನಿಜವಾದ ದೈವ ಭಕ್ತನೆಂದುಕೊಂಡು ಭ್ರಮಿಸಿದ್ದಾನೆ. ತಾನು ಯಾವ ದೇವರ ಭಕ್ತನೆಂದು ಹೇಳಿಕೊಂಡಿದ್ದಾನೋ, ಇನ್ನೊಂದು ರೂಪದಲ್ಲಿರುವ ಆ ದೇವರನ್ನೇ ಮಾಯೆ ನಿಂದಿಸುವಂತೆ ಮಾಡಿದೆ. ತಾನು ದೇವರೆಂದುಕೊಂಡ ಅವನನ್ನೇ ದೇವರು ಅಲ್ಲವೆನ್ನುತ್ತಿದ್ದೇನೆಂದು ತಿಳಿಯದಂತೆ ಮಾಯೆ ಮಾಡಿದೆ. ಪೂರ್ತಿ ಮಾಯೆ ಪ್ರಭಾವದಲ್ಲಿ ಮುಳುಗಿಹೋದ ಮನುಷ್ಯನಿಂದ ದೇವರು ಕೊಡುವ ಮೋಕ್ಷವನ್ನು (ಪರಲೋಕ ರಾಜ್ಯವನ್ನು) ಕೋರದೆ, ಮಾಯೆ ಕೊಡುವ ಪ್ರಪಂಚ ವಸ್ತುಗಳನ್ನು ಕೋರುವಂತೆ ಮಾಡಿದೆ. ದೇವರ ಪ್ರಾರ್ಥನೆ ಶಾಶ್ವಿತವಾದ ಜೀವನಕ್ಕೋಸ್ಕರ ಅಲ್ಲದೆ ಅಶಾಶ್ವತವಾದ ಪ್ರಪಂಚ ಜೀವನಕ್ಕೋಸ್ಕರ ಮಾಡುವಂತೆ ಮಾಯೆ ಮಾಡಿದೆ.

ಈ ವಿಧವಾಗಿ ಮಾಯೆ ದೇವರನ್ನು ತಿಳಿಯದಂತೆ ಮಾಡಿ, ಯಾವುದು ಯಾರ ಜ್ಞಾನವೋ ತಿಳಿಯದ ಅಯೋಮಯ ಸ್ಥಿತಿಯನ್ನು ಉಂಟುಮಾಡಿದಾಗ ಇದು ಮಾಯೆ ಜ್ಞಾನ, ಇದು ದೇವರ ಜ್ಞಾನ ಎಂದು ವಿವರಿಸಿ ತಿಳಿಸುವುದಕ್ಕೇ **"ಮತಾತೀತ ದೇವರ ಮಾರ್ಗ"** ಎನ್ನುವ ಈ ಚಿಕ್ಕ ಗ್ರಂಥವನ್ನು ಬರೆಯುವುದು ನಡೆದಿದೆ. ಒಂದು ವಿಧವಾಗಿ ಇದು ಮತಾತೀತವೇ ಅಲ್ಲದೆ ಮಾಯಾತೀತವೆಂದು ಸಹ ಹೇಳಬಹುದು. ಮತವೆನ್ನುವುದೇ ದೊಡ್ಡ ಮಾಯೆ ಆದ್ದರಿಂದ ಮತಾತೀತ ಎಂದಾಗಲೇ ಇದು ಮಾಯಾತೀತವಾಗಿದೆ. ಇದರಲ್ಲಿ ಹಿಂದೂಗಳನ್ನು, ಕ್ರೈಸ್ತರನ್ನು ಕುರಿತು ಬರೆಯುವುದು ನಡೆದಿದೆ. ಇದರಲ್ಲಿ ಹೇಳಿದ ವಿಷಯಗಳು ಯಾವ ಮತದ ಕಡೆ ಹೇಳದಂತೆ ದೇವರ ಕಡೆಯಿಂದ ಮಾತ್ರ ಹೇಳಲ್ಪಟ್ಟಿವೆ.

ನಿರ್ದ್ವಂದವಾಗಿ ನಿಷ್ಕಳಂಕವಾಗಿ ಹೇಳಿದ ವಿಷಯಗಳೇ ಇದರಲ್ಲಿ ಇವೆ. ಆ ವಿಧವಾಗಿ ಹೇಳುವಾಗ ಮಾಯಾ ಮಾರ್ಗದಲ್ಲಿ ನಡೆಯುವ ಹಿಂದೂಗಳನ್ನು, ಕ್ರೈಸ್ತರನ್ನು ವಿಮರ್ಶಿಸುವುದು ತಪ್ಪಲಿಲ್ಲ. ಪ್ರಭುವನ್ನು ದೇವರು ಅಲ್ಲವೆಂದ ಹಿಂದೂಗಳನ್ನು, ಕೃಷ್ಣನನ್ನು ದೇವರಲ್ಲ ಎಂದ ಪರವಸ್ತು ಸೂರ್ಯ ನಾರಾಯಣರವರನ್ನು ದೇವರ ವಿಷಯದಲ್ಲಿ ತಪ್ಪು ಮಾಡಿದವರನ್ನಾಗಿ ಹೇಳದೆ ತಪ್ಪಲಿಲ್ಲ. ದೇವರು ತನ್ನ ಪಕ್ಷದವರು ಪೂರ್ತಿಯಾಗಿ ಇಲ್ಲದಂತೆ ಹೋಗದಂತಿರುವುದಕ್ಕೆ ಆಗಾಗ ತಾನೇ ಅವತರಿಸುತ್ತಿರುವನು. ತನ್ನ ಕೆಲಸದ ಮೇಲೆ ದ್ವಾಪರಯುಗದಲ್ಲಿ ಬಂದಿದ್ದಾನೆ, ಕಲಿಯುಗದಲ್ಲಿ ಕೂಡ ಬಂದಿದ್ದಾನೆ. ನಂತರ ಯುಗದಲ್ಲಿ ಕೂಡ ಬರುತ್ತಾನೆ. ಯಾವಾಗ ಬಂದರೂ ತನ್ನ ಜ್ಞಾನವನ್ನು ಮಾತ್ರವೇ ಬೋಧಿಸಿ ಹೋಗುತ್ತಾನೆ ಹೊರತು ಬೇರೆ ಕೆಲಸ ಮಾಡುವುದಿಲ್ಲ. ಈ ಒಂದು ಸೂತ್ರದಿಂದಲೇ ನಾವು ದ್ವಾಪರಯುಗ ಕೃಷ್ಣನನ್ನು, ಕಲಿಯುಗ ಪ್ರಭುವನ್ನು ಒಬ್ಬರೇ ಎಂದಿದ್ದೇವೆ ಹೊರತು ಬೇರೆಯಲ್ಲ. ಮಾಯಾ ದೃಷ್ಠಿಯಿಂದ ಭೌತಿಕವಾದ ಶರೀರವನ್ನು ನೋಡದೆ, ಜ್ಞಾನದೃಷ್ಠಿಯಿಂದ ಆತ್ಮ ವಿಧಾನವಾದ ಜ್ಞಾನವನ್ನು ನೋಡಿದರೇ ಮೇಲ್ನೋಟಕ್ಕೆ ಬೇರೆಬೇರೆಯಾಗಿ ಕಾಣಿಸಿದ ಕೃಷ್ಣನಲ್ಲಿಯೂ, ಪ್ರಭುವಿನಲ್ಲಿಯೂ ಒಬ್ಬನೇ ದೇವರನ್ನು ನೋಡಬಹುದು. ಜ್ಞಾನದೃಷ್ಠಿ ಇಲ್ಲದವರಿಗೆ ಬೇರೆಬೇರೆಯಾದ ಕೃಷ್ಣನ ಶರೀರ ಪ್ರಭುವಿನ ಶರೀರಗಳೇ ಕಾಣಿಸುತ್ತವೆ, ಇವರಿಬ್ಬರು ಬೇರೆಬೇರೆಯಾಗಿ ಕಾಣಿಸುತ್ತಾರೆ. ಆದ್ದರಿಂದ ಮನುಷ್ಯನಿಗೆ ಆತ್ಮ ವಿಧಾನವಾದ ಜ್ಞಾನದೃಷ್ಠಿ ಅವಶ್ಯ. ಜ್ಞಾನದೃಷ್ಠಿ ಇಲ್ಲದ್ದು ಈ ಗ್ರಂಥದಲ್ಲಿ ಬರೆದಿರುವುದು ಕೂಡ ವಿರುದ್ಧವಾಗಿಯೇ ಕಾಣಿಸಬಲ್ಲದು. ಇದರಲ್ಲಿನ ವಿಷಯಗಳು ಮಾಯೆಗೆ ವಿರುದ್ಧ ಆದ್ದರಿಂದ ಮಾಯೆ ಪಾರ್ಟೀ ಯಲ್ಲಿರುವವರಿಗೆಲ್ಲಾ ವಿರುದ್ಧವಾಗಿಯೇ ಕಾಣಿಸುತ್ತದೆ. ಇದು ಮಾಯೆಗು ದೇವರಿಗು ಮಧ್ಯೆ ಸಂಘರ್ಷಣೆಯಂತಹುದ್ದು. ಆದ್ದರಿಂದ ಜಾಗ್ರತೆಯಾಗಿ ಓದಿದರೇ ಅರ್ಥವಾಗಬಲ್ಲದು.

ಇಂತಿ

**ಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಮತಾತೀತ ದೇವರ ಮಾರ್ಗ

ಯೇಸು ಪ್ರಭು ಭೂಮಿ ಮೇಲೆಗೆ ಬರುವುದಕ್ಕಿಂತ ಮೊದಲೇ ಸ್ವಲ್ಪ ಚರಿತ್ರೆ ಇದೆ. ಆತನು ಮರಣಿಸಿದ ನಂತರ ಕೂಡ ಸ್ವಲ್ಪ ಚರಿತ್ರೆ ಇದೆ. ಆತನು ಬರುವುದಕ್ಕಿಂತ ಮೊದಲೇ ಬರೆಯಲ್ಪಟ್ಟಿರುವ ಚರಿತ್ರೆಯನ್ನು **ಹಳೆ ನಿಬಂಧನೆ** ಎನ್ನುತ್ತಿದ್ದೇವೆ. ಆತನು ಬಂದ ನಂತರ ಬರೆಯಲ್ಪಟ್ಟಿರುವುದನ್ನು **ಹೊಸ ನಿಬಂಧನೆ** ಎನ್ನುತ್ತಿದ್ದೇವೆ. ಆತನ ಜನನಕ್ಕೆ ಪೂರ್ವವಿರುವ ಹಳೆ ನಿಬಂಧನೆ, ಜನನದ ನಂತರ ಹೊಸ ನಿಬಂಧನೆಯಲ್ಲಿ ಇರುವ ಆತನ ಜೀವನ ಮತ್ತು ಮರಣದ ನಂತರ ಆತನ ಭಕ್ತರು ಕ್ರೈಸ್ತವ ಸಂಘವನ್ನು ಪ್ರಚಾರ ಮಾಡಿದ ವಿಧಾನಗಳು ಎರಡು ಕ್ರೈಸ್ತವ ಸಂಘದವರಿಗೆ ಮುಖ್ಯವಾದವುಗಳಾಗಿ ಇವೆ. ಈ ಹಳೆ ಹೊಸ ಎರಡು ಚರಿತ್ರೆಗಳು ಬರೆಯಲ್ಪಟ್ಟಿರುವ ಗ್ರಂಥವನ್ನೇ **ಪರಿಶುದ್ಧ ಬೈಬಲ್** ಎನ್ನುತ್ತಿದ್ದೇವೆ. ಕ್ರೈಸ್ತರ ಬೈಬಲ್ ಆಗಲಿ, ಹಿಂದೂಗಳ ಭಗವದ್ಗೀತೆಯಾಗಲಿ ಮಾನವನನ್ನು ಉದ್ಧರಿಸುವುದಕ್ಕೆ, ದೇವರ ಕಡೆ ನಡೆಸುವುದಕ್ಕೆ ಉದ್ದೇಶಿಸಲ್ಪಟ್ಟಿರುವವಾದರೂ ಬೈಬಲ್‌ಗು, ಭಗವದ್ಗೀತೆಗು ಸ್ವಲ್ಪ ವ್ಯತ್ಯಾಸ ಇದೆ. ಭಗವದ್ಗೀತೆಯಲ್ಲಿ ಕೃಷ್ಣನ ಹಿಂದಿನ ಚರಿತ್ರೆಯಾಗಲೀ ಮುಂದಿನ ಚರಿತ್ರೆಯಾಗಲಿ ಯಾವುದೂ ಇಲ್ಲ. ಕೃಷ್ಣನ ಬೋಧನೆ ಮಾತ್ರ ಗೀತೆಯಲ್ಲಿ ಇದೆ. ಪರಿಶುದ್ಧ ಬೈಬಲ್‌ನಲ್ಲಿ ಹಾಗಲ್ಲದೆ ಪ್ರಭುವಿಗಿಂತ ಮೊದಲ ಚರಿತ್ರೆ, ಪ್ರಭು ನಂತರ ಚರಿತ್ರೆ ಎರಡೂ ಇವೆ. ಕ್ರೈಸ್ತ ಬೋಧಕರ ಬೋಧನೆಗಳಲ್ಲಿ ಪ್ರಭುವಿಗಿಂತ ಮೊದಲಿರುವ ಹಳೆ ನಿಬಂಧನೆಯಲ್ಲಿನ ಮಾತುಗಳು, ಹೊಸ ನಿಬಂಧನೆಯಲ್ಲಿನ ಪ್ರಭು ನಂತರ ಆತನ ಭಕ್ತರ ಪ್ರಚಾರಗಳು ಜಾಗಮಾಡಿಕೊಂಡಿವೆ. ಇದರಲ್ಲಿ ತಪ್ಪೇನೂ ಇಲ್ಲ ಆದರೆ ನಾವು ಚೆನ್ನಾಗಿ ಯೋಚಿಸಿದರೇ ಮನುಷ್ಯ ದೇವರ ಮಾರ್ಗದಲ್ಲಿ ನಡೆಯುವುದಕ್ಕೆ ಬೈಬಲ್‌ನಲ್ಲಿ ಸ್ವಲ್ಪ ಭಾಗವೇ ಎಷ್ಟೋ ಉಪಯೋಗವಾಗ ಬಲ್ಲದೆಂದು ತಿಳಿಯುತ್ತಿದೆ. ಒಂದು ನಾಟಕದಲ್ಲಿ ಎಷ್ಟೋ ಪಾತ್ರದಾರರು ನಟಿಸಿದರೂ ಎಲ್ಲರಲ್ಲಿ ಒಂದು ಪಾತ್ರ ಉಳಿದವರಿಗಿಂತ ಹೆಚ್ಚಾಗಿ ಇಷ್ಟವಾಗುವುದು, ನಾಟಕದಲ್ಲಿನ ಘಟ್ಟಗಳಲ್ಲಿ ಯಾವುದೋ ಒಂದು ಘಟ್ಟ ಬಹಳ ಇಷ್ಟವಾಗುವುದು ನಡೆಯುತ್ತಿದೆ. ಹಾಗೆಯೇ ಬೈಬಲ್ ಒಟ್ಟಾರೆ ತೆಗೆದುಕೊಂಡರೇ ಅದರಲ್ಲಿ ಹೊಸ ನಿಬಂಧನೆಯಲ್ಲಿ ಯೇಸು ಪ್ರಭು ಭೂಮಿ ಮೇಲೆ ಬಂದಾಗಿನಿಂದ ಪುನಃ

ಆತನು ಮರಳಿಹೋಗುವವರೆಗು ಇರುವ ಭಾಗ ಪರಮ ಪವಿತ್ರ, ಮಾನವನು ಕೊನೆಗಾಣುವುದಕ್ಕೆ ಉನ್ನತವಾದ ಘಟ್ಟ ಎಂದು ಹೇಳಬಹುದು. ಬೈಬಲ್‌ನಲ್ಲಿ ಅತಿ ಸಾರಾಂಶವಾದ ಭಾಗ ಯೇಸು ಪ್ರಭುವಿನ ಚರಿತ್ರೆ ಮಾತ್ರವೇಯೆಂದು ಪ್ರತಿ ಮನುಷ್ಯ ಗ್ರಹಿಸಬಹುದು. ಯೇಸು ಪ್ರಭು ನುಡಿದ ಮಾತುಗಳು ಬೈಬಲ್ ಒಟ್ಟಾರೆ ವಜ್ರಗಳ ಮೂಟೆಗಳಂತಹವು. ಬೈಬಲ್‌ನಲ್ಲಿ ಮಾನವನು ಗ್ರಹಿಸಬೇಕಾಗಿರುವುದೆಲ್ಲಾ ಪ್ರಭು ಚರಿತ್ರೆಯಲ್ಲಿ, ಪ್ರಭು ಮಾತುಗಳಲ್ಲಿಯೇ ಇದೆ. ಆದ್ದರಿಂದ ಬೈಬಲ್ ಸಾರಾಂಶವು ಬೇಕೆನ್ನುವವರು, ಹೊಸ ನಿಬಂಧನೆಯಲ್ಲಿನ ಪ್ರಭು ಜೀವನ, ಪ್ರಭು ಮಾತುಗಳೊಂದಿಗೆ ಕೂಡಿಕೊಂಡ **ಮತ್ತಾಯ ಸುವಾರ್ತೆ, ಮಾರ್ಕ ಸುವಾರ್ತೆ, ಲೂಕಾ ಸುವಾರ್ತೆ, ಯೋಹಾನ ಸುವಾರ್ತೆ** ಎನ್ನುವ ನಾಲ್ಕು ನೋಡಿದರೆ ಸಾಕು. ಮಾನವನಿಗೆ ಬೇಕಾದ ದೈವಸಾನ್ನಿಧ್ಯವು ಈ ನಾಲ್ಕು ಸುವಾರ್ತೆಗಳಲ್ಲಿಯೇ ಸಿಗುತ್ತದೆ. ಈ ನಾಲ್ಕು ಸುವಾರ್ತೆಗಳಲ್ಲಿ ಜ್ಞಾನಗಳಿಗೆಲ್ಲಾ ಜ್ಞಾನ ಒಂದು **ಯೋಹಾನ ಸುವಾರ್ತೆಯಲ್ಲಿಯೇ** ಇದೆಯೆಂದು ಘಂಟಾನಾದವಾಗಿ ಹೇಳಬಹುದು. ಮಾನವನ ಬುರಡೆ ತಿಳಿದುಕೊಳ್ಳಲಾರದಷ್ಟು ಜ್ಞಾನ ಯೋಹಾನ ಸುವಾರ್ತೆಯಲ್ಲಿ ಕಾಣಿಸುತ್ತದೆ. ಎಷ್ಟೋ ದೊಡ್ಡದಾದ ಬೈಬಲ್ ಗ್ರಂಥ 1029 ಪುಟಗಳ ಪುಸ್ತಕವಾದರೇ ಅದರಲ್ಲಿ ಹೊಸ ನಿಬಂಧನೆಯಲ್ಲಿನ ಯೇಸು ಚರಿತ್ರೆ ಕೇವಲ 102 ಪುಟಗಳು ಮಾತ್ರವೇ ಇದೆ. ಬೈಬಲ್ ಗ್ರಂಥವನ್ನು ಹತ್ತು ಭಾಗಗಳಾಗಿ ವಿಭಜಿಸಿದರೇ ಅದರಲ್ಲಿ ಒಂದು ಭಾಗ ಮಾತ್ರ ಒಂಭತ್ತು ಭಾಗಗಳಿಗಿಂತ ದೊಡ್ಡದೆಂದು ಹೇಳಬಹುದು. ಯೇಸು ಪ್ರಭು ಬೆಲೆ ತಿಳಿದವರು, ನಿಜ ಜ್ಞಾನವನ್ನು ಈ ಒಂದು ಭಾಗದಲ್ಲಿಯೇ ಗ್ರಹಿಸುವರು.

ಎಷ್ಟೋ ದೊಡ್ಡ ಜ್ಞಾನವಿರುವ ಮತ್ತಾಯ, ಮಾರ್ಕ, ಲೂಕಾ ಯೋಹಾನ ಸುವಾರ್ತೆಗಳಲ್ಲಿನ ಪ್ರಭು ಮಾತುಗಳನ್ನು ಕೆಲವನ್ನು ವಿವರಿಸುತ್ತಾ ನಾವು **'ಸುವಾರ್ತೆ ಮಂಜರಿ'** ಎನ್ನುವ ಪುಸ್ತಕವನ್ನು ಬರೆಯುವುದು ನಡೆದಿದೆ. ಎಷ್ಟೋ ಮಂದಿ ಫಾದರ್‌ಗಳು, ಫಾಸ್ಟರ್‌ಗಳು, ಬಿಷಪ್‌ರು ಎಷ್ಟೋ ಜನ ಪ್ರಭು ಮಾತುಗಳನ್ನು ಕುರಿತು ಹೇಳಿದ್ದಾರಲ್ವಾ! ನೀವು ವಾಕ್ಯಗಳಿಗೆ ವಿವರ

ಬರೆಯುವುದೇನೆಂದು ಕೆಲವರು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೆ! ಹಳೆ ನಿಬಂಧನೆಯಲ್ಲಿಯೂ ಮತ್ತು ಹೊಸ ನಿಬಂಧನೆಯಲ್ಲಿಯೂ ನಾಲ್ಕು ಸುವಾರ್ತೆಗಳು ಬಿಟ್ಟು ಅಪೋಸ್ತರರ ಭಾಗದಲ್ಲಿಯೂ ಯಾರು ಏನು ಹೇಳಿದರೂ ಕೇಳಬಹುದು. ಅವುಗಳನ್ನು ಎಲ್ಲರೂ ಸಮರ್ಥವಾಗಿಯೇ ಬೋಧಿಸುತ್ತಿದ್ದಾರೆಂದು ಹೇಳಬಹುದು. ಆದರೆ ಪ್ರಭುಚರಿತ್ರೆ ಹೊಂದಿದ ನಾಲ್ಕು ಸುವಾರ್ತೆಗಳಲ್ಲಿನ ಮಾತುಗಳು ವಿವರಿಸುವುದರಲ್ಲಿ ಸ್ವಲ್ಪ ಲೋಪ ಇದೆಯೆಂದೇ ಹೇಳಬಹುದು. **ಯಾವ ವಿಧವಾಗಿ ಹಿಂದೂಗಳಿಗೆ ಭಗವದ್ಗೀತೆಯಲ್ಲಿನ ರಹಸ್ಯಗಳು ಇಲ್ಲಿಯತನಕ ಅರ್ಥವಾಗಲಿಲ್ಲವೆಂದು ಹೇಳಿದ್ದೇವೋ, ಆ ವಿಧವಾಗಿಯೇ ಯೇಸುಪ್ರಭು ಚರಿತ್ರೆಯಿರುವ ನಾಲ್ಕು ಸುವಾರ್ತೆಗಳಲ್ಲಿಯೂ ಕ್ರೈಸ್ತರಿಗೆ ಅರ್ಥವಾಗದ ರಹಸ್ಯಗಳು ಎಷ್ಟೋ ಉಳಿದಿವೆಯೆಂದೇ ಹೇಳಬಹುದು.** ಈ ನಮ್ಮ ಮಾತನ್ನು ಬೋಧಕರ ಮೇಲಿನ ಅಸೂಯೆಯಿಂದ ಹೇಳುತ್ತಿಲ್ಲ. ಆದರೆ ಪ್ರಭು ಮೇಲಿನ ವಿಶ್ವಾಸದಿಂದ ಹೇಳುತ್ತಿದ್ದೇವೆ. ಪ್ರಭು ಪ್ರಜೆಗಳಿಗೆ ಹತ್ತಿರವಾಗಿ ಅರ್ಥವಾಗಬೇಕೆಂದು, ಪ್ರಭು ಎಷ್ಟು ದೊಡ್ಡವನೋ, ಆತನ ಶಕ್ತಿ ಏನೋ ತಿಳಿಯಬೇಕೆಂದು ನಾವು ಯಥಾರ್ಥವನ್ನು ವಿವರಿಸುವುದು ನಡೆದಿದೆ.

ಪ್ರಭು ಹೆಸರಿರುವ ನಮ್ಮ ಪುಸ್ತಕಗಳನ್ನು ನೋಡಿ ಹಿಂದೂಗಳೇನೋ ಇವು ಕ್ರೈಸ್ತವ ಪುಸ್ತಕಗಳು ಅವುಗಳನ್ನು ಓದಬಾರದೆಂದು ಅಂದುಕೊಳ್ಳುತ್ತಿದ್ದಾರೆ. ಮತ್ತು ಕ್ರೈಸ್ತವರೇನೋ ಹಿಂದೂಗಳ ಗುರು ಬರೆದಿರುವವು ಅವುಗಳನ್ನು ಓದಬಾರದು. ನಮ್ಮ ಕ್ರೈಸ್ತರು ಬರೆದಿರುವವೇ ಓದಬೇಕೆಂದುಕೊಳ್ಳುತ್ತಿದ್ದಾರೆ. ಕ್ರೈಸ್ತವ ಪುಸ್ತಕಗಳನ್ನು ಬರೆದವನು ಹಿಂದೂನೇ ಅಲ್ಲವೆಂದು ಹಿಂದೂಗಳು ನಮ್ಮನ್ನು ಅಸಹ್ಯಿಸಿಕೊಳ್ಳುತ್ತಿರುವಾಗ, ಹಿಂದೂಮತಕ್ಕೆ ಬದಲಾಯಿಸುವುದಕ್ಕೆ ಈ ಪುಸ್ತಕಗಳು ಬರೆದಿದ್ದಾರೆ. ಅವುಗಳನ್ನು ಓದಬಾರದೆಂದು ಕೆಲವರು ಕ್ರೈಸ್ತರು ಇತರ ಕ್ರೈಸ್ತರಿಗೆ ಹೇಳಿಕೊಳ್ಳುತ್ತಿದ್ದಾರೆ. ಕ್ರೈಸ್ತರನ್ನು ಹಿಂದೂಗಳಾಗಿ ಬದಲಾಯಿಸುತ್ತಿದ್ದಾನೆಂದು ಕ್ರೈಸ್ತರು, ಹಿಂದೂಗಳನ್ನು ಕ್ರೈಸ್ತರಾಗಿ ಬದಲಾಯಿ ಸುತ್ತಿದ್ದಾರೆಂದು ಹಿಂದೂಗಳು ನಮ್ಮನ್ನು ಅನ್ನುತ್ತಿದ್ದಾರೆ. ವಾಸ್ತವವಾಗಿ ಯಾರನ್ನು

ಯಾರಾಗಿ ನಾವು ಬದಲಾಯಿಸಲಿಲ್ಲ ಆದರೆ ಅಸಲಾದ ದೇವರನ್ನು ತಿಳಿದುಕೊಳ್ಳಿರೆಂದು ಮಾತ್ರ ಹೇಳುತ್ತಿದ್ದೇವೆ. ದೇವರನ್ನು ಕುರಿತು ಹೇಳುವ ಹಕ್ಕು ದೇವರ ಸಂತತಿಯಾದ ಪ್ರತಿ ಮನುಷ್ಯನಿಗೂ ಇದೆ. ಆದ್ದರಿಂದ ಯಾರು ಏನೆಂದರೂ ನಾವು ತಾಳ್ಮೆಯಿಂದ ದೇವರ ವಿಷಯಗಳನ್ನು ತಿಳಿಸುತ್ತಲೇ ಹೋಗುತ್ತಿದ್ದೇವೆ.

ನನ್ನನ್ನು ನೋಡಿ ಅಸೂಯೆಪಡುವವರೆಲ್ಲರಿಗೂ ನಾನೊಂದು ಪ್ರಶ್ನೆ ಹಾಕುತ್ತಿದ್ದೇನೆ. ದೇವರು ಮನುಷ್ಯನಾಗಿ ಭೂಮಿ ಮೇಲೆಗೆ ಬಂದಿದ್ದಾನೆ ಹೋಗಿದ್ದಾನೆ. ಹೋಗುವಾಗ ಪುನಃ ಬರುತ್ತೇನೆಂದು ಸಹ ಹೇಳಿದ್ದಾನೆ. ಒಂದು ಬಾರಿಯೇ ಬಂದಿದ್ದಾನೆ ಪುನಃ ಒಂದು ಬಾರಿಯೇ ಬರುತ್ತಾನೆಂದು ಯಾರಾದರೂ ಹೇಳಬಲ್ಲಿರಾ? ಜ್ಞಾನವಿರುವ ಯಾರೂ ಆ ವಿಧವಾಗಿ ಹೇಳಲಾರನು. ದೇವರು ನನ್ನ ಅವಶ್ಯ ಭೂಮಿ ಮೇಲೆ ಇರುವಾಗಲೆಲ್ಲಾ ಬರುತ್ತೇನೆಂದಿದ್ದಾನೆ. ಧರ್ಮಗಳಿಗೆ ಹಾನಿ ಉಂಟಾದಾಗ ಬರುತ್ತೇನೆಂದಿದ್ದಾನೆ. ಭಗವದ್ಗೀತೆಯಲ್ಲಿ ಆ ಮಾತನ್ನೇ ಹೇಳಿದ್ದಾನೆ. ಬೈಬಲ್‌ನಲ್ಲಿ ಆ ಮಾತನ್ನೇ ಹೇಳಿದ್ದಾನೆ. ದೇವರು ಯಾವಾಗ ಯಾವ ರೂಪದಲ್ಲಾದರೂ ಭೂಮಿ ಮೇಲೆಗೆ ಬಂದು ತನ್ನ ಧರ್ಮಗಳನ್ನು ತಿಳಿಸಿ ಹೋಗುವನು. **ಗೀತೆಯಲ್ಲಿ ಬರುತ್ತೇನೆನ್ನುವಂತೆ ಕೃಷ್ಣನು ಕೃಷ್ಣನಾಗಿಯೇ ಬರಬೇಕೆಂದು, ಬರುತ್ತಾನೆಂದು ಅಂದುಕೊಳ್ಳುವುದು ಹಿಂದೂಗಳ ತಪ್ಪು. ಹಾಗೆಯೇ ಬೈಬಲ್‌ನಲ್ಲಿ ಬರುತ್ತೇನೆಂದು ಹೇಳಿದ್ದಾನಲ್ಲವೆ! ಎಂದು ಯೇಸು ಯೇಸುವಾಗಿ ಬರಬೇಕೆಂದು, ಹಾಗೆಯೇ ಬರುತ್ತಾನೆಂದು ಅಂದುಕೊಳ್ಳುವುದು ಕ್ರೈಸ್ತರ ತಪ್ಪು**. ದೇವರು ಬರಬೇಕೆಂದುಕೊಂಡರೆ ಯಾವಾಗ ಎಲ್ಲಿ ಯಾವ ರೂಪವೆನ್ನುವ ನಿಯಮ ಇರುವುದಿಲ್ಲ. ಆತನನ್ನು ಯಾರೂ ಗುರುತಿಸಲಾರದಂತೆ ಹೊಸ ರೂಪಗಳೊಂದಿಗೆ ಬರುತ್ತಾನೆ. ಆದರೆ ಹಳೆ ಜಾನವೇ ಬೋಧಿಸುತ್ತಾನೆ. ಏಕೆಂದರೆ ಕಾಲಾನುಗುಣವಾಗಿ ಧರ್ಮಗಳು ಬದಲಾಗುವವು ಅಲ್ಲ. ಧರ್ಮಗಳು ಎಂದಿಗೂ ಬದಲಾಗದಿರುವವು ಶಾಸ್ತ್ರಬದ್ಧವಾದವು. ಆದ್ದರಿಂದ ಯಾವಾಗ ಯಾವ ಹೆಸರಿನೊಂದಿಗೆ, ಯಾವ

ರೂಪದೊಂದಿಗೆ, ಯಾವ ಮತದಲ್ಲಿ ಹುಟ್ಟಿದರೂ ಒಂದೇ ಧರ್ಮಗಳನ್ನು ತಿಳಿಸುತ್ತಿರುವನು.

ಆತನು ಬಂದಾಗಲೆಲ್ಲಾ ಭೂಮಿ ಮೇಲೆ ಒಂದು ಮತವನ್ನು ಯಾವಾಗಲೂ ಸೃಷ್ಟಿಸಲಿಲ್ಲ. ಮತವನ್ನು ಕುರಿತು ಬೋಧಿಸಲೂ ಇಲ್ಲ. ದೇವರು ಯಾವೊಂದು ಮತಕ್ಕೂ ಸಂಬಂಧಿಸಿದವನು ಅಲ್ಲ. ಆತನ ಧರ್ಮಗಳನ್ನೇ ಆತನು ತಿಳಿಸಿದ್ದಾನೆ ಹೊರತು ಯಾವ ಮತವನ್ನು ಕುರಿತು ತಿಳಿಸಲಿಲ್ಲ. ಮಾನವರು ಸೃಷ್ಟಿಸಿಕೊಂಡಿರುವವೇ ಮತಗಳು. ದೇವರದ್ದೆಲ್ಲವೂ ಮತಗಳಿಗೆ ಅತೀತವಾದ ಬೋಧನೆಯಾಗಿ ಇರುತ್ತದೆ. ಮತಗಳಲ್ಲಿ ತಪ್ಪುಗಳನ್ನು ಮಾಡುವವರನ್ನು ನೋಡಿ, ಅವರ ತಪ್ಪುಗಳನ್ನು ಬೆರಳೆತ್ತಿ ತೋರಿಸಿ, ನೀನು ಯಾವ ಮತಸ್ಥನಾದರೂ ದೇವರ ಮಾರ್ಗ ಇದು, ಅದನ್ನು ಸಕ್ರಮವಾಗಿ ಆಚರಿಸೆಂದೇ ದೇವರು ತಿಳಿಸುತ್ತಾನೆ. ಆದರೆ ಯಾವೊಂದು ಮತವನ್ನು ಆತನು ಸಮರ್ಥಿಸಲಿಲ್ಲ. ಮನುಷ್ಯರು ತಿಳಿದುಕೊಂಡ ಜ್ಞಾನವನ್ನನುಸರಿಸಿ, ಮಾತನಾಡಿಕೊಳ್ಳುವ ಭಾಷೆಯನ್ನನುಸರಿಸಿ, ನಡೆದುಕೊಳ್ಳುವ ಪದ್ಧತಿಯನ್ನನುಸರಿಸಿ ಮತಗಳು ಏರ್ಪಡಿಸಿಕೊಂಡಿದ್ದಾರೆ ಹೊರತು ಧರ್ಮಗಳಿಂದ ಮತಗಳು ಏರ್ಪಡಲಿಲ್ಲ.

ಪ್ರತಿ ಮತಕ್ಕೂ ಒಂದು ಪದ್ಧತಿ, ಒಂದು ನಿಯಮಿತ ದೇವರ ಆರಾಧನೆ ಇರುತ್ತದೆ. ಆಯಾ ಮತಗಳಲ್ಲಿ ಇರುವವರು ಆ ವಿಧವಾಗಿಯೇ ಆಚರಿಸುವುದು ಪರಿಪಾಟಾಗಿದೆ. ಇವೆಲ್ಲವೂ ಮನುಷ್ಯರ ಆರಾಧನಾ ಕ್ರಮಗಳು ಆದಾಗ ದೇವರು ಮನುಷ್ಯನಾಗಿ ಬಂದಾಗ ಆತನಿಗೆ ಮತಗಳ ಅಭ್ಯಾಸಗಳು ಆಚಾರಗಳು ಇರುವುದಿಲ್ಲ. ಹಾಗೆಯೇ ಆತನು ಮತ್ತೊಬ್ಬ ದೇವರನ್ನು ಆರಾಧಿಸುವುದು ಸಹ ಇರುವುದಿಲ್ಲ. ಮತಗಳು, ಮತಗಳ ಆಚಾರಗಳು, ಮನುಷ್ಯರಿಗೇ ಹೊರತು ದೇವರಿಗೆ ಅಲ್ಲ. ಮನುಷ್ಯರಲ್ಲಿ ಭಕ್ತಿಯಲ್ಲಿರುವ ಒಳಗುಟ್ಟುಗಳನ್ನು ತಿಳಿಸಿ ಸಕ್ರಮ ಮಾರ್ಗದಲ್ಲಿ ನಡೆಸುವುದು ದೇವರ ಕರ್ತವ್ಯ. ಆದ್ದರಿಂದ ಆತನು ಮಾನವನಾಗಿ ಬಂದಾಗ ದೇವರನ್ನು ಕುರಿತು ದೇವರ ಧರ್ಮಗಳ ಕುರಿತೇ ಹೇಳುವನು. ಹಾಗಲ್ಲದೆ ಎಲ್ಲರ ಮನುಷ್ಯರ ಹಾಗೆ ಮತ್ತೊಬ್ಬ ದೇವರ ಪೂಜೆಗಳಲ್ಲಾಗಲೀ ಆರಾಧನೆಗಳಲ್ಲಾಗಲಿ ಮುಳುಗಿ ಹೋಗುವುದಿಲ್ಲ.

ದ್ವಾಪರಯುಗದಲ್ಲಿ ದೇವರು ಕೃಷ್ಣನಾಗಿ ಬಂದಾಗ ಆತನು ಯಾರನ್ನೂ ಪೂಜಿಸಲಿಲ್ಲ. ಸಮಯ ಬಂದಾಗ ಪರಮಾತ್ಮ ಜ್ಞಾನ ಸಂಪೂರ್ಣವಾಗಿ ತಿಳಿಸಿದ್ದಾನೆ. ಹಾಗೆಯೇ ಕಲಿಯುಗದಲ್ಲಿ ಯೇಸುಪ್ರಭುವಾಗಿ ಬಂದಾಗ ಆತನು ಕೂಡ ಯಾರನ್ನೂ ಪೂಜಿಸುತ್ತಾ ಕುಳಿತುಕೊಳ್ಳಲಿಲ್ಲ. ಆತನು ಬೋಧಿಸಬೇಕಾಗಿರುವುದು ಮಾನವರಿಗೆ ತಿಳಿಸಿ ಹೋಗಿದ್ದಾನೆ. ಒಂದು ಜ್ಞಾನ ತಿಳಿಸುವುದರಲ್ಲಿಯೇ ಆತನ ಒಂದು ಘನತೆ ಆತನಲ್ಲಿನ ದೈವತ್ವ ತಿಳಿಯುತ್ತದೆ. ಉಳಿದ ಸಮಯಗಳಲ್ಲಿ ಎಲ್ಲರೊಂದಿಗೆ ಸಮಾನವಾದ ಮನುಷ್ಯನಾಗಿಯೇ ಕಾಣಿಸುತ್ತಿರು ವನು. ಜ್ಞಾನ ತಿಳಿಯದವರು ಆತನನ್ನು ಮನುಷ್ಯನಾಗಿ ಲೆಕ್ಕಿಸಿಕೊಳ್ಳುತ್ತಾರೆ. ಜ್ಞಾನವಿರುವವರು ಆತನನ್ನು ದೇವರಾಗಿ ಗುರುತಿಸುವರು. ಸಂಪೂರ್ಣ ಜ್ಞಾನ ವಿರುವವರು ಆತನು ಭೂಮಿ ಮೇಲೆ ಯಾವಾಗ ಬಂದರೂ ಗುರುತಿಸಬಲ್ಲರು. ಮಾಯಾ ಪ್ರಭಾವವಿರುವವರು ಆತನನ್ನು ಯಾವ ಪರಿಸ್ಥಿತಿಯಲ್ಲಿಯೂ ಗುರುತಿಸಲಾರರು. ಅಷ್ಟೇ ಅಲ್ಲದೆ ಸಾಮಾನ್ಯ ಮನುಷ್ಯರಂತೆ ತಿಳಿದು ಆತನನ್ನು ಕೂಡ ಅವಮಾನ ಮಾಡುವರು, ಕಷ್ಟ ಕೊಡುವರು.

ದೇವರು ಮನುಷ್ಯನ ರೂಪದಲ್ಲಿ ಕೆಲವು ಸಾವಿರ ವರ್ಷ ಗಳಿಗೊಂದು ಬಾರಿ ಭೂಮಿ ಮೇಲೆಗೆ ಬಂದರೆ **ಸರ್ಪಸಂತಾನವಾದ ಮನುಷ್ಯರು ಆತನನ್ನು ಗುರುತಿಸಲಾರರು**. ಗುರುತಿಸಲಾರದಿದ್ದರೂ ಪರವಾಗಿಲ್ಲ ಆದರೆ ಆತನನ್ನೇ ಹಿಂಸಿಸುವುದಕ್ಕೆ ಶುರು ಮಾಡುವರು. ಗುರುತಿಸಲಾರದಷ್ಟು ಮಾತ್ರಕ್ಕೆ ಏಕೆ ಹಿಂಸಿಸುತ್ತಾರೆಂದು ಕೆಲವರಿಗೆ ಪ್ರಶ್ನೆ ಬರಬಹುದು. ಸಹಪಾಟಿ ಮಾನವರನ್ನು ಯಾರೂ ಹಿಂಸಿಸಲಿಲ್ಲವೇ ಎಂದು ಕೇಳಬಹುದು. ಅದಕ್ಕೆ ಸಮಾಧಾನವೇನೆಂದರೆ! ದೇವರು ಮನುಷ್ಯನಾಗಿ ಬಂದರೆ ಸಾಮಾನ್ಯ ಮನುಷ್ಯನಂತೆ ಆತನು ಜೀವಿಸುವುದಿಲ್ಲ. ಆತನು ಜ್ಞಾನ ತಿಳಿಸುವುದಕ್ಕೆ ಬಂದಿದ್ದಾನೆ ಆದ್ದರಿಂದ ದೈವಜ್ಞಾನವನ್ನು ಧರ್ಮಸಹಿತವಾಗಿ ತಿಳಿಸುವನು. ಹಾಗಿರುವಾಗ ಅಧರ್ಮ ಪರರಾದ ಅಜ್ಞಾನಿಗಳಿಗೆ, ಮಾಯಾಜ್ಞಾನ ಇರುವವರಿಗೆ ಆತನ ಮೇಲೆ ದ್ವೇಷ ಉಂಟಾಗುತ್ತದೆ. ಆ ದ್ವೇಷವೇ ಮನುಷ್ಯರಿಂದ ಆತನನ್ನು ಹಿಂಸಿಸುವಂತೆ

ಮಾಡುತ್ತಿದೆ. ಏನೂ ಹೇಳದೆಹೋದರೇ ಯಾವ ವಿರೋಧ ಇರುವುದಿಲ್ಲ. ಮನುಷ್ಯರಲ್ಲಿನ ಅಧರ್ಮಗಳನ್ನು ಬೆರಳೆತ್ತಿ ತೋರಿಸುವುದರಿಂದ ತಾವು ಧರ್ಮಪರರೆಂದುಕೊಳ್ಳುವ ಅಧರ್ಮಪರರೆಲ್ಲರಿಗೂ ಕೋಪವೇ ಬರುತ್ತದೆ. ಆದ್ದರಿಂದ ಆತನು ಬಂದ ಪ್ರತಿ ಜನ್ಮದಲ್ಲಿಯೂ ಮಾನವರಿಂದ ಅಗೌರವ ಕ್ಕೊಳಗಾಗಿದ್ದಾನೆ. **"ಅವಜಾನನ್ತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್"** ಮನುಷ್ಯನಾಗಿ ಶರೀರವನ್ನು ಧರಿಸಿದ ನನ್ನನ್ನು ಮೂಢಜನರು ಅವಮಾನಿಸುವರು ಎಂದು ಗೀತೆಯಲ್ಲಿ ಸಹ ಹೇಳಿದ್ದಾನೆ. ಆ ವಿಧವಾಗಿಯೇ ಯೇಸು ಜನ್ಮದಲ್ಲಿ ಆತನು ಬೋಧಿಸುವ ಜ್ಞಾನವನ್ನು ನೋಡಿ ಸಹಿಸಲಾರದವರು ಈತನು ನಮಗಿಂತ ದೊಡ್ಡವನಾ ಎಂದು ಕೊನೆಗೆ ಮರಣಶಿಕ್ಷೆಯೇ ವಿಧಿಸಿದ್ದಾರೆ. ಜ್ಞಾನಿಗಳೆಂದು ಕೊಳ್ಳುವ ಮತಾಚಾರರಿಂದ ಅಲ್ಲವೆ ಆತನು ಮರಣಿಸಿರುವುದು. **ಸರ್ಪ ಸಂತಾನ ಅಜ್ಞಾನವೆನ್ನುವ ವಿಷ ಹೊಂದಿರುತ್ತದೆ.** ಆದ್ದರಿಂದ ಪ್ರಭು ಜನ್ಮ ಸರ್ಪಸಂತಾನದ ಕೈಯ್ಯಲ್ಲೇ ಅಂತ್ಯವಾಗಿದೆ.

ದೇವರ ವಿಷಯ ದೇವರಿಗೇ ತಿಳಿದಿದೆ, ಮನುಷ್ಯರಿಗೆ ಯಾವ ಮಾತ್ರ ತಿಳಿದಿಲ್ಲ. ದೇವರು ತಿಳಿಸಿದರೇನೆ ಮನುಷ್ಯನಿಗೆ ದೇವರ ಧರ್ಮಗಳು ತಿಳಿಯುತ್ತವೆ. ಯಾವ ಮನುಷ್ಯ ಸ್ವತಃವಾಗಿ ದೇವರ ವಿಷಯಗಳನ್ನು ತಿಳಿಯಲಾರನು. ಆದ್ದರಿಂದ ವಿಶ್ವವೆಲ್ಲಾ ಅಣುವಣುವಿನಲ್ಲಿ ವ್ಯಾಪಿಸಿದ ದೈವದಿಂದ ಸ್ವಲ್ಪ ಭಾಗ ಅಥವಾ ಸ್ವಲ್ಪ ಸಾಂದ್ರತೆ ಬಂದು ಮನುಷ್ಯನಾಗಿ ಹುಟ್ಟುತ್ತಿದೆ. ಪ್ರಪಂಚದಲ್ಲಿ ಸ್ವಲ್ಪ ಕಾಲ ಬದುಕುವುದಕ್ಕೆ ಒಂದು ವಿಧಾನ ಬೇಕು. ಅದನ್ನೇ ಕರ್ಮ ಎನ್ನುತ್ತಿದ್ದೇವೆ. ಮನುಷ್ಯ ಹುಟ್ಟುವಿಕೆಗೆ ಕಾರಣವಾದುದನ್ನೇ ಕರ್ಮ ಎನ್ನುತ್ತಿದ್ದೇವೆ. ದೇವರಿಗೆ ಕರ್ಮ ಇರುವುದಿಲ್ಲ. ಆದ್ದರಿಂದ ದೇವರೇ ಒಂದು ಜನ್ಮಕ್ಕೆ ಬೇಕಾದ ಕರ್ಮವನ್ನು ಸೃಷ್ಠಿಸಿಕೊಂಡು ಹುಟ್ಟುತ್ತಿದ್ದಾನೆ. ಅಂತಹವನನ್ನೇ **ಸ್ವಯಂಭು** ಎನ್ನುತ್ತಿದ್ದೇವೆ. ಸ್ವಯಂಭು ಎಂದರೆ ಕರ್ಮದಿಂದ ಅಲ್ಲದೆ ತನಗೆ ತಾನಾಗಿ ಹುಟ್ಟಿದವನೆಂದು ಅರ್ಥ. ಆ ವಿಧವಾಗಿ ಹುಟ್ಟಿದವನನ್ನೇ ಭಗವಂತನೆಂದು ಆಧ್ಯಾತ್ಮಿಕ ಭಾಷೆಯಲ್ಲಿ ಕರೆಯುತ್ತಿದ್ದೇವೆ. ಎಷ್ಟೋ ಬಾರಿ ದೇವರು ಭಗವಂತನಾಗಿ ಭೂಮಿ ಮೇಲೆ

ಬಂದುಹೋಗಿರಬಹುದು. ಭೂಮಿ ಮೇಲೆಗೆ ಧರ್ಮಗಳ ಪುನರುದ್ಧಾರ ಎಷ್ಟು ಬಾರಿ ನಡೆದಿದೆಯೋ ತಿಳಿದಿಲ್ಲ. ಪೂರ್ವದಲ್ಲಿ ಲಕ್ಷಗಳ ವರ್ಷಗಳ ಹಿಂದೆ ನಮಗೆ ತಿಳಿಯದ ರಹಸ್ಯಗಳು ಎಷ್ಟೋ ಕಳೆದುಹೋಗಿವೆ. ಕೆಲವು ಸಾವಿರ ವರ್ಷಗಳಿಂದ ಮಾತ್ರವೇ ಚರಿತ್ರೆಗಳು ಬರೆಯಲ್ಪಟ್ಟಿವೆ. ಆದ್ದರಿಂದ ಕೆಲವು ಗತ ವಿಷಯಗಳು, ಕೆಲವರ ಚರಿತ್ರೆಗಳು ತಿಳಿದುಕೊಳ್ಳುತ್ತಿದ್ದೇವೆ. ಚರಿತ್ರೆಯನ್ನು ಪರೀಕ್ಷಿಸಿ ನೋಡಿದರೇ ದೇವರು ಮನುಷ್ಯನಾಗಿ ಭೂಮಿ ಮೇಲೆಗೆ ಬಂದಿರುವ ಸಂದರ್ಭಗಳು ಕಾಣಿಸುತ್ತಿವೆ.

**ದೇವರು ಭೂಗೋಳದ ಮೇಲೆ ಆಗಾಗ ಮನುಷ್ಯನಾಗಿ ಉದಯಿಸುತ್ತಿದ್ದಾನೆಂದು, ಮನುಷ್ಯನಾಗಿಯೇ ಅಸ್ತಮಿಸುತ್ತಿದ್ದಾನೆಂದು ತಿಳಿಯುತ್ತಿದೆ.** ನಮಗಿರುವ ಜ್ಞಾನದಿಂದ ಆಳವಾಗಿ ಯೋಚಿಸಿ ನೋಡಿದರೆ ಐದುಸಾವಿರ ವರ್ಷಗಳ ಪೂರ್ವದಲ್ಲಿ ಭಾರತದೇಶದಲ್ಲಿಯೂ, ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಇಜ್ರಾಯಿಲ್ ದೇಶದಲ್ಲಿ ಹುಟ್ಟಿದಂತೆ ತಿಳಿಯುತ್ತಿದೆ. ಅಂದಿನ ಇಜ್ರಯೇಲ್ ದೇಶದಲ್ಲಿ ದೈವ ಯೇಸುಪ್ರಭುವಾಗಿ ಹುಟ್ಟಿದೆ, ಮೊದಲೇ ತಾನು ನಿರ್ಣಯಿಸಿಕೊಂಡ ಕರ್ಮ ಪ್ರಕಾರ ಕೇವಲ ಮುವ್ವತ್ತು ಮೂರು ವರ್ಷಗಳು ಭೂಮಿ ಮೇಲೆ ಇದ್ದು, ಮನುಷ್ಯರ ನಡುವೆ ಸಂಚರಿಸಿ ದೈವಾಂಶ ಹೊರಟು ಹೋಗಿದೆ. ಮುವತ್ತು ಮೂರು ವರ್ಷಗಳಲ್ಲಿ ಮುವತ್ತು ವರ್ಷಗಳು ಸಾಧಾರಣ ಜೀವಾತ್ಮವಾಗಿ ಜೀವಿಸಿದ ಪ್ರಭು, ನಂತರ ಮೂರು ವರ್ಷಗಳು ಆಗಾಗ ಆತ್ಮವಾಗಿ ಜೀವಿಸುತ್ತಾ ಆತ್ಮಜ್ಞಾನವನ್ನು ಬೋಧಿಸಿದ್ದಾನೆ.

ಇಲ್ಲಿ ಕೆಲವರಿಗೆ ಒಂದು ಪ್ರಶ್ನೆ ಬರಬಹುದು. ಅದೇನೆಂದರೇ! ದೈವ ಭೂಮಿ ಮೇಲೆ ಮನುಷ್ಯನಾಗಿ ಹುಟ್ಟಿದೆ ಎನ್ನುತ್ತಿದ್ದಾರೆ. ದೈವ (ದೇವರು) ವಿಶ್ವವೆಲ್ಲಾ ಅಣುವಣುವಿನಲ್ಲಿ ವ್ಯಾಪಿಸಿದ್ದಾನೆಂದು ಹೇಳುತ್ತಿದ್ದಾರೆ. ಮನುಷ್ಯನಾಗಿ ಹುಟ್ಟಿದಾಗ ವಿಶ್ವವೆಲ್ಲಾ ಇಲ್ಲದಂತೆ ಹೋಗುತ್ತಿದ್ದಾನಾ ಎನ್ನುವುದು ಪ್ರಶ್ನೆ. ಅಷ್ಟೇ ಅಲ್ಲದೆ ಎಲ್ಲರಲ್ಲೂ ಸಹ ಇದ್ದಾನೆಂಬ ದೇವರು ಭೂಮಿ ಮೇಲೆ ಭಗವಂತನಾಗಿ ಹುಟ್ಟಿದ ನಂತರ ಎಲ್ಲರಲ್ಲಿ ಇಲ್ಲದಂತೆ ಹೋಗುತ್ತಾನಾ ಎನ್ನುವುದು ಸಹ

ಪ್ರಶ್ನೆಯೇ. ಇವುಗಳಿಗೆ ಉತ್ತರವನ್ನು ನೋಡೋಣ. ಸಮುದ್ರದಲ್ಲಿ ನೀರು ಅಖಂಡವಾಗಿ ಇದೆ. ಅದೇ ನೀರನ್ನು ಒಂದು ಚೆಂಬಿನೊಳಗೋ ಅಥವಾ ಒಂದು ಪಾತ್ರೆಯೊಳಗೋ ತೆಗೆದುಕೊಂಡಿದ್ದೇವೆಂದುಕೊಳ್ಳಿ. ತೆಗೆದುಕೊಂಡ ಪಾತ್ರೆಯಲ್ಲಿ ನೀರಿದೆ. ಅಷ್ಟು ಮಾತ್ರಕ್ಕೆ ಸಮುದ್ರದಲ್ಲಿ ನೀರು ಇಲ್ಲದಂತೆ ಹೋಗಲಿಲ್ಲ ಅಲ್ಲವೆ! ಪಾತ್ರೆಯಲ್ಲಿನ ನೀರನ್ನು ಖಂಡವಾದ ನೀರು ಎನ್ನುತ್ತಿದ್ದೇವೆ. ಸಮುದ್ರದಲ್ಲಿನ ನೀರನ್ನು ಅಖಂಡವಾದ ನೀರು ಎನ್ನುತ್ತಿದ್ದೇವೆ. ಪಾತ್ರೆಯಲ್ಲಿನವು ನೀರೇ ಸಮುದ್ರದಲ್ಲಿನವು ನೀರೇ. ನೀರಿನಲ್ಲಿ ಖಂಡಿಸಲ್ಪಟ್ಟಿರುವುದು, ಖಂಡಿಸಲ್ಪಡದಿರುವುದೆನ್ನುವ ವ್ಯತ್ಯಾಸ ಹೊರತು ನೀರಿನಲ್ಲಿನ ಧರ್ಮಗಳಲ್ಲಿ ಯಾವ ವ್ಯತ್ಯಾಸ ಇಲ್ಲ. ಹಾಗೆಯೇ ದೇವರನ್ನು ಸಮುದ್ರದಂತಹವನನ್ನಾಗಿ ಭಾವಿಸಿಕೊಳ್ಳೋಣ. ಸಮುದ್ರದಿಂದ ಪಾತ್ರೆಯೊಳಗಿನ ನೀರು ಬೇರೆಯಾದಂತೆ ದೇವರಿಂದ ಭಗವಂತನು ಬೇರೆಯಾಗಿದ್ದಾನೆ. ಸಮುದ್ರದಲ್ಲಿನ ನೀರು ಪಾತ್ರೆಯಲ್ಲಿನ ನೀರು ಒಂದೇ ಆದಂತೆ ದೇವರು ಭಗವಂತನು ಇಬ್ಬರೂ ಒಂದೇ ಆಗುತ್ತಾರೆ. ಪಾತ್ರೆಯೊಳಗೆ ನೀರು ತೆಗೆದುಕೊಂಡಷ್ಟು ಮಾತ್ರಕ್ಕೆ ಸಮುದ್ರದಲ್ಲಿ ಬದಲಾವಣೆ ಬರುವುದಿಲ್ಲ. ಸಮುದ್ರದಲ್ಲಿ ನೀರು ಇಲ್ಲದಂತೆ ಹೋಗುವುದಿಲ್ಲ. ಹಾಗೆಯೇ ದೇವರಲ್ಲಿನ ಸ್ವಲ್ಪ ಅಂಶ ಭಗವಂತನಾಗಿ ಹುಟ್ಟಿದಾಗ ದೇವರು ಮೊದಲು ಹೇಗೆ ವ್ಯಾಪಿಸಿ ಇದ್ದಾನೋ ಹಾಗೇ ಇರುತ್ತಾನೆ. ದೇವರು ಭಗವಂತನಾಗಿ ಬಂದಾಗ ದೇವರಲ್ಲಾಗಲೀ, ದೇವರ ಧರ್ಮಗಳಲ್ಲಾಗಲೀ, ದೇವರ ವ್ಯಾಪಕ ದಲ್ಲಾಗಲೀ ಎಂತಹ ಬದಲಾವಣೆ ಇರುವುದಿಲ್ಲವೆಂದು ತಿಳಿಯಬೇಕು. ದೇವರ ಅಂಶ ಭಗವಂತನಾಗುತ್ತಿದೆ ಆದರೆ ದೇವರೆಲ್ಲಾ ಭಗವಂತನು ಆಗಲಿಲ್ಲ ಅಲ್ಲವೆ! ಅಂಶ ಎಂದರೆ ಸ್ವಲ್ಪ ಭಾಗವೇ ಆದರೆ ದೇವರೆಲ್ಲಾ ಅಲ್ಲ. ಸ್ವಲ್ಪ ಭಾಗವಾದರೂ ಎಲ್ಲಾ ಆದರೂ ಒಂದೇ ಧರ್ಮವನ್ನು ಹೊಂದಿದೆ. ಆದ್ದರಿಂದ ದೇವರ ಅಂಶ ಭೂಮಿ ಮೇಲೆ ಹುಟ್ಟಿದಾಗ ದೇವರೇ ಹುಟ್ಟಿದ್ದಾನೆನ್ನುವುದರಲ್ಲಿ ತಪ್ಪಿಲ್ಲ. ಆದ್ದರಿಂದ ಯೇಸನ್ನು ದೇವರು ಎನ್ನುವುದರಲ್ಲಿ ತಪ್ಪಿಲ್ಲ.

ಇಲ್ಲಿ ಕೆಲವರಿಗೆ ಮತ್ತೊಂದು ಪ್ರಶ್ನೆ ಬರಬಹುದು. ಅದೇನೆಂದರೇ! ಯೇಸುಪ್ರಭು ದೇವರೆಂದು ನೀವಂದಹಾಗೆ ದೇವರಾದರೇ ಮನುಷ್ಯರು ಹಿಂಸಿಸಿದಾಗ ಏಕೆ ಬಾಧೆಪಟ್ಟಿದ್ದಾನೆ? ಮನುಷ್ಯರಿಂದ ಏಕೆ ಹಿಂಸಿಸಲ್ಪಟ್ಟಿದ್ದಾನೆ? ಮನುಷ್ಯರಿಂದ ಏಕೆ ಅವಮಾನಿಸಲ್ಪಡಬೇಕು? ಮನುಷ್ಯರು ತನ್ನ ಬಗ್ಗೆ ಕೆಟ್ಟದಾಗಿ ಪ್ರವರ್ತಿಸಿದಾಗ ತಾನ್ಯಾರೋ ತಿಳಿಸಿ, ತನ್ನ ಮಹಿಮೆಯಿಂದ ಅವರನ್ನು ಶಿಕ್ಷಿಸಬಹುದಲ್ಲವೆ! ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರವೇನೆಂದರೆ! ಈ ವಿಷಯ ಅರ್ಥವಾಗಬೇಕೆಂದರೇ ಮೊದಲು ನಾವೊಂದು ದೈವ ರಹಸ್ಯ ತಿಳಿದುಕೊಳ್ಳಬೇಕು. ಒಬ್ಬ ಸಾಧಾರಣ ವ್ಯಕ್ತಿ ಶರೀರದಲ್ಲಿ ಮೂರು ಆತ್ಮಗಳು ಇವೆ. ಒಂದು ಜೀವಾತ್ಮ, ಎರಡು ಆತ್ಮ, ಮೂರು ಪರಮಾತ್ಮ. ಈ ಮೂರು ಆತ್ಮಗ್ಗಳಲ್ಲಿ ಜೀವಾತ್ಮ ಆತ್ಮ ಎರಡು ಶರೀರದೊಳಗೆ ನಿವಾಸಿಸುತ್ತಿವೆ. ಶರೀರದ ಹೊರಗೆ ಯಾವ ಮಾತ್ರ ಇಲ್ಲ. ಮೂರನೆಯದಾದ ಪರಮಾತ್ಮ ಶರೀರದ ಒಳಗೆ ಮತ್ತು ಶರೀರದ ಹೊರಗೆ ಎಲ್ಲಾಕಡೆ ಅಣುವಣುವಿನಲ್ಲೂ ವ್ಯಾಪಿಸಿದೆ. ಪರಮಾತ್ಮ ಶರೀರದ ಹೊರಗಾಗಲೀ ಶರೀರದ ಒಳಗಾಗಲೀ ಎಂತಹ ಕೆಲಸ ಮಾಡದಂತೆ ಸುಮ್ಮನೆ ಇದೆ. ಎರಡನೆಯದಾದ ಆತ್ಮ ಶರೀರದಲ್ಲಿ ನಡೆಯುವ ಕಾರ್ಯಗಳೆಲ್ಲವನ್ನೂ ಮಾಡುತ್ತಿದೆ. ಮೊದಲನೆಯದಾದ ಜೀವಾತ್ಮ ಯಾವ ಕೆಲಸ ಮಾಡದೆ ಕೇವಲ ಸುಖ ದುಃಖ ಎನ್ನುವ ಎರಡು ಅನುಭೂತಿಗಳನ್ನು ಮಾತ್ರ ಅನುಭವಿಸುತ್ತಿದೆ. ಬಹಳ ಮಂದಿ ಜೀವಾತ್ಮಗಳಾದ ನಾವೇ ಎಲ್ಲಾ ಮಾಡುತ್ತಿದ್ದೇವೆಂದು ಅಂದುಕೊಳ್ಳುತ್ತಿದ್ದಾರೆ. ಹಾಗೆ ಯಾವ ಶರೀರದಲ್ಲೂ ನಡೆಯುತ್ತಿಲ್ಲ. ನಮಗೆ ತಿಳಿಯದಂತೆ ನಮ್ಮ ಶರೀರದಲ್ಲಿ ನಮ್ಮೊಂದಿಗೆ ಇರುವ ಆತ್ಮವೇ ಎಲ್ಲ ಕೆಲಸಗಳು ಮಾಡುತ್ತಿದೆ. ಆತ್ಮಕೂಡ ತನ್ನ ಇಷ್ಟಾನುಸಾರವಾಗಿ ಕೆಲಸ ಮಾಡುತ್ತಿಲ್ಲ. ಕರ್ಮ ಎನ್ನುವ ಒಂದು ಲೆಕ್ಕಾಚಾರದ ಪ್ರಕಾರ ಮಾಡುತ್ತಿದೆ. ಕೆಲಸಗಳಿಗೆ ಕಾರಣ ಕರ್ಮ ಎನ್ನುವ ಒಂದು ವಿಧಾನ ಇದೆ. ಕರ್ಮ ಎನ್ನುವುದರ ಪ್ರಕಾರ ಜೀವಿಯು ಸುಖ ದುಃಖ ಎನ್ನುವ ಅನುಭೂತಿಗಳನ್ನು ಅನುಭವಿಸಬೇಕು. ಜೀವಿಯು ಒಳಗೆ ಸುಖಃದುಃಖಗಳನ್ನು ಅನುಭವಿಸಬೇಕೆಂದರೇ ಹೊರಗೆ ಆತ್ಮ ಕೆಲಸ ಮಾಡುತ್ತಿದೆ. ಅಷ್ಟೇ ಅಲ್ಲದೆ ಶರೀರದೊಳಗೆ ಆಹಾರವನ್ನು ಜೀರ್ಣ

ಮಾಡುವುದು, ಗುಂಡಿಗೆಯನ್ನು ಕದಲಿಸುವುದು, ರಕ್ತದಿಂದ ಮೂತ್ರವನ್ನು ಬೆವರನ್ನು ಬೇರೆ ಮಾಡುವುದು ಮುಂತಾದ ಶರೀರಾಂತರ್ಗತ ಕಾರ್ಯಗಳೆಲ್ಲವೂ ಮಾಡುತ್ತಿದೆ. ಆತ್ಮ ಎಲ್ಲ ಕಾರ್ಯಗಳು ಮಾಡುವುದರಿಂದ ಜೀವಾತ್ಮ ಶರೀರದಲ್ಲಿ ಜೀವಿಸುತ್ತಿದೆ. ಶರೀರದೊಳಗಿರುವ ಜೀವಾತ್ಮನಿಗೆ ಯಾವ ಕೆಲಸ ಇಲ್ಲದೆ ಕೇವಲ ಅನುಭವಗಳನ್ನು ಮಾತ್ರ ಅನುಭವಿಸುತ್ತಿದೆ. ಇದೆಲ್ಲವೂ ಪ್ರತಿ ಮನುಷ್ಯನ ಶರೀರದಲ್ಲಿ ಎಂದಿಗೂ ಬದಲಾಗದಂತೆ ಶಾಸನಬದ್ಧವಾದ ವಿಧಾನವಾಗಿ ಇದೆ.

ದೇವರು ಮನುಷ್ಯನಾಗಿ ಹುಟ್ಟಿದರೂ ಆ ಮನುಷ್ಯನ ಶರೀರದಲ್ಲಿ ಕೂಡ ಎಲ್ಲರಲ್ಲಿರುವ ವಿಧಾನವೇ ನಡೆಯುತ್ತಿರುತ್ತದೆ. ಉಳಿದ ಶರೀರಗಳಲ್ಲಿಇದ್ದಂತೆ ಆ ಶರೀರದಲ್ಲಿ ಪರಮಾತ್ಮ ಇರಬೇಕಾದ್ದೇ, ಆತ್ಮ ಎಲ್ಲ ಕೆಲಸಗಳು ಮಾಡಬೇಕಾದ್ದೇ, ಜೀವಾತ್ಮ ಅನುಭವಿಸಬೇಕಾದ್ದೇ. ದೇವರು ಮನುಷ್ಯನಾಗಿ ಬಂದರೂ ಒಳಗೆ ನಡೆಯುವ ವಿಧಾನ ಅದೇ. ದೇವರು ಯೇಸುವಾಗಿ ಬಂದಾಗ ಕೂಡಾ ಅದೇ ನಡೆದಿದೆ. ಸಾಧಾರಣ ಮನುಷ್ಯನಿಗೂ ಆತನಿಗೂ ಶರೀರ ಯಂತ್ರಾಂಗದಲ್ಲಿ ಎಂತಹ ವ್ಯತ್ಯಾಸವಿಲ್ಲ. ಆದ್ದರಿಂದ ಆತನು ಎಲ್ಲಾ ಕಷ್ಟಗಳನ್ನು ಸುಖಗಳನ್ನು ಜೀವಿಯಾಗಿಯೇ ಅನುಭವಿಸಿದ್ದಾನೆ. ಯೇಸುಪ್ರಭುವಿಗೆ ಕೈಯ್ಯಲ್ಲಿ ಮೊಳೆಗಳು ಹೊಡೆದಾಗಾಗಲಿ, ಆತನನ್ನು ಛಡಿಯಿಂದ ಹೊಡೆದಾಗಾಗಲಿ ಆ ಬಾಧೆ ಗಳೆಲ್ಲವನ್ನೂ ಅನುಭವಿಸಬೇಕಾಗಿ ಬಂದಿದೆ. ಆ ಕೆಲಸಗಳು ನಡೆಯುವುದಕ್ಕೆ ಆ ವಿಧವಾಗಿ ಅನುಭವಿಸುವುದಕ್ಕೆ ತಕ್ಕ ಕರ್ಮವನ್ನು ಆತನೇ ಸೃಷ್ಟಿಸಿಕೊಂಡು ಭೂಮಿ ಮೇಲಕ್ಕೆ ಒಬ್ಬ ಮನುಷ್ಯನಾಗಿ ಬಂದಿದ್ದಾನೆ. ಇದು ಆತನ ಸಾಧಾರಣ ಜೀವನವಾದಾಗ ಆತನಿಗೂ ನಮಗೂ ಏನು ವ್ಯತ್ಯಾಸ ಎಂದು ಕೇಳಿದರೇ ಒಂದೇ ಒಂದು ವ್ಯತ್ಯಾಸ ಇದೆ. ಅದೇನೆಂದರೆ! ಶರೀರದಲ್ಲಿ ಕೆಲಸ ಮಾಡುವುದು ಒಂದೇ ಒಂದು ಆತ್ಮ ಎಂದು ತಿಳಿದುಕೊಂಡಿದ್ದೇವಲ್ಲವೆ! ಮನುಷ್ಯನಾಗಿ ಬಂದಿರುವ ಭಗವಂತನ ಶರೀರದಲ್ಲಿ ಕೂಡ ಹಾಗೇ ಇರುತ್ತದೆಂದು ಅಂದುಕೊಂಡಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಒಂದು ವಿಚಿತ್ರವಾದ ವ್ಯತ್ಯಾಸ ಇದೆ. ಭಗವಂತನ ಶರೀರದಲ್ಲಿ ಕೆಲವು ಸಮಯಗಳಲ್ಲಿ ಸಾಧಾರಣ

ಶರೀರದಲ್ಲಿ ಇರುವಂತೆ ಮೂರು ಆತ್ಮಗಳು ತಮ್ಮ ತಮ್ಮ ಕೆಲಸಗಳು ಮಾಡದೆ ಬೇರೆ ವಿಧಾನವಾಗಿ ಬದಲಾಗುತ್ತದೆ. ಜೀವಾತ್ಮ ತಟಸ್ಥವಾಗಿ ಯಾವ ಅನುಭವಗಳು ಅನುಭವಿಸುವ ಸ್ಥಿತಿಯಲ್ಲಿ ಇಲ್ಲದಂತೆ ನಿಂತುಹೋಗಿ ಜೀವಾತ್ಮ ಸ್ಥಿತಿಯಲ್ಲಿ ಆತ್ಮ ನಿಂತುಹೋಗುತ್ತದೆ. ಆಗ ಆತ್ಮವಾಗಿ ಮಾತನಾಡಿದ ಮಾತುಗಳು ಪೂರ್ತಿ ಆಧ್ಯಾತ್ಮಿಕವಾಗಿ ಇರುತ್ತವೆ. ಅಸಲಾದ ಆಧ್ಯಾತ್ಮಿಕ ವಿಷಯಗಳು ದೇವರ ಧರ್ಮಗಳು ಆತ್ಮ ಸ್ವತಃವಾಗಿ ಹೇಳಿದಾಗಲೇ ತಿಳಿಯುತ್ತದೆ. ಕೆಲವು ಸಂದರ್ಭಗಳಲ್ಲಿ ಭಗವಂತನ ಶರೀರದಲ್ಲಿ ಆತ್ಮ ಸ್ವತಃವಾಗಿ ಜ್ಞಾನವನ್ನು ಹೇಳುತ್ತದೆ. ಅಷ್ಟೇ ಅಲ್ಲದೆ ಬಹು ಅಪರೂಪವಾಗಿ ಶರೀರದಲ್ಲಿ ಆತ್ಮ ಜೀವಾತ್ಮಗಳು ತಟಸ್ಥವಾಗಿ ನಿಂತುಹೋದಾಗ ಪರಮಾತ್ಮನೇ ಹೇಳುವುದು ಸಹ ಇದೆ. ಭಗವಂತನ ಜೀವನದಲ್ಲಿ ಒಂದು ಅಥವಾ ಎರಡು ಸಲ ಅಂತಹ ಸಂದರ್ಭಗಳು ನಡೆಯಬಹುದು. ಯೇಸುಪ್ರಭು ಜೀವನದಲ್ಲಿ, ಕೃಷ್ಣನ ಜೀವನದಲ್ಲಿ ಆ ವಿಧವಾಗಿ ಪರಮಾತ್ಮನೇ ಮಾತನಾಡಿದ ಸಂದರ್ಭಗಳು ಇವೆ. ಪರಮಾತ್ಮ ಮಾತನಾಡುವಾಗ ಆ ಧ್ವನಿಗೆ ಪ್ರಕೃತಿಯೆಲ್ಲಾ ಒಳಗಾಗಿರುತ್ತದೆ. ಹಾಗೆಯೇ ಆತ್ಮ ಮಾತನಾಡುವಾಗ ಅಸಲಾದ ಜ್ಞಾನವೆಲ್ಲಾ ಆತನಿಗೆ ಒಳಗಾಗಿರುತ್ತದೆ. 1) ಆದ್ದರಿಂದ ಇವರ ಜೀವನದಲ್ಲಿ ಪ್ರಕೃತಿಯನ್ನೇ ಅಜ್ಞಾಪಿಸಿದ ಪರಮಾತ್ಮ ನುಡಿಗಳು ಇವೆ. 2) ಆತ್ಮಜ್ಞಾನವನ್ನು ಸತ್ಯ ಸಮೇತವಾಗಿ ತಿಳಿಸಿ ಹೇಳಿದಂತಹ ಆತ್ಮ ಮಾತುಗಳು ಇವೆ. 3) ಸುಖದುಃಖಗಳನ್ನು ಅನುಭವಿಸಿದ ಜೀವಾತ್ಮ ಅನುಭವಗಳು ಇವೆ. ಪ್ರಭು ಜೀವನದಲ್ಲಿ ತುಫಾನಿನೊಂದಿಗೆ ವಿಜೃಂಭಿಸಿದ ಸಮುದ್ರವನ್ನು ಅಡಗಿ ಹೋಗೆಂದಾಗ, ತಾತ್ಕಾಲಿಕವಾಗಿ ಮರಣಿಸಿದ ಲಾಜರ್‌ನನ್ನು ಬದುಕಿಸಿದಾಗ ಸ್ವತಃವಾಗಿ ಪರಮಾತ್ಮನೇ ನುಡಿದಿದ್ದಾನೆಂದು ತಿಳಿಯುತ್ತಿದೆ. ಆ ಮಾತುಗಳನ್ನನು ಸರಿಸಿ ಪ್ರಕೃತಿ ಕೂಡ ನಡೆದುಕೊಂಡಂತೆ ತಿಳಿಯುತ್ತಿದೆ. ಆತನು ಆತ್ಮವಾಗಿ ಸ್ವಚ್ಛವಾದ ಜ್ಞಾನವನ್ನು ತಿಳಿಸಿದಂತೆ ಇದೆ. ಅದೇ ರೀತಿಯಾಗಿ ಜೀವಾತ್ಮವಾಗಿ ಅನೇಕ ಸುಖ ದುಃಖಗಳು ಅನುಭವಿಸಿದಂತೆ ಇದೆ. ಈ ವಿಧವಾಗಿಯೇ ಶ್ರೀಕೃಷ್ಣನ ಜೀವನದಲ್ಲಿ ಕೂಡ ನಡೆದಿದೆ. ತಾತ್ಕಾಲಿಕವಾಗಿ ಮರಣಿಸಿದ ಸಾಂದೀಪನ ಕುಮಾರನನ್ನು ಭಗವಂತನು ಬದುಕಿಸಿದ್ದಾನೆ, ವಿಶ್ವರೂಪವನ್ನು ತೋರಿಸಿ ತಾನು

ಪರಮಾತ್ಮನೆಂದು ತಿಳಿಸಿದ ಸಂದರ್ಭ ಕೂಡ ಇದೆ. ಆತ್ಮವಾಗಿ ಸಂಪೂರ್ಣ ಜ್ಞಾನವಾದ ಗೀತೆಯನ್ನೇ ಬೋಧಿಸಿದ್ದಾನೆ. ಉಳಿದ ಸಮಯಗಳಲ್ಲಿ ಜೀವಾತ್ಮವಾಗಿ ಎಲ್ಲ ಅನುಭವಗಳನ್ನು ಅನುಭವಿಸಿದ್ದಾನೆ. ಕೇವಲ ಒಬ್ಬ ಭಗವಂತನ ಶರೀರದಲ್ಲಿ ಮಾತ್ರವೇ ಕೆಲವು ಸಮಯಗಳಲ್ಲಿ ಮೂರು ಆತ್ಮಗಳ ಆಟ ಸಾಗುತ್ತಿದೆ. ದೈವವು ಶರೀರ ಧರಿಸುವುದು ಬಹು ಅಪರೂಪವಾಗಿ ಸಾವಿರ ವರ್ಷಗಳಿಗೋ ಲಕ್ಷಗಳ ವರ್ಷಗಳಿಗೋ ನಡೆಯುತ್ತಿದೆ. ದೇವರು ಭೂಮಿ ಮೇಲೆ ಶರೀರ ಧರಿಸಿ ಹುಟ್ಟಿದಾಗ ಹೆಚ್ಚಿನ ಕಾಲ ಜೀವಾತ್ಮನ ಹಾಗೆ ಎಲ್ಲರಂತೆ ಇದ್ದು, ಅವಶ್ಯ ಬಂದಾಗ ಯಾವುದೋ ಸ್ವಲ್ಪ ಸಮಯದಲ್ಲಿ ಮಾತ್ರ ವರ್ಷದಲ್ಲಿ ಕೆಲವು ಬಾರಿ ಆತ್ಮವಾಗಿ ಮಾತನಾಡುತ್ತದೆ. ಪರಮಾತ್ಮವಾಗಿ ಜೀವನದಲ್ಲಿ ಒಂದು ಅಥವಾ ಎರಡು ಅಥವಾ ಮೂರು ಬಾರಿ ಬಹು ಅಪರೂಪವಾಗಿ ಮಾತನಾಡಬಹುದು ಅಥವಾ ಮಾತನಾಡದೆ ಇರಬಹುದು. ತಾನು ಧರ್ಮಗಳನ್ನು ತಿಳಿಸುವುದಕ್ಕೆ ಬಂದಿದ್ದಾನೆ ಆದ್ದರಿಂದ ಆತ್ಮವಾಗಿ ತಪ್ಪದೆ ಮಾತನಾಡುವನು. ಇದು ದೇವರ ವಿಧಾನವಾದರೆ ಮಾಯಾ ವಿಧಾನ ಮತ್ತೊಂದು ವಿಧವಾಗಿ ಇದೆ.

ದೇವರು ಸಾಧಾರಣ ಮನುಷ್ಯನಹಾಗೆ ಇರುವವರೆಗು ಮಾಯೆಗೆ ಎಂತಹ ತೊಂದರೆ ಇರುವುದಿಲ್ಲ. ಆತ್ಮವಾಗಿ ಜ್ಞಾನವನ್ನು ಹೇಳಿದಾಗಲೇ ಮಾಯೆಗೆ ವಿರೋಧ ಉಂಟಾಗುತ್ತಿದೆ. ದೇವರ ಜ್ಞಾನವೆಲ್ಲವೂ ಮಾಯೆಗೆ ವಿರುದ್ಧವಾದುದೇ ಆದ್ದರಿಂದ ಮಾಯೆ (ಸಾತಾನ್) ಮನುಷ್ಯರನ್ನು ತನ್ನ ಕಡೆಯಿಂದ ದೇವರ ಜ್ಞಾನದ ಕಡಗೆ ಹೋಗದಂತೆ ನೋಡಿಕೊಳ್ಳುವುದರಲ್ಲಿ ಬಹಳ ಜಾಗ್ರತೆಯಾಗಿ ಇರುತ್ತದೆ. ಅಷ್ಟೇ ಅಲ್ಲದೆ ದೇವರ ಜ್ಞಾನದ ಮೇಲೆ ಶ್ರದ್ಧೆ ಹೊಂದಿ ಸ್ವಲ್ಪ ಜ್ಞಾನವನ್ನು ತಿಳಿದುಕೊಂಡವರನ್ನು ಗುರುತಿಸಿ ತನ್ನಕಡೆಗೆ ಸೆಳೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುತ್ತದೆ. ಆದ್ದರಿಂದ ಮಾಯಾ ಪ್ರಭಾವದಿಂದ ಅಸಲಾದ ಆತ್ಮಜ್ಞಾನದ ಮೇಲೆ ಆಸಕ್ತಿಯಿರುವವರು ಬಹಳ ಕಡಿಮೆ ಎಂದು ಹೇಳಬಹುದು. ಒಂದು ವೇಳೆ ಯಾರಾದರೂ ಸ್ವಲ್ಪ ತಿಳಿದುಕೊಂಡವರಿದ್ದರೂ ಅವರು ಆ ಮಾರ್ಗದಿಂದ ತಪ್ಪಿ ಹೋಗುವುದು ನಡೆಯುತ್ತಿದೆ. ಇಲ್ಲೊಂದು ಪ್ರಶ್ನೆ ಕೆಲವರಿಗೆ ಬರಬಹುದು.

ಅದೇನೆಂದರೆ! ಈ ದಿನ ಎಷ್ಟೋ ಭಕ್ತಿ ಇರುವವರಿದ್ದಾರಲ್ಲವೆ! ಎಷ್ಟೋ ಜನರನ್ನು ಗುರುಗಳಾಗಿ ಆಶ್ರಯಿಸಿ ಅವರ ಬಳಿಯಿಂದ ಜ್ಞಾನ ತಿಳಿದುಕೊಳ್ಳುತ್ತಿದ್ದಾರಲ್ಲವೆ! ಎಷ್ಟೋ ಮಂದಿ ದೇವತೆಗಳಿಗೆ ಶ್ರದ್ಧೆಯಿಂದ ಪೂಜೆಗಳು ಮಾಡುತ್ತಿದ್ದಾರಲ್ಲವೆ! ಕೆಲವರು ನಾಸ್ತಿಕರು ಹೊರತು ದೇವರ ಮೇಲೆ ಭಕ್ತಿ ಇಲ್ಲದವರಿದ್ದಾರಾ! ನೀವು ಹೇಳಿದಂತೆ ಏನೂ ಇಲ್ಲವೆ! ಸಾಯಿಭಕ್ತರನ್ನಾಗಲೀ, ಅಯ್ಯಪ್ಪ ಸ್ವಾಮಿ ಭಕ್ತರನ್ನಾಗಲೀ ಯಾರಾದರೂ ಬದಲಾಯಿಸಬಲ್ಲಿರಾ! ದೇಶದಲ್ಲಿ ಇರುವ ಹಳೆ ದೇವತೆಗಳ ಗುಡಿಗಳೇ ಅಲ್ಲದೆ ಶಿರಿಡಿ ಸಾಯಿ ಗುಡಿಗಳು, ಅಯ್ಯಪ್ಪಸ್ವಾಮಿ ಗುಡಿಗಳು ವಿಪರೀತವಾಗಿ ತಯಾರಾಗುತ್ತಿವೆ ಯಲ್ಲವೆ! ಅಲ್ಲಿ ಮಾಯೆ ಯಾರನ್ನು ಆತಂಕ ಮಾಡಲಿಲ್ಲವೇ! ನಿಮ್ಮ ಮಾತು ನಾವು ಹೇಗೆ ನಂಬಬೇಕು ಎಂದು ಕೇಳಬಹುದು ಅದಕ್ಕೆ ನಮ್ಮ ಸಮಾಧಾನವೇ ನೆಂದರೆ!

ಮಾಯೆ ದೇವರ ಮಾರ್ಗಕ್ಕು, ದೈವಜ್ಞಾನಕ್ಕೂ ಪೂರ್ತಿ ವಿರುದ್ಧವಾದುದು. ಎಷ್ಟೋ ದೊಡ್ಡದಾದ ದೇವರ ಜ್ಞಾನವನ್ನೇ ವಿರೋಧಿಸುವುದು ಮಾಯೆ. ಆದ್ದರಿಂದ ಮಾಯೆ ಕೂಡ ಬಹಳ ದೊಡ್ಡದೇ ಆಗಿರುತ್ತದೆಂದು ತಿಳಿಯುತ್ತಿದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ **"ಮಮ ಮಾಯಾ ದುರತ್ಯಯಾ"** ಎಂದಿದ್ದಾರೆ. **"ನನ್ನ ಮಾಯೆಯನ್ನು ಜಯಿಸುವುದು ದುಸ್ಸಾಧ್ಯವಾದ ಕೆಲಸ"** ಎಂದು ಒಂದು ಕಡೆ ದೇವರೇ ಹೇಳಿದ್ದಾನೆಂದರೆ ಊಹೆಗೆ ಸಿಗದ ರೀತಿಯಲ್ಲಿ ಮಾನವನನ್ನು ಮಾಯೆ ಮೋಸ ಮಾಡುತ್ತದೆಂದು ತಿಳಿಯುತ್ತಿದೆ. ಇಲ್ಲಿಯವರೆಗು ಇದು ಮಾಯೆ ಕೆಲಸ ಎಂದಾಗಲೀ, ಮಾಯೆ ಕೆಲಸ ಹೀಗಿರುತ್ತದೆಂದಾಗಲೀ ಯಾರೂ ತಿಳಿದುಕೊಳ್ಳಲಾರದೆ ಹೋಗಿದ್ದಾರೆ. ಆದ್ದರಿಂದ ಮಾಯೆ ದೇವರ ಮಾರ್ಗದಲ್ಲಿ ಎಲ್ಲರನ್ನೂ ಮೋಸ ಮಾಡುತ್ತಿದೆ. ದೇವರ ಜ್ಞಾನದ ಹಾಗೆ ತನ್ನ ಜ್ಞಾನವನ್ನು ತಯಾರು ಮಾಡಿದೆ. ದೇವರು ಭಗವಂತನಾಗಿ ಸಾವಿರ ವರ್ಷಗಳಿಗೆ ಒಂದು ಬಾರಿ ಅಪರೂಪವಾಗಿ ಭೂಮಿ ಮೇಲೆ ಬಂದರೇ, ಆತನನ್ನು ಯಾರೂ ಗುರುತಿಸದಂತೆ ತನ್ನ ಪ್ರತಿರೂಪಗಳನ್ನು ಭಗವಂತರನ್ನಾಗಿ ಎಷ್ಟೋ ಮಂದಿಯನ್ನು ಭೂಮಿ ಮೇಲೆ ತಂದಿದೆ. ಮಾಯೆ ಪ್ರವೇಶವಿಟ್ಟಿರುವ ಎಷ್ಟೋ ಜ್ಞಾನಗಳಲ್ಲಿ

ಯಾವುದು ನಿಜ ದೈವಜ್ಞಾನವೋ ಯಾರಿಗೂ ಅರ್ಥವಾಗದೆ ಎಲ್ಲಾ ಜ್ಞಾನಗಳು ದೇವರವೇ ಎಂದು ಬಹಳ ಜನ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಹಾಗೆಯೇ ಮಾಯೆ ಯೊಂದಿಗೆ ಕೂಡಿಕೊಂಡ ಭಗವಂತರು ಎಷ್ಟೋ ಭೂಮಿ ಮೇಲೆ ಇದ್ದರೇ ಯಾವಾಗಲೋ ಒಂದು ಬಾರಿ ಬರುವ ಭಗವಂತನನ್ನು ಪ್ರತ್ಯೇಕವಾಗಿ ಯಾರು ಗುರುತಿಸುತ್ತಾರೆ. ಎಷ್ಟೋ ಮಹಿಮೆಗಳು ತೋರಿಸುವ ಭಗವಂತರಿದ್ದರೇ ಜೀವನದಲ್ಲಿ ಯಾವುದೋ ಒಂದೋ ಎರಡೋ ಮಹಿಮೆಗಳನ್ನು ತೋರಿಸುವ ವನನ್ನು ಯಾರು ಗುರುತಿಸುತ್ತಾರೆ. ಎಷ್ಟೋ ಭಗವಂತರಲ್ಲಿ ಅಸಲಾದ ಒಬ್ಬ ಭಗವಂತನನ್ನು ಯಾರು ಗುರುತಿಸಬಲ್ಲರು. ಈ ವಿಧವಾಗಿ ದೇವರ ಜ್ಞಾನವನ್ನಾಗಲೀ, ಭಗವಂತನನ್ನಾಗಲೀ ಗುರುತಿಸುವುದು ದುಸ್ಸಾಧ್ಯವಾದ ಕೆಲಸವಾಗಿ ಇದೆ. ಇಲ್ಲಿಯವರೆಗು ಯಾರೂ ನೋಡದಿರುವುದು, ನಂತರ ಕೂಡ ಯಾರೂ ತಿಳಿದುಕೊಳ್ಳಲಾಗದಿರುವುದು ಎಂದು ತನ್ನ ನಿಜಸ್ಥಿತಿಯನ್ನು ವಿಶ್ವರೂಪವಾಗಿ ತೋರಿಸಿದರೇ, ಆ ವಿಧವಾಗಿ ಕೂಡ ಗುರುತಿಸದಂತೆ ಬಹಳ ಜನ ದೇವತೆಗಳು ವಿಶ್ವರೂಪ ತೋರಿಸಿದಂತೆ, ಕೊನೆಗೆ ಸಾಯಿಬಾಬಾನನ್ನು, ವೀರಬ್ರಹ್ಮಯ್ಯರವರು ಕೂಡ ಎರಡು ಮೂರು ಸಲ ವಿಶ್ವರೂಪ ತೋರಿಸಿದಂತೆ ಬರೆಯಲ್ಪಟ್ಟಿದೆ. ಇಷ್ಟು ಮಂದಿ ತೋರಿಸಿದ ಇಷ್ಟು ವಿಶ್ವರೂಪಗಳಲ್ಲಿ **ಭಗವದ್ಗೀತೆ ಯಲ್ಲಿ ಕೃಷ್ಣನು ತೋರಿಸಿದ ವಿಶ್ವರೂಪವೇ ದೊಡ್ಡದೆಂದು** ಯಾರೆಂದುಕೊಳ್ಳುತ್ತಾರೆ. ಆದ್ದರಿಂದ ಕ್ರೈಸ್ತರಲ್ಲಿ ಕೃಷ್ಣನನ್ನು, ಹಿಂದೂಗಳಲ್ಲಿ ಪ್ರಭುವನ್ನು ಭಗವಂತನಾಗಿ ಗುರುತಿಸಲಾರದೆ ಹೋಗಿದ್ದಾರೆ. ಒಂದು ವೇಳೆ ಹಿಂದೂಗಳಲ್ಲಿ ಕೃಷ್ಣನನ್ನು ಯಾರಾದರೂ ಅಸಲಾದ ದೇವರಾಗಿ ಗುರುತಿಸಿದ್ದಾರಾ ಎಂದರೆ ಅದೂ ಇಲ್ಲ. ಉಳಿದ ಅಷ್ಟು ಮಂದಿ ದೇವರುಗಳಲ್ಲಿ ಕೃಷ್ಣನನ್ನು ಕೊನೆಯದವನಾಗಿ ಕೆಲವು ಮಂದಿ ಇಟ್ಟುಕೊಂಡರೇ, ಆತನವೆಲ್ಲಾ ತುಂಟ ಕೆಲಸಗಳೇ ಆತನು ಹೇಗೆ ದೇವರಾಗುತ್ತಾನೆಂದು ಬಹಳ ಮಂದಿ ಚಿಕ್ಕ ದೇವರಾಗಿಯೂ ಸಹ ಗುರುತಿಸಲಿಲ್ಲ. ಸಾಯಿಬಾಬಾ ಮುಂದೆ ಕೃಷ್ಣನು ಒಬ್ಬ ದೇವರಾಗಿ ಸಹ ಯಾರೂ ಲೆಕ್ಕಿಸುತ್ತಿಲ್ಲ. ಇನ್ನು ಕ್ರೈಸ್ತವದೊಳಗೆ ಹೋಗಿ ಪ್ರಭುವನ್ನು ಅವರು ಯಾವ ವಿಧವಾಗಿ ಭಾವಿಸುತ್ತಿದ್ದಾರೆಂದು ನೋಡಿದರೆ ಆತನನ್ನು ದೈವಕುಮಾರನಾಗಿ

ಕೆಲವರು ಲೆಕ್ಕಿಸಿದರೂ ಆತನ ವಾಕ್ಯಗಳ ಸಾರಾಂಶ ಅವರಿಗೆ ಅರ್ಥ ವಾಗಲಿಲ್ಲವೆಂದೇ ಹೇಳಬಹುದು. ಮಾಯೆ ಪ್ರಭಾವದಿಂದ ಆತನನ್ನು ಬಿಟ್ಟು, ಆತನು ಮರಣಿಸಿದ ಶಿಲುಬೆಯನ್ನು ಮುಗಿಯುತ್ತಿದ್ದಾರೆ. ಪ್ರಭು ಆಕಾರವನ್ನು ಇಟ್ಟುಕೊಂಡರೇ ಹಿಂದೂಗಳ ಹಾಗೆ ಲೆಕ್ಕಿಸಲ್ಪಡುತ್ತೇವೆಂದು ಶಿಲುಬೆ ಗೊಂಬೆ ಯನ್ನು ಇಟ್ಟುಕೊಂಡಿದ್ದಾರೆ. **ನನ್ನನ್ನು ನೋಡಿದವನು ನನ್ನ ತಂದೆಯನ್ನು ನೋಡಿದಂತೆಯೆಂದು** ಪ್ರಭು ಹೇಳಿದಾಗ ಕನಿಷ್ಟ ಆತನ ಆಕಾರವನ್ನಾದರೂ ನೋಡದೆ ಆತನ ಮರಣಕ್ಕೆ ಕಾರಣವಾದ ಶಿಲುಬೆಯನ್ನು ನೋಡುವುದು ಮಾಯೆ ಕೆಲಸ ಅಲ್ಲವಾ! ಈ ವಿಧವಾಗಿ ಹೇಳುತ್ತಾ ಹೋದರೇ ದೇವರ ಮಾರ್ಗದಲ್ಲಿ ಇದ್ದೇವೆಂದುಕೊಳ್ಳುವಂತೆ ಮಾಡಿದ ಮಾಯೆ (ಸಾತಾನ್) ದೇವರ ಮಾರ್ಗಕ್ಕೆ ಎಷ್ಟೋ ದೂರವಾಗಿ ಮನುಷ್ಯನನ್ನು ಕಳುಹಿಸುತ್ತಿದೆ. ತಿಳಿದವನು ಹೇಳಿದರೂ ಅವನನ್ನೇ ಕೀಳಾಗಿ ಲೆಕ್ಕಿಸುವಂತೆ ಮಾಡಿ ಅವನ ಮಾತನ್ನು ಕೇಳದಂತೆ ಮಾಡುತ್ತಿದೆ. ಮಾಯೆ ಮತಗಳನ್ನು ಕಲ್ಪಿಸಿ ದೇವರೇ ಬೇರೆಬೇರೆಯೆನ್ನು ವಂತೆ ಮಾಡಿದೆ. ವಿಶ್ವಕ್ಕೆ ಅಧಿಪತಿ ಒಬ್ಬನೇ ಆದರೂ ಮತಗಳನ್ನು ತೋರಿಸಿ ಮತಕ್ಕೊಬ್ಬ ದೇವರೆಂದು ಮನುಷ್ಯರಿಗೆ ತಿಳಿಯುವಂತೆ ಮಾಯೆ ಮಾಡಿದೆ. ಆ ಮಾಯಾ ಪ್ರಭಾವ ಮನುಷ್ಯರಲ್ಲಿ ಎಷ್ಟೋ ಬೇರೂರಿದೆ. ಆದ್ದರಿಂದ ಎಷ್ಟೋ ದೇವತೆಗಳು ಎಷ್ಟೋ ಮತಗಳು ತಯಾರಾಗಿವೆ. ಕ್ರೈಸ್ತವ ಮತ ಒಂದೇ ಆದರೂ ಅದರಲ್ಲಿ ಮೇರಿಮಾತೆ ಭಕ್ತರು ಕೆಲವರು, ಪ್ರಭು ಭಕ್ತರು ಕೆಲವರು ಇದ್ದಾರೆ. ಹಾಗೆಯೇ ಹಿಂದೂಮತವೊಂದೇ ಆದರೂ ದೇವತೆಗಳು ಅನೇಕವಾಗಿ ಇದ್ದಾರೆ. ಇಷ್ಟು ಮತಗಳಲ್ಲಿ, ಇಷ್ಟು ದೇವತೆಗಳಲ್ಲಿ ಯಾರು ಎಲ್ಲರಿಗೂ ಅಧಿಪತಿಯೋ ಈಗಲಾದರೂ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೆಂದು ತಿಳಿಸುತ್ತಿದ್ದೇವೆ. ಹಾಗೆ ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ಮೊದಲು ಮಾಯೆಯನ್ನು ಕುರಿತು ಅದರ ಇರುವಿಕೆಯನ್ನು ಕುರಿತು ತಿಳಿದುಕೊಂಡರೆ ನಂತರ ದೇವರ ಮಾರ್ಗವನ್ನು ಕುರಿತು ತಿಳಿದುಕೊಳ್ಳಬಲ್ಲರು. ಆದ್ದರಿಂದ ಈಗ ನೀವಿರುವ ಮಾರ್ಗವು ದೇವರ ಮಾರ್ಗವೋ ಮಾಯಾ ಮಾರ್ಘವೋ ಒಂದು ಸಲ ಹಿಂತಿರುಗಿ ನೋಡಿಕೊಳ್ಳಿ.

ಒಂದು ಬಾರಿ ನಾವು ಯಾವ ಮಾರ್ಗದಲ್ಲಿದ್ದೇವೋ ನೋಡಿಕೊಂಡರೇ ನಾನು ದೇವರ ಮಾರ್ಗದಲ್ಲೇ ಇದ್ದೇನೆಂದು ಎಲ್ಲರಿಗೂ ಅನಿಸುತ್ತದೆ. ನಾಸ್ತಿಕರಿಗೆ ಹೊರತು ಉಳಿದವರೆಲ್ಲರಿಗೂ ನಾವು ದೇವರ ಮಾರ್ಗದಲ್ಲಿ ಇದ್ದೇವೆಂದು ಅನಿಸುವುದು ಸಹಜ. ಏಕೆಂದರೆ ಮಾಯಾಮಾರ್ಗ ಯಾವುದೋ, ಅದರ ಸ್ವಭಾವವೇನೋ ಯಾರಿಗೂ ತಿಳಿದಿಲ್ಲ. ಆದ್ದರಿಂದ ಮಾಯಾಮಾರ್ಗದಲ್ಲಿ ಇರುವವರು ಕೂಡ ನಾವು ಸಕ್ರಮವಾಗಿ ದೇವರ ಮಾರ್ಗದಲ್ಲಿಯೇ ಇದ್ದೇವೆಂದುಕೊಳ್ಳುತ್ತಾರೆ. ಈ ವಿಧವಾಗಿ ಅಂದುಕೊಳ್ಳುವುದು ಎಲ್ಲ ಮತಗಳಲ್ಲಿ ಇದೆ. ಈ ಮತದಲ್ಲಿ ಹೆಚ್ಚೆಂದು, ಆ ಮತದಲ್ಲಿ ಕಡಿಮೆಯೆಂದು ಏನೂ ಇಲ್ಲದಂತೆ ಮನುಷ್ಯರೆಲ್ಲರಲ್ಲಿಯೂ ಎಲ್ಲ ಮತಗಳಲ್ಲಿಯೂ ಮಾಯೆ ಮಾನವನನ್ನು ಮೋಸಮಾಡಿ ಪಕ್ಕ ಮಾರ್ಗದಲ್ಲಿಯೇ ಕಳುಹಿಸುತ್ತಿದೆ. ಮಾಯಾ ಪ್ರಭಾವದಿಂದ ಶೇಕಡ ಒಂದರಷ್ಟು ಜ್ಞಾನ ಇರುವವರು ಕೂಡ ಶೇಕಡ ನೂರರಷ್ಟು ಜ್ಞಾನ ಇರುವವನನ್ನು ನೋಡಿ ನನಗಿಂತ ಕಡಿಮೆ ಜ್ಞಾನ ಇರುವವನೆಂದು ಅಂದು ಕೊಳ್ಳುತ್ತಿರುವರು. ಹೆಚ್ಚಿನ ಜ್ಞಾನ ತಿಳಿದವನು ತನಗಿಂತ ಕಡಿಮೆ ಜ್ಞಾನಿಯನ್ನು ಕಡಿಮೆಯವನಾಗಿ ಅಂದುಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ಕಡಿಮೆ ಜ್ಞಾನ ತಿಳಿದವನು ತನಗಿಂತ ಹೆಚ್ಚಿನ ಜ್ಞಾನ ತಿಳಿದವನನ್ನು ಕಡಿಮೆಯವನೆಂದು ಅಂದುಕೊಳ್ಳುವುದು ಬಹಳ ತಪ್ಪು. ಹೀಗೆ ತಪ್ಪು ಒಪ್ಪುಗಳನ್ನು ಯಾರು ಗ್ರಹಿಸಿಕೊಳ್ಳದಂತೆ ಯಾರಷ್ಟಕ್ಕವರು ನಾವು ದೊಡ್ಡವರೆಂದುಕೊಳ್ಳುವುದು ಸಹಜವಾಗಿ ಅನಾದಿಯಿಂದ ನಡೆಯುತ್ತಲೇ ಬರುತ್ತಿದೆ. ಆದ್ದರಿಂದ ದ್ವಾಪರ ಯುಗದಲ್ಲಿ ಸಾಕ್ಷಾತ್ತು ಭಗವಂತನಾದ ಶ್ರೀಕೃಷ್ಣನನ್ನು ಹೀಯಾಳಿಸಿ ಮಾತನಾಡಿದವರಿದ್ದಾರೆ. ಹಾಗೆಯೇ ಕಲಿಯುಗದಲ್ಲಿ ಸಂಪೂರ್ಣ ಜ್ಞಾನವಿರುವ ಯೇಸುಪ್ರಭುವನ್ನು ತಮಗಿಂತ ಜ್ಞಾನಹೀನನನ್ನಾಗಿ ಮಾತನಾಡಿ ಕಷ್ಟಗಳಪಾಲು ಮಾಡಿದವರು ಇದ್ದಾರೆ.

ಪ್ರಪಂಚದಲ್ಲಿನ ಅನೇಕ ವಿಷಯಗಳಲ್ಲಿ ಒಂದು ಅಳೆಯುವಮಾಪನ ಇದೆ. ಒಂದು ಪದಾರ್ಥವೊಂದರ ಪರಿಮಾಣವನ್ನು ಅಳತೆಮಾಡುವುದಕ್ಕಾಗಲೀ,

ಅದರ ಸಾಂದ್ರತೆ ಅಳತೆಮಾಡುವುದಕ್ಕಾಗಲಿ ತೂಕದ ಪರಿಕರಗಳು ಇವೆ. ಉದಾಹರಣೆಗೆ ದ್ರವಪದಾರ್ಥವಾದ ಹಾಲನ್ನು ತೆಗೆದುಕೊಂಡರೆ ಅದನ್ನು ಅಳತೆಮಾಡುವುದಕ್ಕೆ ಲೀಟರ್ ಅಳತೆ ಇದೆ. ಹಾಗೆಯೇ ಹಾಲಿನ ಸಾಂದ್ರತೆಯನ್ನು ಪರೀಕ್ಷಿಸುವುದಕ್ಕೆ ಡಿಗ್ರೀಮೀಟರ್ ಇದೆ. ಹಾಗೆಯೇ ದಾನ್ಯವನ್ನು ತೆಗೆದುಕೊಂಡರೇ ಕಿಲೋಗ್ರಾಮ್ ತೂಕದಿಂದ ಅಳತೆ ಮಾಡಬಹುದು. ಇವೆಲ್ಲವೂ ಕಾಣಿಸುವ ಪ್ರಪಂಚದಲ್ಲಿನ ಕಾಣಿಸುವ ಪದಾರ್ಥಗಳೊಂದರ ವಿಧಾನವಾದಾಗ, ಕಾಣಿಸದ ದೇವರಿಗೆ ಸಂಬಂಧಿಸಿದ ಕಾಣಿಸದ ಜ್ಞಾನವನ್ನು ಅಳತೆಮಾಡಲು ಕಾಣಿಸುವ ಯಾವ ಪರಿಕರವೂ ಇಲ್ಲ. ಆದ್ದರಿಂದ ಯಾರಷ್ಟಕ್ಕವರು ನನ್ನದು ದೊಡ್ಡ ಜ್ಞಾನ ಎಂದುಕೊಳ್ಳುವುದು ನಡೆಯುತ್ತಿದೆ. ಉದಾಹರಣೆಗೆ ಸತ್ಯಶೋಧನೆ ಸಂಘವೆಂದು ಹೆಸರು ಇಟ್ಟುಕೊಂಡವರು ಕೃಷ್ಣನಿಗಿಂತ, ಯೇಸು ಪ್ರಭುವಿಗಿಂತ ತಮ್ಮ ಜ್ಞಾನವೇ ದೊಡ್ಡದೆಂದು ಹೇಳಿಕೊಳ್ಳುತ್ತಿದ್ದಾರೆಂದರೇ ಮನುಷ್ಯರನ್ನು ಮಾಯೆ ಎಷ್ಟಾಗಿ ಪ್ರಭಾವಿತ ಮಾಡುತ್ತಿದೆಯೋ ಅರ್ಥವಾಗುತ್ತಿದೆ. ಇಂತಹ ನೇಪದ್ಯದಲ್ಲಿ ಮನುಷ್ಯ ತನಗೆ ತಿಳಿದಿರುವುದೇ ದೊಡ್ಡದೆನ್ನುವ ಭಾವನೆಯಲ್ಲಿ ಇರುವಾಗ, ಸ್ವತಃವಾಗಿ ದೇವರೇ ಬಂದು ಇದು ಸರಿಯಾದ ಮಾರ್ಗವೆಂದು ಹೇಳಿದರೂ ನಿನಗೆ ತಿಳಿದಿಲ್ಲ ನಮಗೇ ತಿಳಿದಿದೆಯೆನ್ನುವವರು ಇದ್ದಾರೆ. ದೇವರ ಮಾರ್ಗವೆಂದು ಭ್ರಮಿಸಿ ಮಾಯೆ ಮಾರ್ಗದಲ್ಲಿ ಇರುವವರು ಯಾರು ಹೇಳಿದರೂ, ಕೊನೆಗೆ ದೇವರು ಹೇಳಿದರೂ ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ನಾವು ಮೊದಲೇ ಹೇಳಿದ್ದೇವೆ, ತಾನು ಯಾವ ಮಾರ್ಗದಲ್ಲಿ ಇದ್ದೇನೆಂದು, ತನ್ನಷ್ಟಕ್ಕೆ ತಾನು ಹಿಂತಿರುಗಿ ನೋಡಿಕೊಂಡು ಆಲೋಚಿಸಿ ಕೊಂಡರೂ ಅರ್ಥವಾಗುವುದಿಲ್ಲ. ಮಾಯೆ ಮಾರ್ಗವನ್ನು ಬಿಟ್ಟು ದೇವರ ಮಾರ್ಗವನ್ನು ಅನ್ವೇಷಿಸುವುದಕ್ಕೆ ಪ್ರತಿ ಮನುಷ್ಯ ತನಗೆ ಎಷ್ಟು ತಿಳಿದಿದ್ದರೂ ನಾನು ಇನ್ನೂ ತಿಳಿದುಕೊಳ್ಳಬೇಕಾಗಿರುವುದು ಬಹಳ ಇದೆಯೆಂದುಕೊಳ್ಳಬೇಕು. ಹಾಗೆ ಅಂದುಕೊಂಡಾಗ ದೇವರ ಜ್ಞಾನ ಇನ್ನೂ ಅರ್ಥವಾಗುತ್ತಾ ಹೋಗುತ್ತದೆ. ಹಾಗೆ ನಡೆದರೇ ತಾನು ಪರಿಪೂರ್ಣವಾಗಿ ತಿಳಿದವನಲ್ಲವೆಂದು ತಿಳಿಯಬೇಕಾಗಿರುವುದು ಎಷ್ಟೋ ಇದೆಯೆಂದು ಅರ್ಥವಾಗಬಲ್ಲದು. ತಾನು

ಸಂಪೂರ್ಣ ಜ್ಞಾನಿ ಎನ್ನುವ ನಿರ್ಣಯಕ್ಕೆ ಬಾರದಂತೆ ಅಸಂಪೂರ್ಣ ಜ್ಞಾನಿಯೆಂದು, ಎಷ್ಟೋ ಜ್ಞಾನ ತಿಳಿದುಕೊಳ್ಳಬೇಕೆನ್ನುವ ಉದ್ದೇಶದೊಳಗೆ ಬಂದು, ಇಲ್ಲಿ ಬರೆದಿರುವುದು ಓದಿದರೇ ವಾಸ್ತವ ಜ್ಞಾನ ಅರ್ಥವಾಗಿ ದೇವರ ಮಾರ್ಗ ತಿಳಿಯಬಲ್ಲದು. ಹಾಗಲ್ಲದೆ ನನಗೆ ತಿಳಿದಿದೆಯೆಂದು ಅಡ್ಡಗೋಡೆ ಕಟ್ಟಿಕೊಂಡವರು ಆ ಗೋಡೆಯನ್ನು ದಾಟಿಬರಲಾರರು ನಂತರ ಏನಿದೆಯೋ ತಿಳಿಯಲಾರರು. ಆದ್ದರಿಂದ ಪ್ರಪಂಚದಲ್ಲಿ ನಾವು ಯಾವ ಹುದ್ದೆಯಲ್ಲಿ ಇದ್ದರೂ ಜ್ಞಾನದಲ್ಲಿ ಯಾವ ಮಟ್ಟದ ಹೆಸರುಹೊಂದಿದ್ದರೂ ನೀನು ಯಾರೋ ನಿನಗೆ ತಿಳಿದಿಲ್ಲ, ಹಾಗೆಯೇ ದೇವರ್‍ಯಾರೋ ಅದೂ ತಿಳಿದಿಲ್ಲ. ಆದ್ದರಿಂದ ತಿಳಿದುಕೊಳ್ಳಬೇಕಾಗಿರುವುದು ಎಷ್ಟೋ ಇದೆಯೆನ್ನುವ ಭಾವದಿಂದ ಇಲ್ಲಿ ಹೇಳಿದ ವಿಷಯವನ್ನು ನೋಡೋಣ.

ಜ್ಞಾನ ಎರಡು ವಿಧಗಳಾಗಿ ಇದೆ. ಒಂದು ಪ್ರಪಂಚ ಜ್ಞಾನ ಎರಡನೆಯದು ಪರಮಾತ್ಮ ಜ್ಞಾನ. ಪ್ರಪಂಚ ಜ್ಞಾನ ಬೇರೆ, ಪರಮಾತ್ಮ ಜ್ಞಾನ ಬೇರೆ. ಪ್ರಪಂಚ ಜ್ಞಾನ, ಪರಮಾತ್ಮ ಜ್ಞಾನ ಎರಡು ನೀರು ಎಣ್ಣೆಯಂತಹವು. ಎರಡು ದ್ರವಪದಾರ್ಥಗಳೇ ಆದರೂ ನೀರಿನ ಧರ್ಮಗಳು ಬೇರೆ, ಎಣ್ಣೆ ಧರ್ಮಗಳು ಬೇರೆ. ಎರಡು ಒಂದೇ ತರಹ ಎಂದಿಗೂ ಇರುವುದಿಲ್ಲ. ಹಾಗೆಯೇ ಜ್ಞಾನ ಎನ್ನುವ ಪದ ಒಂದೇ ಆದರೂ ಪ್ರಪಂಚ ಜ್ಞಾನವೊಂದರ ಧರ್ಮಗಳು, ಪರಮಾತ್ಮ ಜ್ಞಾನವೊಂದರ ಧರ್ಮಗಳು ಬೇರೆಬೇರೆಯಾಗಿ ಇವೆ. ಪ್ರಪಂಚ ಜ್ಞಾನದಲ್ಲಿ ದೊಡ್ಡವರಾದರೂ ಪರಮಾತ್ಮ ಜ್ಞಾನದಲ್ಲಿ ಎಷ್ಟೋ ಅನಾಮಿಕರು ಇದ್ದಾರೆ. ಪ್ರಪಂಚ ಜ್ಞಾನದಲ್ಲಿ ಎಷ್ಟೋ ವಿಜ್ಞಾನವನ್ನು ಸಂಪಾದಿಸಿದವರು ಕೂಡ ಪರಮಾತ್ಮ ವಿಷಯದಲ್ಲಿ ಚಿಕ್ಕ ವಿಷಯವನ್ನು ಕೂಡ ಅವಗಾಹನೆ ಮಾಡಿಕೊಳ್ಳಲಾರದಂತಿದ್ದಾರೆ. ಪ್ರಪಂಚ ಇಂಜನಿಯರ್‌ಗಳು, ಸೈಂಟಿಷ್ಟರು ದೇವರ ವಿಷಯದಲ್ಲಿ ಒಂದು ಸಿದ್ಧಾಂತಪರವಾಗಿ ಅಲ್ಲದೆ ಕುರುಡರಂತೆ ಮಾತನಾಡುತ್ತಿದ್ದಾರೆ. ಈ ವಿಧವಾಗಿ ಪ್ರಪಂಚ ಜ್ಞಾನ ತಿಳಿದವರು ಮಾತನಾಡುತ್ತಿರುವಾಗ, ಸ್ವಲ್ಪ ಪರಮಾತ್ಮ ಜ್ಞಾನ ತಿಳಿದವರು ನಮಗೆ ಸರ್ವವು ತಿಳಿದಿದೆಯೆನ್ನುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಅಸಲಾದ ಪರಮಾತ್ಮ ಜ್ಞಾನ ಸಂಪೂರ್ಣವಾಗಿ ಹೊರಗೆ ತಿಳಿಯದಂತೆ ಹೋಗುತ್ತಿದೆ. ಪರಮಾತ್ಮ ಜ್ಞಾನ ಸ್ವಲ್ಪ ತಿಳಿದರೇನೆ ಎಲ್ಲಾ ತಿಳಿದಿದೆಯೆನ್ನುವವರ ಮಧ್ಯದಲ್ಲಿ, ಹಾಗೆಯೇ ಪ್ರಪಂಚ ಜ್ಞಾನ ಎಷ್ಟೋ ತಿಳಿದುಕೊಂಡ ನಮಗೆ ದೈವಜ್ಞಾನವೆಂದರೆ ಏನೋ ತಿಳಿದಿಲ್ಲವಾ ಎನ್ನುವವರ ಮಧ್ಯದಲ್ಲಿ ಭಗವದ್ಗೀತೆಯಾಗಲಿ, ಬೈಬಲ್ ಆಗಲಿ ಸಂಪೂರ್ಣವಾಗಿ ಅವಗಾಹನೆ ಆಗಲಿಲ್ಲವೆಂದೇ ಹೇಳಬಹುದು. ಇಂತಹ ಸಂದರ್ಭದಲ್ಲಿ ಭಗವದ್ಗೀತೆಗೆ ವಕ್ರವ್ಯಾಖ್ಯಾನ ಹೇಳಿಕೊಳ್ಳುವುದು ನಡೆದಿದೆ. ಸಂಸ್ಕೃತ ಪದಗಳಿಗೆ ಅರ್ಥ ತಿಳಿದಷ್ಟು ಮಾತ್ರಕ್ಕೇ, ಸಂಸ್ಕೃತ ಭಾಷೆ ಬಂದಷ್ಟು ಮಾತ್ರಕ್ಕೇ ಭಗವದ್ಗೀತೆಗೆ ಭಾವ ಬರೆದು ದೈವಜ್ಞಾನವಿಷ್ಟೇ ಎಂದು ಕೆಲವರಂದುಕೊಂಡಿದ್ದಾರೆ. ಆದರೆ ಹೇಳಲ್ಪಟ್ಟಿರುವುದೆಲ್ಲಾ ದೈವಜ್ಞಾನವೇನಾ! ಇದರಲ್ಲಿ ಸೂತ್ರಬದ್ದತೆ ಶಾಸ್ತ್ರಬದ್ದತೆ ಇದೆಯಾ ಇಲ್ಲವಾ ಎಂದು ನೋಡಲಿಲ್ಲ. ಎಷ್ಟೋ ದೊಡ್ಡ ದೈವಜ್ಞಾನದಿಂದ ಕೂಡಿಕೊಂಡ ಬೈಬಲ್‌ನ್ನು ಕೂಡ ಬೋಧಕರು ಹಾಗೆಯೇ ವಿವರಿಸಿ ಹೇಳಿಕೊಳ್ಳುವುದು ನಡೆಯುತ್ತಿದೆ. ದೈವಾಂಶ ಸಂಭೂತನಾದ ಯೇಸುಪ್ರಭು ತಿಳಿಸಿದ ಜ್ಞಾನ ಎಷ್ಟೋ ಸೂತ್ರಬದ್ಧವಾದುದು ಶಾಸ್ತ್ರಬದ್ಧವಾದುದು ಆದಾಗ, ಬೈಬಲ್‌ನಲ್ಲಿನ ಕೆಲವು ವಿಷಯಗಳಲ್ಲಿ ಕೆಲವರು ಬೋಧಕರು ಶಾಸ್ತ್ರಬದ್ಧತೆ ಸೂತ್ರಬದ್ಧತೆ ಇಲ್ಲದಂತೆ ಬೋಧಿಸುತ್ತಿದ್ದಾರೆ. ಆ ವಿಧವಾಗಿ ಬೋಧಿಸುವುದರಿಂದ ದೇವರು ಹೇಳಿದ ಜ್ಞಾನ ಸಂಪೂರ್ಣವಾಗಿ ಪ್ರಜೆಗಳ ಹತ್ತಿರಕ್ಕೆ ಸೇರಲಾರದೆ ಹೋಗುತ್ತಿದೆ. ಈ ವಿಧವಾಗಿ ಕೃಷ್ಣನು ಹೇಳಿದ ಗೀತೆಯಲ್ಲಿನ ಜ್ಞಾನವಾಗಲೀ, ಪ್ರಭು ಹೇಳಿದ ಬೈಬಲ್‌ನಲ್ಲಿನ ಜ್ಞಾನವಾಗಲೀ ಸಂಪೂರ್ಣವಾಗಿ ಪ್ರಜೆಗಳಿಗೆ ತಿಳಿಯದಂತೆ ಹೋಗಿದೆ. ಈ ನಮ್ಮ ಮಾತು ಕೆಲವರಿಗೆ ಕಹಿಯಾಗಿ ಇದ್ದರೂ ದೇವರ ವಿಷಯದಲ್ಲಿ ಸತ್ಯವನ್ನು ಬಚ್ಚಿಡಬಾರದು ಆದ್ದರಿಂದ ಹೇಳುವುದು ತಪ್ಪಲ್ಲಿಲ್ಲ.

ದ್ವಾಪರಯುಗದಲ್ಲಿ ಹೇಳಿದ ಕೃಷ್ಣನಾಗಲೀ ಕಲಿಯುಗದಲ್ಲಿ ಹೇಳಿದ ಯೇಸು ಆಗಲಿ ಮತವೆನ್ನುವ ಹೆಸರಿನಿಂದ ಅವರು ಎಲ್ಲಿಯೂ ಹೇಳಲಿಲ್ಲ. ಅವರ ಬೋಧನೆಗಳಲ್ಲಿ ಮತವೆನ್ನುವ ಮಾತೇ ಇಲ್ಲ. ಅವರ ನಂತರ

ಜ್ಞಾನಿಗಳೆಂದುಕೊಳ್ಳುವವರು ಅವರ ಬೋಧನೆಗಳನ್ನು ಪ್ರಚಾರ ಮಾಡುವುದರಲ್ಲಿ ಮತವೆನ್ನುವ ಬಣ್ಣ ಬಳೆದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಕೃಷ್ಣನು, ಯೇಸು ಹೇಳದ ಬೋಧನೆಗಳನ್ನು ಕಲ್ಪಿಸಿ ಹೇಳಿ ಮನುಷ್ಯರನ್ನು ತಪ್ಪುದಾರಿ ಹಿಡಿಸಿ ಮತಮೌಢ್ಯವನ್ನು ಪ್ರಜೆಗಳಲ್ಲಿ ಕಲ್ಪಿಸಿದ್ದಾರೆ. ಬೋಧಕರ ಬೋಧನೆಗಳನ್ನನುಸರಿಸಿ ದೇವರು ಒಬ್ಬನೇ ಎನ್ನುವ ಭಾವ ಹೋಗಿ ಮತಕ್ಕೊಬ್ಬ ದೇವರೆಂದು ಪ್ರಜೆಗಳಿಗರ್ಥವಾಗಿದೆ. ಆಗಿನಿಂದ ಕಾಣಿಸದ ದೇವರನ್ನು ಬಿಟ್ಟು ಕಾಣಿಸುವ ಮತದ ಮೇಲೆಯೇ ಹೆಚ್ಚಿನ ಮಮಕಾರವನ್ನು ಬೆಳಸಿಕೊಂಡಿದ್ದಾರೆ.

ಒಬ್ಬನೇ ದೇವರನ್ನು ಭಿನ್ನವಾಗಿ ಅರ್ಥ ಮಾಡಿಕೊಂಡವರು, ದೇವರ ಜ್ಞಾನವನ್ನು ಕೂಡ ಭಿನ್ನವಾಗಿ ಅರ್ಥ ಮಾಡಿಕೊಳ್ಳುವುದು ನಡೆದಿದೆ. ಹಾಗೆ ಭಿನ್ನವಾಗಿ ಅರ್ಥ ಮಾಡಿಕೊಳ್ಳುವುದರಿಂದ ನಿಮ್ಮ ಜ್ಞಾನ ಬೇರೆ, ನಮ್ಮ ಜ್ಞಾನ ಬೇರೆ, ನಿಮ್ಮ ದೇವರು ಬೇರೆ, ನಮ್ಮ ದೇವರು ಬೇರೆಯೆಂದು ವಾದಿಸಿಕೊಳ್ಳುವುದು ನಡೆಯುತ್ತಿದೆ. ಉದಾಹರಣೆಗೆ ಮೊದಲು ಶ್ರೀಕೃಷ್ಣನು ಹೇಳಿದ ಭಗವದ್ಗೀತೆಯಲ್ಲಿನ ಒಂದು ಶ್ಲೋಕವನ್ನು ತೆಗೆದುಕೊಳ್ಳೋಣ. **"ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್, ಧರ್ಮಸಂಸ್ಥಾಪನಾರ್ಥಾಯ ಸಮ್ಭವಾಮಿ ಯುಗೇ ಯುಗೇ"** ಎಂದು ಜ್ಞಾನಯೋಗವೆನ್ನುವ ಅಧ್ಯಾಯದಲ್ಲಿ 8ನೇ ಶ್ಲೋಕದಲ್ಲಿ ಇದೆ. ಈ ಶ್ಲೋಕದಲ್ಲಿನ ಉದ್ದೇಶವನ್ನಾಗಲೀ ಜ್ಞಾನವನ್ನಾಗಲೀ ಪೂರ್ತಿಯಾಗಿ ಅರ್ಥಮಾಡಿಕೊಳ್ಳದೇ ನಾವು ಸ್ವಾಮಿಗಳು ಬೋಧಕರು ನಮಗೆ ಸಂಪೂರ್ಣವಾಗಿ ತಿಳಿದಿದೆಯೆನ್ನುವ ಉದ್ದೇಶದಿಂದ ಕೆಲವರು ಸತ್ಯವನ್ನು ಬಿಟ್ಟು ಸೂತ್ರಬದ್ಧವಲ್ಲದ ವಿವರವನ್ನು ವಿವರಿಸುವುದು ನಡೆದಿದೆ. ಸನ್ಮಾರ್ಗರನ್ನು ಹೆಚ್ಚಿಸಿ ದುರ್ಮಾರ್ಗರನ್ನು ಸಂಹರಿಸುತ್ತೇನೆಂದು ಮೊದಲು ಒಬ್ಬರು ಹೇಳಿದರೇ ಹಾಗೆಯೇ ನಂತರ ಅವರು ಸಹ ಆ ಮಾತನ್ನೇ ಬರೆದುಕೊಳ್ಳುವುದು ನಡೆದಿದೆ. ಭಗವದ್ಗೀತೆಯಲ್ಲಿನ ಶ್ಲೋಕದಲ್ಲಿ ದುಷ್ಕೃತ್ಯ ಮಾಡುವ ಕೆಟ್ಟವರನ್ನು ನಾಶ ಮಾಡುತ್ತೇನೆಂದಿದ್ದಾನೆ ಆದರೆ ಅವರನ್ನು ಸಾಯಿಸುತ್ತೇನೆಂದು ಹೇಳಲಿಲ್ಲ. ನಾಶ ಮಾಡುವುದು ಎಂದರೇ ಇಲ್ಲದಂತೆ ಮಾಡುವುದೆಂದು ಅರ್ಥ. ಯಾವ ವಿಧವಾಗಿ ಇಲ್ಲದಂತೆ

ಮಾಡುತ್ತೇನೆಂದಿದ್ದಾನೆಂದು ನೋಡಿದರೇ ಅದೇ ಶ್ಲೋಕದಲ್ಲಿಯೇ ಧರ್ಮ ಸಂಸ್ಥಾಪನೆಯಿಂದ ಎಂದು ತಿಳಿಯುತ್ತಿದೆ. ಧರ್ಮಗಳನ್ನು ತಿಳಿಸುವುದರಿಂದ ದುರ್ಮಾರ್ಗರು ಸನ್ಮಾರ್ಗರಾಗಿ ಬದಲಾಗಬಲ್ಲರೆಂದು, ಆ ವಿಧವಾಗಿ ಬದಲಾಯಿಸುವುದಕ್ಕೆ ಯಾವಾಗ ಅಧರ್ಮಗಳು ಭೂಮಿಮೇಲೆ ಹೆಚ್ಚಾಗುತ್ತವೋ ಆಗ ನಾನು ಬಂದು ಧರ್ಮಗಳನ್ನು ಪುನಃ ಪುನರುದ್ಧರಿಸುತ್ತೇನೆಂದು ತಿಳಿಸಿದ್ದಾನೆ ಹೊರತು ಸಾಯಿಸುತ್ತೇನೆಂದು ಎಲ್ಲಿಯೂ ಹೇಳಲಿಲ್ಲ. ದೇವರ ವಿಧಾನ ತಿಳಿಯದವರು ಅವರಿಗೆ ತೋಚಿರುವುದು ಆಲೋಚಿಸದೆ ಬರೆಯುವುದರಿಂದ ಅದೇ ಭಗವದ್ಗೀತೆಯಲ್ಲಿ ಗುಣತ್ರಯ ವಿಭಾಗಯೋಗದಲ್ಲಿನ 14, 15, 16, 17, 18 ಶ್ಲೋಕಗಳಲ್ಲಿ ಯಾವ ಗುಣದಲ್ಲಿ ಮರಣಿಸಿದವನು ಅದೇ ಗುಣಗಳಲ್ಲಿಯೇ ಜನ್ಮಿಸಿ ಅಂತಹ ಪ್ರವರ್ತನೆಯನ್ನೇ ಹೊಂದಿರುತ್ತಾರೆಂದು ಸಹ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಅಕ್ಷರಪರಬ್ರಹ್ಮವೆನ್ನುವ ಅಧ್ಯಾಯದಲ್ಲಿ 6ನೇ ಶ್ಲೋಕದಲ್ಲಿ **"ಯಂಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತ್ತೇ ಕಳೇಬರಮ್, ತಂ ತಮೇವೈತಿ ಕೌಂತೇಯ! ಸದಾ ತದ್ಭಾವ ಭಾವಿತಃ"** ಎಂದು ಬರೆಯಲಾಗಿದೆ. ಇದರ ಭಾವವುಯಾವ ಭಾವದಲ್ಲಿ ಯಾವ ಗುಣದಲ್ಲಿ ಮನುಷ್ಯ ಮರಣಿಸುತ್ತಿದ್ದಾನೋ ಅದೇ ಭಾವ ಅದೇ ಗುಣ ಹೊಂದಿದ ಜನ್ಮವನ್ನು ನಂತರ ಹೊಂದುತ್ತಿದ್ದಾನೆಂದು ಇದೆ. ಇದನ್ನನುಸರಿಸಿ ದುರ್ಮಾರ್ಗ ಭಾವ, ಕೆಟ್ಟ ಗುಣಗಳು ಹೊಂದಿದವನು ಮರಣಿಸಿದರೆ ನಂತರ ಕೆಟ್ಟ ಗುಣಗಳು ಹೊಂದಿದ ಜನ್ಮವೇ ಹೊಂದುತ್ತಿದ್ದಾನೆಂದು ತಿಳಿಯುತ್ತಿದೆ.

ಇದರ ಪ್ರಕಾರ ದುರ್ಮಾರ್ಗನು ಮರಣಿಸಿದರೇ ದುರ್ಮಾರ್ಗನಾಗಿಯೇ ಹುಟ್ಟುವನೆಂದು, ಅಜ್ಞಾನಿ ಅಜ್ಞಾನಿಯಾಗಿಯು ಜ್ಞಾನಿ ಜ್ಞಾನಿಯಾಗಿಯು ಮರಣಿಸಿದ ನಂತರ ಕೂಡ ಇರುವನೆಂದು ತಿಳಿಯುತ್ತಿದೆ. ಉದ್ಯೋಗಿ ಬೇರೆ ಊರಿಗೆ ವರ್ಗಾವಣೆ ಆದಂತೆ ಜೀವಿಯು ಶರೀರ ಬದಲಾವಣೆ ಆಗುತ್ತಿದ್ದಾನೆ. ಒಬ್ಬ ಜಿಲ್ಲಾ ಕಲೆಕ್ಟರ್ ಇನ್ನೊಂದು ಜಿಲ್ಲೆಗೆ ವರ್ಗಾವಣೆಯಾದರೆ ಆ ಜಿಲ್ಲೆಯಲ್ಲಿ ಕೂಡ ಕಲೆಕ್ಟರ್ ಆಗಿಯೇ ಇರುವಂತೆ ಒಬ್ಬ ದುರ್ಮಾರ್ಗನು ಮತ್ತೊಂದು

ಶರೀರಕ್ಕೆ ಬದಲಾದರೆ ಅಲ್ಲಿ ಆ ಶರೀರದಲ್ಲಿ ಕೂಡ ದುರ್ಮಾರ್ಗನಾಗಿಯೇ ಇರುವನು. ಆದ್ದರಿಂದ ದೇವರು ದುರ್ಮಾರ್ಗರನ್ನು ಸಾಯಿಸಿ ಇಲ್ಲದಂತೆ ಮಾಡುತ್ತಾನೆಂದುಕೊಳ್ಳುವುದು ತಪ್ಪು. ದೇವರು ತನ್ನ ಜ್ಞಾನದಿಂದ ಧರ್ಮಗಳನ್ನು ಬೋಧಿಸಿ ಅಧರ್ಮಪರರನ್ನು ಧರ್ಮಪರರನ್ನಾಗಿ, ಅಜ್ಞಾನಿಗಳನ್ನು ಜ್ಞಾನಿಗಳಾಗಿ ಶರೀರವಿದ್ದಂತೇ ಬದಲಾಯಿಸುವನು ಆದರೆ ಶರೀರವನ್ನು ನಾಶಮಾಡಿ ಇಲ್ಲದಂತೆ ಮಾಡುತ್ತೇನೆಂದು ಹೇಳಲಿಲ್ಲವೆಂದು ತಿಳಿಯಬೇಕು. ದುರ್ಮಾರ್ಗರನ್ನು ಸಂಹರಿಸಿ ಧರ್ಮಸಂಸ್ಥಾಪನೆ ಮಾಡುವನೆಂದು ಬರೆದವರೆಲ್ಲರೂ ತಪ್ಪಾಗಿ ಅರ್ಥೈಸಿಕೊಂಡಂತೇ ಎಂದು ತಿಳಿಯುತ್ತಿದೆ.

ನೀವು ಬರೆದ ತ್ರೈತಸಿದ್ಧಾಂತ ಭಗವದ್ಗೀತೆಯಲ್ಲಿ ಹೊರತು ಉಳಿದ ಬರೆಯಲ್ಪಟ್ಟ ಎಲ್ಲ ಗೀತೆಗಳಲ್ಲಿಯೂ ಸಂಹರಿಸುವುದೇ ಎಂದು ಬರೆದಿದ್ದಾರೆ ಅಲ್ಲವೆ! ಇಷ್ಟು ಮಂದಿಗೆ ತಿಳಿಯದಿರುವುದು ನಿಮ್ಮೊಬ್ಬರಿಗೇ ತಿಳಿದಿದೆಯಾ! ಎಂದು ಪ್ರಶ್ನಿಸಬಹುದು. ಎಷ್ಟು ಮಂದಿ ಹೇಳಿದ್ದಾರೆ ಎನ್ನುವುದು ಪ್ರಶ್ನೆ ಅಲ್ಲ ಆದರೆ ಎಷ್ಟು ಸತ್ಯ ಎನ್ನುವುದು ಮುಖ್ಯವಾದ ಉತ್ತರ. **ಅಸತ್ಯವನ್ನು ಸಾವಿರಮಂದಿ ಹೇಳಿದರೂ ಅದು ಸತ್ಯವಲ್ಲ, ಸತ್ಯವನ್ನು ಸಾವಿರಮಂದಿ ಅಲ್ಲಗಳೆದರೂ ಅದು ಅಸತ್ಯವಲ್ಲ** ಎನ್ನುವ ಸೂತ್ರದ ಪ್ರಕಾರ ಸುಮಾರು ಮೂರು ನೂರು ಭಗವದ್ಗೀತೆಗಳ ವ್ಯಾಖ್ಯಾನಗಳಲ್ಲಿ ದುರ್ಮಾರ್ಗರು ಸಂಹರಿಸಲ್ಪಡುವರೆನ್ನುವ ಮಾತು ಅಸತ್ಯವೇ ಆಗುತ್ತದೆ. ಇನ್ನೂ ಯೋಚಿಸಿದರೇ ಭಗವದ್ಗೀತೆ ಜ್ಞಾನಯೋಗದಲ್ಲಿನ ಎಂಟನೆ ಶ್ಲೋಕದಲ್ಲಿ ಅಧರ್ಮಪರರಾದ ದುರ್ಮಾರ್ಗರನ್ನು ಸಂಹರಿಸುವುದು ಸತ್ಯವೆಂದರೇ, ಅಕ್ಷರಪರಬ್ರಹ್ಮಯೋಗವೆನ್ನುವ ಅಧ್ಯಾಯದಲ್ಲಿ ಆರನೆ ಶ್ಲೋಕದಲ್ಲಿ ಯಾವ ಭಾವನೆಯಲ್ಲಿ ಮರಣಿಸುವವನು ಅದೇ ಭಾವನೆಯಲ್ಲಿಯೇ ಜನ್ಮಿಸುವನೆನ್ನುವ ಮಾತು ಅಸತ್ಯವಾಗುತ್ತದೆ. ದುರ್ಮಾರ್ಗನು ದುರ್ಮಾರ್ಗನನಾಗಿಯೇ ಸನ್ಮಾರ್ಗನು ಸನ್ಮಾರ್ಗನಾಗಿಯೇ ಹುಟ್ಟುವನೆನ್ನುವ ಮಾತು ಸತ್ಯವೆಂದರೇ, ಜ್ಞಾನಯೋಗದಲ್ಲಿನ ಎಂಟನೆಯ ಶ್ಲೋಕದಲ್ಲಿ ದುರ್ಮಾರ್ಗರನ್ನು ಸಂಹರಿಸುತ್ತೇನೆನ್ನುವ ಮಾತು ಅಸತ್ಯವಾಗುತ್ತದೆ. ಈ ವಿಧವಾಗಿ ದೇವರು

ಒಂದು ಕಡೆ ಸತ್ಯ ಮತ್ತೊಂದು ಕಡೆ ಅಸತ್ಯ ಹೇಳುವನಾ? ನೀವೇ ಆಲೋಚಿಸಿರಿ. ದೇವರು ಎಲ್ಲಿ ಏನು ಹೇಳಿದರೂ ಸತ್ಯವೇ ಹೇಳುವನು, ಅಸತ್ಯವನ್ನು ಹೇಳುವುದಿಲ್ಲ. ಆದ್ದರಿಂದ ನಾವು ಅರ್ಥ ಮಾಡಿಕೊಳ್ಳುವುದರಲ್ಲಿಯೇ ಯಾವುದೋ ಲೋಪವಿದೆಯೆಂದು ತಿಳಿದುಕೊಳ್ಳಬೇಕು.

ಭಗವದ್ಗೀತೆಯಲ್ಲಿ ಪಾಪಾತ್ಮರನ್ನು ದೇವರು ಸಂಹರಿಸುತ್ತಾನೆಂದು ಹಿಂದೂಮತದಲ್ಲಿನ ಬೋಧಕರು ಬೋಧಿಸುತ್ತಿರುವಾಗ, ಕ್ರೈಸ್ತವ ಮತದಲ್ಲಿನ ಬೋಧಕರು ಪಾಪಾತ್ಮರನ್ನು ದೇವರು ಕ್ಷಮಿಸುತ್ತಾನೆಂದು, ತನ್ನ ರಕ್ತದಿಂದ ಪಾಪಾತ್ಮರ ಪಾಪಗಳನ್ನು ತೊಳೆದುಹಾಕುತ್ತಾನೆಂದು ಹೇಳುತ್ತಿದ್ದಾರೆ. ಗೀತೆಯಲ್ಲಿ ದೇವರು ಹೇಳದ ಮಾತನ್ನು ಹಿಂದೂ ಬೋಧಕರು ಹೇಗೆ ಹೇಳುತ್ತಿದ್ದಾರೋ, ಹಾಗೆಯೇ ಬೈಬಲ್‌ನಲ್ಲಿ ದೇವರು ಹೇಳದ ಮಾತನ್ನು ಕ್ರೈಸ್ತವ ಬೋಧಕರು ಸಹ ಹೇಳುತ್ತಿದ್ದಾರೆಂದು ತಿಳಿಯುತ್ತಿದೆ. ಪ್ರವಕ್ತರು ಹೇಳಿದ ಮಾತುಗಳಲ್ಲಿನ ಜ್ಞಾನವನ್ನು ತಿಳಿಯದ ಮನುಷ್ಯರು ಅವರ ಮಾತುಗಳನ್ನು ವಕ್ರೀಕರಿಸುವುದು ನಡೆದಿದೆ. ಹಿಂದೂ ಬೋಧಕರ ಮಾತಿನ ಪ್ರಕಾರ ಕೃಷ್ಣನು ಎಷ್ಟು ಮಂದಿ ದುರ್ಮಾರ್ಗರನ್ನು ಸಾಯಿಸಿದ್ದಾನೆಂದು ನೋಡಿದರೇ, ಆ ದಿನ ಭೂಮಿಮೇಲೆ ಲಕ್ಷ ಸಂಖ್ಯೆಯಲ್ಲಿ ದುರ್ಮಾರ್ಗರು, ನೂರಾರು ಸಂಖ್ಯೆಯಲ್ಲಿ ಸನ್ಮಾರ್ಗರು ಇದ್ದರು. ಕೃಷ್ಣನು ತನ್ನ ಜನ್ಮದಲ್ಲಿ ಸಾಯಿಸುವುದು, ಸಾಯಿಸಲ್ಪಡುವುದು ಐದುಮಂದಿಯನ್ನು ಮಾತ್ರ. ಅದರಲ್ಲಿ ಕಂಸನು, ನರಕಾಸುರನು, ಶಿಶುಪಾಲನೆನ್ನುವ ಕೆಟ್ಟವರನ್ನು ಮೂವರನ್ನು, ಭೀಷ್ಮನು, ಕರ್ಣನೆನ್ನುವ ಇಬ್ಬರು ಒಳ್ಳೆಯವರನ್ನು. ಗೀತೆಯಲ್ಲಿನ ದುರ್ಮಾರ್ಗರನ್ನು ಸಾಯಿಸುತ್ತಾನೆನ್ನುವಂತೆ ಆದಿನದ ಅಧರ್ಮಪರರೆಲ್ಲರನ್ನೂ ಸಹ ಸಾಯಿಸಲಿಲ್ಲ. ಸಾಯಿಸಿರುವವು, ಸಾಯಿ ಸಲ್ಪಟ್ಟಿರುವವು ಸಂದರ್ಭಾನುಸಾರ ನಡೆದಿರುವವೇ ಹೊರತು ಅಲ್ಲಿ ಅವರು ದುರ್ಮಾರ್ಗರೆನ್ನುವ ವಿಚಕ್ಷಣೆ ಇಲ್ಲ. ಹಾಗಿದ್ದರೇ ಸುಚರಿತ್ರೆ ಇರುವ ಭೀಷ್ಮನನ್ನು, ದಾನಶೀಲಿ ಸ್ವಾಮಿ ಧರ್ಮಪರಾಯಣನಾದ ಕರ್ಣನನ್ನು ಸಾಯಿಸುವವನೇ ಅಲ್ಲ. ಗೀತೆಯಲ್ಲಿ ಅಧರ್ಮಪರರೆಲ್ಲರನ್ನು ಸಂಹರಿಸುತ್ತೇನೆಂದು ತಪ್ಪಾಗಿ

ಬರೆದುಕೊಂಡಂತೆ ಕೃಷ್ಣನು ಅದೇ ಕೆಲಸವಾಗಿ ಅಧರ್ಮಪರರನ್ನು ಸಾಯಿಸುವ ಕಾರ್ಯ ಇಟ್ಟುಕೊಳ್ಳಲಿಲ್ಲ, ಅಂತಹವರನ್ನು ಯಾರನ್ನೂ ಸಾಯಿಸಲೂ ಇಲ್ಲ. ಹಾಗೇ ಬೈಬಲ್‌ನಲ್ಲಿ ತನ್ನ ರಕ್ತದಿಂದ ಪಾಪಾತ್ಮರ ಪಾಪವನ್ನು ತೊಳೆದುಹಾಕುತ್ತೇನೆಂದು ಹೇಳಲೂ ಇಲ್ಲ. ಯೇಸುಪ್ರಭು ತಾನಿದ್ದಾಗ ಯಾರನ್ನು ತನ್ನ ರಕ್ತದಿಂದ ತೊಳೆಯಲೂ ಇಲ್ಲ. ಒಂದು ಸಂದರ್ಭದಲ್ಲಿ ತನ್ನ ಹನ್ನೆರಡು ಮಂದಿ ಶಿಷ್ಯರಿಗೆ ದ್ರಾಕ್ಷರಸವನ್ನು ಕೊಟ್ಟು ಇದು ನನ್ನ ನಿಬಂಧನೆ ರಕ್ತವೆಂದು ಹೇಳಿದ್ದಾನೆ. ಆ ಮಾತನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಎಷ್ಟೋ ತಪ್ಪಾಗಿ ಅರ್ಥೈಸಿಕೊಂಡ ಬೋಧಕರು ಇಂದಿಗೂ ಆ ಮಾತನ್ನು ಕುರಿತು ಯೋಚಿಸದೆ ಒಬ್ಬರು ಏನು ಹೇಳಿದರೇ ಮತ್ತೊಬ್ಬರು ಅದೇ ಹೇಳುತ್ತಾ ಹೋಗುತ್ತಿದ್ದಾರೆ. ಕೃಷ್ಣನು ತನ್ನ ಜೀವಿತ ಕಾಲದಲ್ಲಿ ಯಾವ ದುರ್ಮಾರ್ಗನನ್ನು ಸಾಯಿಸದಂತೆ, ಪ್ರಭು ಕೂಡ ಬದುಕಿರುವಾಗಾಗಲಿ ಮರಣಿಸಿದಾಗಾಗಲಿ ತನ್ನ ರಕ್ತದಿಂದ ಯಾವ ಪಾಪಾತ್ಮನ ಪಾಪವನ್ನು ತೊಳೆಯಲಿಲ್ಲ. ಬದುಕಿರುವಾಗ ತನ್ನ ದೈವಶಕ್ತಿಯಿಂದ ಇತರರ ಪಾಪವನ್ನು ಕ್ಷಮಿಸಿ ರೋಗಗಳಿಂದ ವಿಮುಕ್ತನನ್ನು ಮಾಡಿದ್ದಾನೆ ಹೊರತು ಆಗಲೂ ಕೂಡ ತನ್ನ ರಕ್ತವನ್ನು ಉಪಯೋಗಿಸಲಿಲ್ಲ. ತನ್ನನ್ನು ಒಪ್ಪಿಕೊಂಡು ತಾನು ಹೇಳಿರುವ ಜ್ಞಾನಪದ್ಧತಿ ಪ್ರಕಾರ ನಡೆದುಕೊಳ್ಳುವವರು ಪಾಪದಿಂದ ವಿಮುಕ್ತಿ ಹೊಂದುವರೆಂದು, ಅಂತಹವರು ಬದಲಾದ ಮನಸ್ಸು ಹೊಂದಿ ಸನ್ಮಾರ್ಗರಾಗಿ ಬದಲಾಗಿಹೋಗುವರೆಂದಿದ್ದಾನೆ. ತನ್ನ ವಾಕ್ಯಗಳೇ ಮಾನವರಿಗೆ ರಕ್ಷಣೆ ಎಂದು, ದೇವರ ವಾಕ್ಯಗಳು ತಿಳಿದು ನಡೆದುಕೊಳ್ಳುವುದೇ ಜೀವ ಜಲವನ್ನು ಹೊಂದಿದಂತೆಯೆಂದು, ನಾಶನದಿಂದ ಹೊರಗೆ ಬೀಳುವುದೆಂದು ತಿಳಿಸಿದ್ದಾನೆ. ಹಾಗಲ್ಲದೆ ರಕ್ತದಿಂದ ಪಾಪಶುದ್ಧಿ ಎಂದರೇ ಅದು ಅಸತ್ಯವೆಂದು ದೇವರಾದ ಪ್ರಭು ಹಾಗೆ ಹೇಳಲಿಲ್ಲವೆಂದು ಅರ್ಥವಾಗುತ್ತಿದೆ.

ಆ ದಿನ ಪ್ರಭು ಶರೀರದಲ್ಲಿದ್ದ ರಕ್ತವನ್ನು ಚಿತ್ರಹಿಂಸೆಗಳಿಂದ ಮೊಳೆಗಳು ಹೊಡೆದು ಸೋರಿಹೋಗುವಂತೆ ಮಾಡಿರುವುದು ಪಾಪಾತ್ಮರಾದ ದುರ್ಮಾರ್ಗರು ಅಲ್ಲವೆ! ಪ್ರಭು ಮರಣಕ್ಕೆ ಕಾರಣ ನಾವು ಗುರುಗಳೆಂದು ಹೇಳಿಕೊಳ್ಳುವ

ಕೃಪಾವಂತಹ ಪಾಪಾತ್ಮರು ಅಲ್ಲವೆ! ಆದಿನ ಪ್ರಭುವನ್ನು ಆತನ ಮಾತುಗಳನ್ನು ಅರ್ಥ ಮಾಡಿಕೊಂಡವರು ಪವಿತ್ರರಾಗಿದ್ದಾರೆ, ಆದರೆ ಅರ್ಥ ಮಾಡಿಕೊಳ್ಳದವರು ಪಾಪಾತ್ಮರಾಗಿಯೇ ಇದ್ದುಹೋಗಿದ್ದಾರೆ. ಈ ದಿನ ಬೋಧಕರು ಹೇಳಿಕೊಂಡಂತೆ ಪ್ರಭು ರಕ್ತದಿಂದ ಪರಿಶುದ್ಧರೆಂದುಕೊಂಡರೇ, ಪ್ರಭು ಮರಣಕ್ಕೆ ತಾನೇ ಕಾರಣವೆಂದು, ತಾನು ಪಾಪ ಮಾಡಿದ್ದೇನೆಂದು ತಿಳಿದುಕೊಂಡ ಯೂದಾ ಪ್ರಭುವು ಮರಣಿಸಿದಾಗ ಆತನ ರಕ್ತವನ್ನು ತನ್ನ ಮೇಲೆ ಸ್ವಲ್ಪವಾದರೂ ಹಾಕಿಕೊಂಡಿದ್ದಾನಾ? ಈ ದಿನ ನಮಗೆ ತಿಳಿದಿರುವುದು ಆದಿನ ಯೂದಾಗೆ ತಿಳಿದಿಲ್ಲವಾ! ಇದೆಲ್ಲವೂ ನೋಡಿದರೇ ಹಿಂದೂಗಳು ಗೀತೆಯನ್ನು ಅಪಾರ್ಥ ಮಾಡಿಕೊಂಡಂತೆ ಕ್ರೈಸ್ತರು ಕೂಡ ಪ್ರಭು ವಾಕ್ಯಗಳನ್ನು ಅಪಾರ್ಥ ಮಾಡಿಕೊಂಡಿದ್ದಾರೆಂದೇ ಹೇಳಬಹುದು.

ದೇವರೇ ಮನುಷ್ಯನಾಗಿ ಬಂದು ಹೇಳಿದ ಮಾತುಗಳನ್ನು ಅರ್ಥ ಮಾಡಿಕೊಳ್ಳದೆ ಅಪಾರ್ಥ ಮಾಡಿಕೊಂಡು ಮನುಷ್ಯ ಅಜ್ಞಾನದಲ್ಲಿ ಮುಳುಗಿಹೋಗುತ್ತಿದ್ದಾನೆ. ತನ್ನ ಅಜ್ಞಾನ ಸ್ಥಿತಿಯನ್ನು ಅಂದಾಜು ಹಾಕಿಕೊಳ್ಳದೆ ತನಗೆ ತಿಳಿದಿರುವುದೇ ನಿಜವಾದ ಜ್ಞಾನವೆಂದು ತಿಳಿದು ಅದನ್ನು ಇತರರಿಗೆ ಹೇಳುತ್ತಿರುವುದು ನಡೆಯುತ್ತಿದೆ. **ದೇವರ ಜ್ಞಾನವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ ಮನುಷ್ಯ ಯಾವ ಮತದಲ್ಲಿ ಇದ್ದರೂ, ಇರುವ ಮತವನ್ನು ಬಿಟ್ಟು ಇತರೆ ಮತದೊಳಗೆ ಹೋದರೂ ನಿಷ್ಪ್ರಯೋಜನವೇ ಆಗುತ್ತದೆ.** ದೇವರು ಪ್ರಪಂಚ ಹುಟ್ಟಿದಾಗಿನಿಂದ ಇದ್ದಾನೆ. ದೇವರು ಜಗತಿಯನ್ನು ಸೃಷ್ಟಿಸಿದ ನಂತರ ಅಜ್ಞಾನದೊಂದಿಗೆ ಜ್ಞಾನವನ್ನು ಸಹ ಭೂಮಿಮೇಲೆ ಇರುವಂತೆ ಮಾಡಿದ್ದಾನೆ. ಮೊದಲಿನಿಂದ ಜ್ಞಾನ ಇಲ್ಲ ಎಂದುಕೊಳ್ಳುವುದು, ಹಾಗೆಯೇ ದೇವರು ಕೂಡಾ ಮೊದಲಿನಿಂದ ಇಲ್ಲ ಮಧ್ಯದಲ್ಲಿ ಬಂದಿದ್ದಾನೆಂದುಕೊಳ್ಳುವುದು ತಪ್ಪಾಗುತ್ತದೆ. ದ್ವಾಪರಯುಗದಲ್ಲಿ ಕೃಷ್ಣನ ರೂಪದಿಂದ ಬಂದು ಭಗವದ್ಗೀತೆಯನ್ನು ಹೇಳಿದರೇ ಹಿಂದೂಗಳಾಗಿದ್ದು ಅದರಲ್ಲಿನ ಜ್ಞಾನವನ್ನು ಗ್ರಹಿಸದೆ, ಹೇಳಿದವನು ಯಾರೆಂದು ತಿಳಿದುಕೊಳ್ಳದೆ ಕಲಿಯುಗದವರೆಗು ಜ್ಞಾನವಿಲ್ಲವೆಂದು, ಕಲಿಯುಗದವರೆಗು

ದೇವರು ಮನುಷ್ಯನಾಗಿ ಅವತರಿಸಲಿಲ್ಲವೆಂದು ಅಂದುಕೊಳ್ಳುವುದು ಕುರುಡುತನವಲ್ಲವೆ!

ಉದಾಹರಣೆಗೆ ಅಂತಹ ಅಜ್ಞಾನ ಕುರಡುತನವಿರುವ ಒಬ್ಬ ಬ್ರಾಹ್ಮಣನು ಹಿಂದೂ ಮತ ಬಿಟ್ಟು ಕ್ರೈಸ್ತವ ಮತದೊಳಗೆ ಹೋಗಿ ಕೃಷ್ಣನು ದೇವರು ಅಲ್ಲವೆಂದು, ಗೀತೆ ದೈವಜ್ಞಾನ ಅಲ್ಲವೆಂದ ವಿಷಯವನ್ನು ವಿವರಿಸಿಕೊಳ್ಳೋಣ. ಆಂಧ್ರಪ್ರದೇಶ್‌ನಲ್ಲಿ ಪರವಸ್ತುಚಿನ್ನಯಸೂರಿ ಎನ್ನುವ ಬ್ರಾಹ್ಮಣ ಪಂಡಿತನಿದ್ದನು. ಆತನ ವಂಶದಲ್ಲಿ ಹುಟ್ಟಿದ ಪರವಸ್ತು ಸೂರ್ಯನಾರಾಯಣರಾವು ಎನ್ನುವ ಬ್ರಾಹ್ಮಣ ಪೂಜಾರಿ ಇದ್ದನು. ಆತನು ವೇದಗಳು ಪುರಾಣಗಳು ಉಪನಿಷತ್ತುಗಳು ಭಗವದ್ಗೀತೆ ಎಲ್ಲವೂ ಓದಿದ್ದಾನೆ. ಗೀತೆಯನ್ನು ಓದಿದರೂ ವೇದಗಳೇ ಗೀತೆಗಿಂತ ದೊಡ್ಡವೆಂದುಕೊಂಡಿದ್ದಾನೆ. ಪುರಾಣಗಳು ಸತ್ಯವೆಂದುಕೊಂಡಿದ್ದಾನೆ. ಪುರಾಣಗಳೆಂದರೆ ಶಾಸ್ತ್ರಬದ್ಧ ಅಲ್ಲವೆಂದು, ಅಸತ್ಯಗಳೊಂದಿಗೆ ಕೂಡಿಕೊಂಡಿರುವವೆಂದು, ಆದ್ದರಿಂದಲೇ ಅವುಗಳಿಗೆ ಕಲ್ಪಿತ ಪುರಾಣಗಳೆಂದು ಹೆಸರುಹೊಂದಿದೆಯೆಂದು ಸೂರ್ಯನಾರಾಯಣರಾವುಗೆ ತಿಳಿಯದೆ ಹೋಗಿದೆ. ಅದರಿಂದ ಹಿಂದೂ ಧರ್ಮಗಳು ತಿಳಿಸಿದವುಗಳಲ್ಲಿ ಶಿರೋಮಾಣಿಕ್ಯವಾದ ಗೀತಾಶಾಸ್ತ್ರವನ್ನೇ ಕೆಳಮಟ್ಟದ್ದಾಗಿ ನೋಡಿದ್ದಾನೆ. ಗೀತೆಯನ್ನು ಹೇಳಿದ ಕೃಷ್ಣನನ್ನು ಜ್ಞಾನವಿಲ್ಲದವನನ್ನಾಗಿ ಅರ್ಥ ಮಾಡಿಕೊಂಡಿದ್ದಾನೆ. ಅದರಿಂದ ಹಿಂದೂಮತದಲ್ಲಿಯೇ ಸಾರಾಂಶವಿಲ್ಲವೆಂದು ಕ್ರೈಸ್ತವ ಮತದೊಳಗೆ ಸೇರಿದ್ದಾನೆ. ಸೇರುವುದೇ ಅಲ್ಲದೆ ಕೃಷ್ಣನನ್ನು ದೇವರು ಅಲ್ಲವೆಂದು ಪ್ರಭು ಮಾತ್ರವೇ ದೇವರೆಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ಪ್ರಭು ಪ್ರಪಂಚ ಕೋರಿಕೆಗಳು ನೆರವೇರಿಸುವವನೆಂದು ಎಲ್ಲರಿಗೂ ತಿಳಿಯುವಂತೆ ಹಾಲಿನ ಡಬ್ಬಿಗಳಿಗೆ, ಅಕ್ಕಿ ಮೂಟೆಗಳಿಗೆ ಪ್ರಾರ್ಥನೆ ಮಾಡುವುದು, ಕೂಡಲೇ ಪ್ರಭು ಅವುಗಳನ್ನು ಕೊಟ್ಟಿದ್ದಾನೆಂದು ಹೇಳುವುದು ನಡೆದಿದೆ. ದೇವರು ಅಶಾಶ್ವಿತವಾದ ಪ್ರಪಂಚ ಕೋರಿಕೆಗಳು ನೆರವೇರಿಸುವವನು ಅಲ್ಲವೆಂದು, ಶಾಶ್ವಿತವಾದ ಮೋಕ್ಷ (ಪರಲೋಕ)ವನ್ನು ಕುರಿತು ತಿಳಿಸುವವನೆನ್ನುವ ಧರ್ಮಕ್ಕೆ ವಿರುದ್ಧವಾಗಿ ಬೋಧಿಸುವುದು ನಡೆದಿದೆ. ವೇದಗಳು ಪ್ರಪಂಚ ಗುಣಗಳೊಂದಿಗೆ

ಕೂಡಿಕೊಂಡಿವೆಯೆಂದು ತಿಳಿಸುತ್ತಿರುವ **"ತ್ರೈಗುಣ್ಯ ವಿಷಯಾವೇದಾ"** ಎನ್ನುವ ಧರ್ಮವಾಕ್ಯಕ್ಕೆ ವಿರುದ್ಧವಾಗಿ ಪರವಸ್ತು ಸೂರ್ಯನಾರಾಯಣರಾವು ಹೇಳಿದ್ದಾನೆ. **"ಗುಣಮಯಿ ಮಮ ಮಾಯಾ"** ಗುಣಗಳೊಂದಿಗೆ ಕೂಡಿಕೊಂಡಿರುವುದು ಮಾಯೆ ಎನ್ನುವ ಗೀತಾವಾಕ್ಯವನ್ನು ಮರೆತು ಮಾಯೆ(ಸಾತಾನ್)ಯೊಂದಿಗೆ ಕೂಡಿಕೊಂಡ ವೇದಗಳನ್ನು ದೊಡ್ಡದಾಗಿ ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ವೇದಗಳಲ್ಲಿನ ಶ್ಲೋಕಗಳಿಗೆ ಭಾವವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವುದು ನಡೆದಿದೆ. ಪ್ರಭು ವಾಕ್ಯಗಳನ್ನು ಕೂಡ ತಪ್ಪಾಗಿ ಅರ್ಥಮಾಡಿಕೊಳ್ಳುವುದು ನಡೆದಿದೆ. ಆತನು ಬರೆದ "ಋಜುದರ್ಶಿನಿ" ಎನ್ನುವ ಪುಸ್ತಕದಲ್ಲಿನ ಕೆಲವು ಘಟ್ಟಗಳನ್ನು ಇಲ್ಲಿ ಪ್ರಸ್ತಾವಿಸಿ, ಅದರಲ್ಲಿನ ಅಶಾಸ್ತ್ರೀಯತೆ ಏನೋ ಅಸಲಾದ ಸತ್ಯವೇನೋ ವಿವರಿಸೋಣ.

1946ನೇ ಸಂವತ್ಸರ ಶ್ರೀಕಾಕುಳಂ ಜಿಲ್ಲೆಯಲ್ಲಿ ಹುಟ್ಟಿದ ಸೂರ್ಯ ನಾರಾಯಣರಾವು ತನ್ನ 18ನೇ ವರ್ಷ ಉಪನಯನವನ್ನು ಪಡೆದು ಶ್ರೀ ಲಕ್ಷ್ಮಿನಾರಾಯಣಸ್ವಾಮಿ ಗುಡಿಯಲ್ಲಿ ಅರ್ಚಕವೃತ್ತಿಯನ್ನು ಕೈಹಿಡಿದಿದ್ದಾರೆ. ಋಗ್ವೇದ, ಸಾಮವೇದ, ತಾಂಡಿಯ ಮಹಾಬ್ರಾಹ್ಮಣ, ದೇವೀ ಭಾಗವತ, ಉಪನಿಷತ್ತುಗಳು, ಮಹಾಭಾರತ, ಭಗವದ್ಗೀತೆ, ವೇಮನ ಪದ್ಯಗಳು, ವಿಷ್ಣುಪುರಾಣ ಮುಂತಾದವುಗಳನ್ನು ಓದಿ ಪಂಡಿತನಾಗಿದ್ದಾನೆ. ಈ ವಿಧವಾಗಿ ಪುರಾಣಗಳನ್ನು, ಶಾಸ್ತ್ರಗಳನ್ನು, ವೇದಗಳನ್ನು ಬೆರೆಸಿಕೊಳ್ಳುವುದು ಮತ್ತು ಅವುಗಳ ತಾರತಮ್ಯಗಳು ತಿಳಿಯದೆ ಹೋಗುವುದು ಆತನಿಗೆ ಮೊದಲ ಅಜ್ಞಾನ ಮೆಟ್ಟಿಲಾಗಿದೆ. ಅಲ್ಲಿಂದ ಆತನ ಮೆದುಳಿಗೆ ಕೆಲವು ಒಳ್ಳೆಯ ಆಲೋಚನೆಗಳು ಬಂದರೂ ಅವುಗಳಿಗೆ ತಪ್ಪು ಉತ್ತರಗಳೇ ಸಿಕ್ಕಿವೆ. ದೇವತೆಗಳೆಲ್ಲರೂ ನಿಜವಾದ ದೇವರು ಅಲ್ಲವೆಂದು ಎಲ್ಲರಿಗೂ ಒಬ್ಬನೇ ಅಧಿಪತಿಯೆಂದು ಒಳ್ಳೆಯ ಆಲೋಚನೆ ಆತನಲ್ಲಿ ಉಂಟಾದಾಗ ಅದಕ್ಕೆ ಸರಿಯಾದ ಉತ್ತರವನ್ನು ಹುಡುಕಿಕೊಳ್ಳಲಾರದೆ ಹೋಗಿದ್ದಾನೆ. ಅಂದಿನಿಂದ ತಾನು ಒಬ್ಬ ದೇವರನ್ನು ಕಂಡುಕೊಳ್ಳುವುದು, ಆತನೇ ಯೇಸುಪ್ರಭು ಎಂದುಕೊಳ್ಳುವುದು ಒಳ್ಳೆಯದೇ ಆದರೂ ಅಲ್ಲಿಯವರೆಗು

ಯಾರೂ ದೇವರು ಅಲ್ಲ ಎಂದುಕೊಳ್ಳುವುದು, ಅಲ್ಲಿಯವರೆಗು ದೇವರು ಇಲ್ಲವೆಂದುಕೊಳ್ಳುವುದು ತಪ್ಪಲ್ಲವೆ! ತನಗೆ ತಿಳಿದ ಸತ್ಯದ ಪ್ರಕಾರ ನಡೆದುಕೊಳ್ಳದೆ ಇಲ್ಲಿಯವರೆಗು ಸತ್ಯವೇ ಇಲ್ಲವೆಂದುಕೊಳ್ಳುವುದು ತಪ್ಪಲ್ಲವೆ! ಹಿಂದೂಮತದಲ್ಲಿ ಜ್ಞಾನ ಇಲ್ಲವೆಂದುಕೊಳ್ಳುವುದು, ಕ್ರೈಸ್ತವ ಮತದಲ್ಲಿಯೇ ಜ್ಞಾನವಿದೆಯೆಂದು ಕೊಳ್ಳುವುದು, ಹಳೆ ಕೆರೆಯನ್ನು ಬಿಟ್ಟು ಹೊಸ ಕುಂಟೆಯನ್ನು ಸೇರಿದಂತೆ ಅಲ್ಲವೆ! ಅಲ್ಲಿಗೆ ನಿಲ್ಲದೆ ಕೃಷ್ಣನು ಅಜ್ಞಾನಿ ಎಂದು, ಹಿಂದೂಮತದಲ್ಲಿ ಸಾರವಿಲ್ಲವೆಂದು ಪುಸ್ತಕವನ್ನು ಬರೆಯುವುದು ಅಸಲಾದ ದೇವರನ್ನು ಹೀಯಾಳಿಸಿದಂತಲ್ಲವೆ! ತನಗೆ 24 ವರ್ಷಗಳು ವಯಸ್ಸು ಬರುವವರೆಗು ಬೈಬಲ್‌ನ್ನು ನೋಡಲಿಲ್ಲವೆಂದು, ಅಲ್ಲಿಯವರೆಗು ಬೈಬಲ್‌ನಲ್ಲಿನ ವಿಷಯ ಸ್ವಲ್ಪವಾದರೂ ತಿಳಿಯವೆಂದು ಹೇಳಿಕೊಂಡ ಸೂರ್ಯನಾರಾಯಣರಾವು ಅದಕ್ಕು ಮೊದಲೇ ಅವರ ಹಿರಿಯರೊಂದಿಗೆ ಮತ್ತಾಯ ಸುವಾರ್ತೆ 23ನೇ ಅಧ್ಯಾಯ 9,10 ವಚನಗಳನ್ನು ಕುರಿತು ವಾದಿಸಿದಂತೆ ಬರೆದುಕೊಂಡಿದ್ದಾನೆ. ಬೈಬಲ್ ತಿಳಿಯದೆಂದು ಹೇಳಿದ ತಾನೇ ಮೊದಲೇ ಅದನ್ನು ಕುರಿತು ವಾದಿಸಿದ್ದೇನೆಂದು ಹೇಳುವುದು ಅಸತ್ಯವಾಗಿ ಕಾಣಿಸುತ್ತಿದೆಯಲ್ಲವೆ! ಅದನ್ನು ಕುರಿತು ಆತನು ಹೇಳಿದ ವಿಧಾನವನ್ನು ಆತನ ಪುಸ್ತಕದಲ್ಲಿಯೇ ನೋಡೋಣ.

ಋಜುದರ್ಶಿನಿ 10ನೇ ಪುಟದಲ್ಲಿ ಈ ವಿಧವಾಗಿ **"ಬೈಬಲ್ ಹೀಗೆ ಬೋಧಿಸುತ್ತಿದೆ ಭೂಮಿ ಮೇಲೆ ತಂದೆಯೆಂದು ಯಾರಿಗಾದರೂ ಹೆಸರಿಟ್ಟು ಕರೆಯಬೇಡ. ಒಬ್ಬನೇ ನಿಮ್ಮ ತಂದೆ ಆತನು ಪರಲೋಕದಲ್ಲಿದ್ದಾನೆ. ಮತ್ತು ನೀವು ಗುರುಗಳೆಂದು ಕರೆಯಲ್ಪಡಬೇಡ. ಕ್ರಿಸ್ತ ಒಬ್ಬನೇ ನಿಮ್ಮ ಗುರುವೆಂದು ಯೇಸೇ ಸ್ವತಃವಾಗಿ ಮತ್ತಾಯ ಸುವಾರ್ತೆ 23ನೇ ಅಧ್ಯಾಯ 9,10 ವಚನಗಳಲ್ಲಿ ಬೋಧಿಸಿದ್ದಾನೆ. ಈ ವಿಧವಾದ ತರ್ಕವಿತರ್ಕಗಳು ವಾದ ಪ್ರತಿವಾದಗಳು ನಡೆದ ನಂತರ ನಾನೆಲ್ಲರಿಗಿಂತ ಚಿಕ್ಕವನಾದ್ದರಿಂದ ಗತ್ಯಂತರವಿಲ್ಲದೆ ಕೊನೆಗೆ ಮೌನವಾಗಿ ನಿಂತೆನು. ಯಥಾವಿಧಿಯಾಗಿ ಲಕ್ಷ್ಮಿನಾರಾಯಣ ಸ್ವಾಮಿ ಆಲಯದಲ್ಲಿ ಅರ್ಚಕತ್ವ**

**ಮಾಡಿಕೊಳ್ಳುತ್ತಾ, ಬಿಡುವಿನ ಸಮಯಗಳಲ್ಲಿ ಅನೇಕ ಗ್ರಂಥಗಳು ವೇದಗಳು, ಉಪನಿಷತ್ತುಗಳು ಮುಂತಾದವುಗಳನ್ನು ಓದುತ್ತಾ ಕಾಲಯಾಪನೆ ಮಾಡುತ್ತಿದ್ದೆನು."** ಎಂದು ಬರೆಯಲ್ಪಟ್ಟಿದೆ. ಈ ತರ್ಕ ಅವರ ಹಿರಿಯರೊಂದಿಗೆ 1964 ನೇ ವರ್ಷಕ್ಕೆ 1970ನೇ ವರ್ಷಕ್ಕೆ ಮಧ್ಯಕಾಲದಲ್ಲಿ ನಡೆದಿದೆ. 1970 ಸಂ॥ ಜೂನ್ ತಿಂಗಳು 10ನೇ ತಾರೀಖು ಯಜ್ಞಸಾಮಾಗ್ರಿಗೋಸ್ಕರ ಬಜಾರಿಗೆ ಹೋಗಿ ಅಲ್ಲಿ ಕ್ರೈಸ್ತವ ಪ್ರಚಾರಕರನ್ನು ನೋಡಿ ಅವರ ಹತ್ತಿರದಿಂದ ಮೊಟ್ಟಮೊದಲ ಬಾರಿ ಬೈಬಲ್‌ನ್ನು ಹೊಂದಿ 1970, ಜೂನ್ 12ನೇ ತಾರೀಖಿನಂದು ಮೊಟ್ಟಮೊದಲು ಓದಿದಂತೆ ಇದೆ.

ಋಜುದರ್ಶಿನಿ 17 ನೇ ಪುಟದಲ್ಲಿ **"ಅವರೆಲ್ಲರೂ ಅವರ ದೇವರನ್ನು ಕೊಂಡಾಡುತ್ತಾ ಆ ಅಂಗೀ ಧರಿಸಿದ ವ್ಯಕ್ತಿ (ಫಾದರ್) ಒಂದು ನೂತನ ಬೈಬಲ್ ನನಗೆ ಬಹೂಕರಿಸಿದನು."** ಎಂದು ಇದೆ.

ಋಜುದರ್ಶಿನಿ 18ನೇ ಪುಟದಲ್ಲಿ **"ಅತಿ ಭದ್ರವಾಗಿ ಬೈಬಲ್‌ನ್ನು ಬಚ್ಚಿಟ್ಟುಕೊಂಡು ಯಜ್ಞ ಸಾಮಾಗ್ರಿಯೊಂದಿಗೆ ಮನೆಯನ್ನು ಸೇರಿದೆನು. ಜೂನ್ 12 ದಿನ 1970 ನೆ ವರ್ಷ ರಾತ್ರಿ ಸಮಯದಲ್ಲಿ ಲಕ್ಷ್ಮಿನಾರಾಯಣ ಸ್ವಾಮಿ ಆಲಯದಲ್ಲಿ ಬೈಬಲ್‌ನ್ನು ಓದಲು ಆರಂಭಿಸಿದೆನು"** ಎಂದು ಬರೆಯಲಾಗಿದೆ. 1970 ನೇ ಸಂವತ್ಸರದಲ್ಲಿ ಮೊದಲು ಬೈಬಲ್‌ನ್ನು ನೋಡಿದ್ದರೇ ಅದಕ್ಕು ಮೊದಲೇ ಅದರಲ್ಲಿನ ವಿಷಯಗಳಾದ ಮತ್ತಾಯ ಸುವಾರ್ತೆ 23ನೇ ಅಧ್ಯಾಯ 9,10 ವಾಕ್ಯಗಳೊಂದಿಗೆ ಅವರ ಹಿರಿಯರನ್ನು ಹೇಗೆ ತರ್ಕಿಸಿದ್ದಾನೆ. ಹಾಗೆ ತರ್ಕಿಸಿದ್ದಾನೆಂದರೆ ಮೊದಲೇ ಬೈಬಲ್ ಓದಿರಬೇಕು. ಹಾಗಲ್ಲದೆ 1970 ರಲ್ಲಿ ಓದಿದ್ದಾನೆಂದು ಹೇಳುವುದು ಅಸತ್ಯವಲ್ಲವೆ! ಈ ವಿಧವಾಗಿ ಈತನ ವಾಕ್ಯಗಳಲ್ಲಿ ಎಷ್ಟೋ ಅಸತ್ಯಗಳಿರುವಂತೆ ಕಾಣಿಸುತ್ತಿದೆ. ಅಷ್ಟೇ ಅಲ್ಲದೆ ಯಜ್ಞಗಳ ಕುರಿತು ವೇದಗಳಲ್ಲಿ ತಿಳಿದುಕೊಂಡ ಸೂರ್ಯನಾರಾಯಣರಾವನ್ನು ಮಾಯೆ ಯಾವ ವಿಧವಾಗಿ ತಪ್ಪು ದಾರಿಯೊಳಗೆ ಕಳುಹಿಸಿದೆಯೋ ಕೆಳಗೆ ನೋಡೋಣ.

ಋಜುದರ್ಶಿನಿ 21 ನೇ ಪುಟದಲ್ಲಿ ಸೂರ್ಯನಾರಾಯಣರಾವು ಈ ವಿಧವಾಗಿ ಬರೆದಿದ್ದಾನೆ. **"ಸಾಮವೇದ ಎರಡನೆ ಭಾಗವಾದ ತಾಂಡಿಯ ಮಹಾಬ್ರಾಹ್ಮಣದಲ್ಲಿ ಈ ವಿಧವಾಗಿ ಇದೆ. ಶ್ಲೋ "ಪ್ರಜಾಪತಿರ್ಥೇ ವೇಭ್ಯಂ ಆತ್ಮಾನಾಂ ಯಜ್ಞಂ ಕೃತ್ವಾಪ್ರಾಯಶ್ಚಿತ್" ಇದರ ಭಾವವೇನೆಂದರೇ! ಪ್ರಜೆಗಳನ್ನು ಪರಿಪಾಲಿಸುವವನು ಪ್ರಜೆಗಳ ಪಾಪ ಪರಿಹಾರಾರ್ಥ ತನ್ನ ಸ್ವಂತ ಶರೀರವನ್ನು ಪ್ರಾಯಶ್ಚಿತ್ತವಾಗಿ ಹೊಡೆದು ಚೂರು ಮಾಡಿಕೊಂಡು ಯಜ್ಞಮಾಡುವನು. ಪ್ರಜಾಪತಿ ಎಂದರೆ 'ದೇವರು' ಎಂದು ಅರ್ಥ. ಅದಕ್ಕೇ ಆರ್ಯರು ಅಹಂ ಎಂದರೆ ಪರಿಶುದ್ಧನಾದ, ಸೃಷ್ಠಿಕರ್ತನಾದ ದೇವರು ಯಜ್ಞವಾಗಿ ಹೋದರೇನೇ ರಕ್ಷಣೆ ಉಂಟಾಗುತ್ತದೆಂದು ಹೇಳಿದ್ದಾರೆ."**

ಸೂರ್ಯನಾರಾಯಣರಾವು ಮೇಲಿನ ವಿಧವಾಗಿ ಬರೆದ ವಿಷಯಕ್ಕೆ ನಾವು ಹೇಳುವ ವಿವರವೇನೆಂದರೇ! ಆರು ಶಾಸ್ತ್ರಗಳಲ್ಲಿ ದೊಡ್ಡದಾದ, ಸ್ವತಃವಾಗಿ ದೇವರು ಭಗವಂತನ ರೂಪವಾಗಿ ಬಂದು ಹೇಳಿದ ಭಗವದ್ಗೀತಾ ಶಾಸ್ತ್ರದಲ್ಲಿ ಯಜ್ಞಗಳನ್ನು ಕುರಿತು ಹೇಳಿರುವಾಗ ಗೀತೆಯನ್ನು ಕೂಡ ಓದಿದ ಈತನಿಗೆ ಅದರಲ್ಲಿನ ಯಜ್ಞಗಳ ಶ್ಲೋಕಗಳು ಕಾಣಿಸದೆ ಶಾಸ್ತ್ರವಲ್ಲದ ವೇದಗಳಲ್ಲಿನ ಶ್ಲೋಕ ಕಾಣಿಸುವುದು ಆಶ್ಚರ್ಯವಾಗಿ ಇದೆ. ವೇದಗಳು ಮಾಯೆಯೊಂದಿಗೆ ಕೂಡಿಕೊಂಡಿರುವವೆಂದು, ಮಾಯೆಯನ್ನು ಜಯಿಸುವುದು ದುರ್ಲಭವೆಂದು ಹೇಳಿದ ಗೀತೆ ವಾಕ್ಯಗಳನ್ನು ಆರಿಸಿಕೊಳ್ಳದೆ ವೇದಗಳನ್ನೇ ಮುಖ್ಯವಾಗಿ ಆರಿಸಿಕೊಳ್ಳುವುದು ಮಾಯೆಯೊಂದರ ಕೆಲಸವಲ್ಲವೆ! ವೇದಗಳನ್ನು ತಾರ್ಕಾಣ ವಾಗಿ ತೆಗೆದುಕೊಂಡಾಗಲೇ ಆತನು ಮಾಯೆಯಲ್ಲಿ ಮುಳುಗಿಹೋಗು ವುದು ನಡೆದಿದೆ. ಅಷ್ಟೇ ಅಲ್ಲದೆ ತೆಗೆದುಕೊಂಡ ಆ ಶ್ಲೋಕಕ್ಕೆ ಭಾವವನ್ನು ತಪ್ಪಾಗಿ ಹೇಳಿಕೊಳ್ಳುವುದು ಬಹಳ ವಿಡ್ಡೂರ. ಮೊದಲಿಗೇ ಹೇಳಿಕೊಂಡರೆ ಸಾಮವೇದ ದಲ್ಲಿನ ಆ ಶ್ಲೋಕವೇ ಒಂದು ದೊಡ್ಡ ತಪ್ಪಾಗಿ ಹೇಳಲ್ಪಟ್ಟಿದೆ. "ಆತ್ಮಾನಾಂ ಯಜ್ಞಂ" ಎಂದು ಹೇಳಬಾರದು. ಹೇಳಿರುವುದರ ಪ್ರಕಾರವಾದರೂ ಆತ್ಮವನ್ನು ಯಜ್ಞ ಮಾಡಬೇಕೆಂದು ಅರ್ಥ ಹೇಳಿಕೊಳ್ಳದೆ, ಶರೀರವನ್ನು ಪ್ರಾಯಶ್ಚಿತ್ತವಾಗಿ

ಹೊಡೆದು ಚೂರು ಮಾಡಿಕೊಳ್ಳುವುದೆಂದು ಹೇಳಿಕೊಳ್ಳುವುದು ಪೂರ್ತಿ ತಪ್ಪಲ್ಲವೆ! ಯಜ್ಞ ಎರಡು ವಿಧಗಳೆಂದು ಒಂದು ದ್ರವ್ಯಯಜ್ಞವೆಂದು, ಎರಡನೆಯದು ಜ್ಞಾನಯಜ್ಞವೆಂದು, ದ್ರವ್ಯಯಜ್ಞಕ್ಕಿಂತ ಜ್ಞಾನಯಜ್ಞಶ್ರೇಷ್ಠವಾದುದೆಂದು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿರುವಾಗ ಆತ್ಮಯಜ್ಞವೆನ್ನುವುದು ಶಾಸ್ತ್ರವಿರುದ್ಧವಲ್ಲವೆ! ಯಜ್ಞವೆಂದರೇ ಸುಟ್ಟುಹೋಗುವುದೆಂದು ನಾವು ತಿಂದ ದ್ರವ್ಯಗಳು ಜೀರ್ಣಾಶಯ ದಲ್ಲಿ ಜಠರಾಗ್ನಿಯಿಂದ ಸುಟ್ಟುಹೋಗುವುದು ದ್ರವ್ಯಯಜ್ಞವೆಂದು, ಹಾಗೆಯೇ ನಮ್ಮ ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ ಎನ್ನುವ ಐದು ಜ್ಞಾನೇಂದ್ರಿಯಗಳ ಐದು ಜ್ಞಾನಗಳನ್ನು ಆತ್ಮಜ್ಞಾನವೆನ್ನುವ ಅಗ್ನಿಯಿಂದ ತಲೆಯಲ್ಲಿ ಸುಟ್ಟುಹಾಕುವು ದನ್ನು ಜ್ಞಾನಯಜ್ಞವೆಂದು ಅನ್ನುತ್ತಿದ್ದೇವೆ. ಗೀತೆಯಲ್ಲಿ ಐದು ಜ್ಞಾನೇಂದ್ರಿಯಗಳಿಂದ ಬರುವ ಕರ್ಮಗಳನ್ನು ಜ್ಞಾನಾಗ್ನಿಯಿಂದ ಸುಟ್ಟರೆ ಜ್ಞಾನಯಜ್ಞವಾಗುತ್ತದೆಂದು ಸ್ಪಷ್ಟವಾಗಿ ಹೇಳಿರುವಾಗ ಸೂರ್ಯ ನಾರಾಯಣರಾವು ಅವರು ಇವುಗಳನ್ನು ಬಿಟ್ಟು ಆತ್ಮನಾಂ ಯಜ್ಞವೆಂದು ಹೇಳುತ್ತಾ ತನ್ನ ಶರೀರವನ್ನು ಸಾಯಿಸಿ ಕೊಳ್ಳಬೇಕೆನ್ನುವುದು ವಿಚಿತ್ರವಾಗಿ ಇದೆ. ಅಷ್ಟೇ ಅಲ್ಲದೆ ತನ್ನ ಶರೀರವನ್ನು ಯಾರಾದರೂ ಹೊಡೆದು ಚೂರು ಮಾಡಿಕೊಂಡಾಗಲಿ, ಕತ್ತರಿಸಿಕೊಂಡಾಗಲಿ, ಮರಣಿಸುವು ದರಿಂದ ಹತ್ಯಾಪಾಪ ಸಂಭವಿಸುತ್ತದೆಂದು ತಿಳಿಯಬೇಕು. ಯಜ್ಞಗಳ ವಿಷಯ ವಿವರ ತಿಳಿಯದ ಈತನು, ಶಾಸ್ತ್ರಗಳಿಗು, ಪುರಾಣಗಳಿಗು, ವೇದಗಳಿಗು ತಾರತಮ್ಯ ತಿಳಿಯದ ಈತನು ನೇರವಾಗಿ ಭಗವದ್ಗೀತೆಯಲ್ಲಿ ದೇವರು ಹೇಳಿದ ಶ್ಲೋಕವನ್ನು ತಪ್ಪು ಹಿಡಿದಿದ್ದಾನೆ. ತಾನು ತಪ್ಪುಹಿಡಿಯುವುದು ತನ್ನ ಪ್ರಭುವನ್ನೇ ಎಂದು ತಿಳಿಯದೆ ಶ್ರೀಕೃಷ್ಣನನ್ನು ಸಾಧಾರಣ ಮನುಷ್ಯನಾಗಿ ಲೆಕ್ಕಿಸಿ ಬರೆದ ವಿಧಾನವನ್ನು ಕೆಳಗೆ ನೋಡೋಣ.

ಋಜುದರ್ಶಿನಿ 22ನೇ ಪುಟದಲ್ಲಿ **"ರಕ್ತ ಪ್ರೋಕ್ಷಿಸಲ್ಪಡದಂತೆ ಪಾಪ ವಿಮೋಚನ ಉಂಟಾಗುವುದಿಲ್ಲ. ಇದನ್ನನುಸರಿಸಿ ನೋಡಿದಾಗ ದುಷ್ಟನು ರಕ್ಷಣ ಹೊಂದಬೇಕೆಂದು ಲೇಖನಗಳು ಘೋಷಿಸುತ್ತಿವೆ. ಆದರೆ ಭಗವದ್ಗೀತೆ ಜ್ಞಾನಯೋಗ 8ನೇ ಶ್ಲೋಕದಲ್ಲಿ ದುಷ್ಟನು ನಾಶ ಆಗಬೇಕೆಂದು ಕೃಷ್ಣನು ಬೋಧಿಸುತ್ತಿದ್ದಾನೆ. ಇದು ವೇದಗಳಿಗೆ ವಿರುದ್ಧವಲ್ಲದೆ ಮತ್ತೇನಾಗುತ್ತದೆ?"** ಎಂದು ಬರೆಯಲ್ಪಟ್ಟಿದೆ.

24ನೇ ಪುಟದಲ್ಲಿ **"ದುಷ್ಟ ಶಿಕ್ಷಣ ಎಂದರೆ ವಿನಾಶಾಯಚ ದುಷ್ಕೃತಾಂ" ಎಂದು ಭಗವದ್ಗೀತೆ ಜ್ಞಾನಯೋಗ 4:8 ರಲ್ಲಿ ಶ್ರೀಕೃಷ್ಣನು ವೇದಗಳಿಗು, ದೇವರ ಸಂಕಲ್ಪಕ್ಕೂ ವಿರುದ್ಧವಾಗಿ ಬೋಧಿಸಿದನು. ದುಷ್ಟರನ್ನು ರಕ್ಷಿಸುವುದಕ್ಕೆ ಬದಲು ಶಿಕ್ಷಿಸುತ್ತಾ ನೀತಿವಂತರನ್ನು ರಕ್ಷಿಸುತ್ತಾ ಯುಗಯುಗದಲ್ಲಿ ಇಂತಹ ಕೆಲಸಗಳೇ ಮಾಡುತ್ತಾ ಧರ್ಮವನ್ನು ಸ್ಥಾಪಿಸುವುದಕ್ಕೆ ಅವತಾರವೆತ್ತುತ್ತಿದ್ದೇನೆಂದು ಸಮಸ್ತ ನೀತಿಗೆ ವಿರುದ್ಧವಾಗಿ ಹೇಳಲ್ಪಟ್ಟಿದೆ."** ಎಂದು ಸಹ ಬರೆದಿದ್ದಾನೆ.

ಋಜುದರ್ಶಿನಿ ಎಂದು ಪುಸ್ತಕಕ್ಕೆ ಹೆಸರಿಟ್ಟ ಸೂರ್ಯನಾರಾಯಣರಾವು ಅವರಿಗೆ ತನ್ನ ಪುಸ್ತಕದಲ್ಲಿ ಏನು ಋಜುವು ಕಾಣಿಸಿದೆಯೋ ಆದರೆ ನಮಗೆ ಕಾಣಿಸಿರುವುದೆಲ್ಲಾ ಅಸತ್ಯವೇ ಇದೆ. ಕೃಷ್ಣನು ಹೇಳಿರುವುದೇನೋ ತನಗೆ ಅರ್ಥವಾಗದೆ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಶ್ರೀಕೃಷ್ಣನು ಹೇಳಿರುವುದೇ ತಪ್ಪೆನ್ನುವುದು ಎಷ್ಟು ಸಮಂಜಸವಾಗಿ ಇದೆಯೋ ನೀವೇ ನೋಡಿರಿ. ಕೃಷ್ಣನು ದುಷ್ಟರನ್ನು ಧರ್ಮಬೋಧನೆಯಿಂದ ಇಲ್ಲದಂತೆ ಮಾಡುತ್ತೇನೆಂದಿದ್ದಾನೆ. ಆದರೆ ಸಾಯಿಸುತ್ತೇನೆಂದು ಎಲ್ಲಾದರೂ ಹೇಳಿದ್ದಾನಾ? ದುಷ್ಟರು ದುಷ್ಟರಾಗಿಯೇ ಹುಟ್ಟುವರೆಂದು ಅದೇ ಗೀತೆಯಲ್ಲಿ ಹೇಳಿದ ಕೃಷ್ಣನು, ದುಷ್ಟರು ಮರಣಿಸುವುದರಿಂದ ಇಲ್ಲದಂತೆ ಹೋಗುತ್ತಾರೆಂದು ಹೇಗೆ ಹೇಳಬಲ್ಲನು **'ಪರಿತ್ರಾಣಾಯ ಸಾಧೂನಾಂ'** ಎನ್ನುವ ಜ್ಞಾನಯೋಗ 8ನೇ ಶ್ಲೋಕದಲ್ಲಿ **ಧರ್ಮ ಸಂಸ್ಥಾಪನಾರ್ಥಾಯ** ಎಂದಿದ್ದಾನೆ ಆದರೆ ಅಸ್ತ್ರ ಶಸ್ತ್ರ ಸಂಸ್ಥಾಪನಾರ್ಥಾಯ ಎಂದು ಹೇಳಲಿಲ್ಲ ಅಲ್ಲವೆ! ದುಷ್ಟಜನರಿಗೆ ಧರ್ಮಗಳನ್ನು ಬೋಧಿಸಿ ಅವರಲ್ಲಿನ ದುಷ್ಟ ತನವನ್ನು ತೆಗೆದುಹಾಕಿ ಸಜ್ಜನರ ಸಂಖ್ಯೆ ಬೆಳೆಸುತ್ತೇನೆಂದು ಕೃಷ್ಣನು ಹೇಳಿದಾಗ ಅದು ಬ್ರಾಹ್ಮಣನಾದ ಸೂರ್ಯನಾರಾಯಣರಾವು ಅವರಿಗೆ ಅರ್ಥವಾಗದೆ ಅಡ್ಡವಾಗಿ ಮಾತನಾಡುವುದು ದೈವದೂಷಣೆ ಅಲ್ಲವೆ!

ಪಶುಗಳ ಹಾಲೆಲ್ಲವೂ ಬಿಳಿಯಾಗಿರುವವೇ ಆದರೂ ಎಮ್ಮೆ ಹಾಲು, ಹಸುವಿನ ಹಾಲು, ಕತ್ತೆ ಹಾಲು ಎಂದು ಬಿಡಿಬಿಡಿಯಾಗಿ ಇರುತ್ತವೆ. ಇವುಗಳ ಭೇದ ತಿಳಿಯದೆ ಎಲ್ಲ ಹಾಲೇ ಎಂದು ಎಲ್ಲ ಕುಡಿಯುವವೇ ಎಂದುಕೊಂಡರೇ

ಅದಕ್ಕಿಂತ ಬುದ್ಧಿ ಇಲ್ಲದವರಿರುವುದಿಲ್ಲ. ಸ್ವಲ್ಪ ತಿಳಿದವರಿಗಾದರೂ ಕತ್ತೆ ಹಾಲು ಕುಡಿಯುವುದಿಲ್ಲವೆಂದು, ಆಕಳು ಎಮ್ಮೆ ಹಾಲು ಮಾತ್ರ ಕುಡಿಯುವುದಕ್ಕೆ ಯೋಗ್ಯವೆಂದು, ಅದರಲ್ಲಿಯೂ ಎಮ್ಮೆ ಹಾಲಿಗಿಂತ ಹಸುವಿನ ಹಾಲು ಶ್ರೇಷ್ಟವೆಂದು ತಿಳಿದಿರುತ್ತದೆ. ಆ ವಿಧವಾಗಿಯೇ ವೇದಗಳು, ಪುರಾಣಗಳು, ಉಪನಿಷತ್ತುಗಳು, ಶಾಸ್ತ್ರಗಳೆಂದು ಗ್ರಂಥಗಳು ಇವೆ. ಎಲ್ಲವೂ ಪುಸ್ತಕಗಳೇ ಅಲ್ಲವೆ! ಎಲ್ಲ ಓದು ವಂತಹವುಗಳೇ ಅಲ್ಲವೆ! ಎಂದುಕೊಂಡರೇ ಎಲ್ಲ ಹಾಲೇ ಅಲ್ಲವೆ ಎಂದುಕೊಂಡಂತಿರುತ್ತದೆ. ಸ್ವಲ್ಪ ಜ್ಞಾನ ತಿಳಿದವರು ಪುಸ್ತಕಗಳೆಲ್ಲವುಗಳಲ್ಲಿ ಶಾಸ್ತ್ರ ಪ್ರಮಾಣವಾಗಿ ಇರುವುದೆಂದು, ಶಾಸ್ತ್ರ ಆಚರಿಸತಕ್ಕದ್ದೆಂದು, ಪುರಾಣಗಳು ಕಾಲಕ್ಷೇಪಕ್ಕೆಂದು, ಬಾವಿಯಲ್ಲಿನ ನೀರಿ ಸ್ವಲ್ಪವೇ ಉಪಯೋಗಪಟ್ಟಂತೆ ವೇದಗಳಲ್ಲಿ ಸ್ವಲ್ಪ ಮಾತ್ರವೇ ಉಪಯೋಗಪಡುವುದೆಂದು ಉಳಿದ ಎಲ್ಲಾ ವ್ಯರ್ಥವೇಯೆಂದು ತಿಳಿದಿರುತ್ತಾರೆ. ಹಾಗಲ್ಲದೆ ಎಲ್ಲ ಅವಶ್ಯವೇ ಎಂದುಕೊಳ್ಳುವವರಿಗೆ ಕತ್ತೆ ಹಾಲಿಗು ಗಂಗೆಗೋವು ಹಾಲಿಗು ವ್ಯತ್ಯಾಸ ತಿಳಿಯದಂತಿರುತ್ತದೆ. ಈ ವಿಧವಾಗಿಯೇ ಪರವಸ್ತು ಸೂರ್ಯ ನಾರಾಯಣರಾವುಗೆ ವೇದಗಳು, ಪುರಾಣಗಳು, ಶಾಸ್ತ್ರವಾದ ಗೀತೆ ಎಲ್ಲ ಒಂದೇ ವಿಧವಾಗಿ ಕಾಣಿಸಿವೆ ಎಂದು ಅಂದುಕೊಳ್ಳುವುದಕ್ಕೆ ಕೂಡ ಅವಕಾಶ ಇಲ್ಲದಂತೆ ಆಕಳಿಗಿಂತ ಕತ್ತೆಯೇ ದೊಡ್ಡದೆನ್ನುವಂತೆ ಗೀತೆಗಿಂತ ವೇದಗಳೇ ದೊಡ್ಡವೆಂದು ಗೀತೆಯನ್ನು ಕೇವಲವಾಗಿ ಬರೆದಿದ್ದಾರೆ.

ದೇವರು ಮನುಷ್ಯನ ರೂಪದಲ್ಲಿ ಅವತರಿಸುವನೆಂದು ತಾನೇ ಹೇಳುತ್ತಾ ಹಿಂದೆ ಹುಟ್ಟಿದ ಯೇಸುಪ್ರಭುಗಿಂತ ಮೊದಲು ಹುಟ್ಟಿದ ಕೃಷ್ಣನಿಗೆ ಜ್ಞಾನವಿಲ್ಲವೆಂದು ಹೇಳುವುದು ತಪ್ಪಲ್ಲವೆ! ಹಿಂದೆ ಹುಟ್ಟಿದ ಪ್ರಭುವೇ ಮೊದಲು ಕೃಷ್ಣನಾಗಿ ಹುಟ್ಟಿದ್ದರೇ ನಿಜವಾಗಿಯೂ ನಾವು ಯೇಸು ಪ್ರಭುವನ್ನು ದೂಷಿಸಿದಂತೆ ಅಲ್ಲವೆ! ದೇವರು ಯಾವಾಗ ಯಾವ ಅವತಾರದಲ್ಲಿ ಭೂಮಿಮೇಲೆ ಬರುತ್ತಾನೋ ತಿಳಿಯದ ನಾವು ಈತನು ಹೌದು, ಈತನು ಅಲ್ಲವೆನ್ನುವುದಕ್ಕೆ ಸಾಧ್ಯವಾಗುತ್ತದಾ? ನನಗೆ ಸಾಧ್ಯವಾಗುತ್ತದೆನ್ನುವಂತೆ ಕೃಷ್ಣನನ್ನು ಕುರಿತು ತನ್ನ ಪುಸ್ತಕದಲ್ಲಿ ಸೂರ್ಯ ನಾರಾಯಣರಾವು ಬರೆದಿರುವುದು ಕೆಳಗೆ ನೋಡೋಣ.

ಋಜುದರ್ಶಿನಿ 42ನೇ ಪುಟದಲ್ಲಿ ಈ ವಿಧವಾಗಿ ಇದೆ. **"ಶಮಂತಕ ಮಣಿ ಬಹುಪ್ರಕಾಶವಂತವಾದ ಬೆಳಕನ್ನು ಪ್ರಕಾಶಿಸುವಂತೆ ಮಾಡುವ ಮಣಿ, ಈ ಮಣಿ ಬೆಳಕಿನಿಂದ ಪ್ರಕಾಶಿಸುತ್ತಿದೆ. ಇದನ್ನು ಧರಿಸುವುದಕ್ಕೆ ನನಗೆ ಯಾವ ಯೋಗ್ಯತೆ ಇಲ್ಲ. ನನ್ನ ಅಣ್ಣ ನಾದ ಬದಲರಾಮನು ಸಹ ಇದನ್ನು ಧರಿಸುವುದಕ್ಕೆ ಯೋಗ್ಯನು ಅಲ್ಲವೆಂದು ಶ್ರೀಕೃಷ್ಣನು ಸ್ವತಃವಾಗಿ ಸಾಕ್ಷ್ಯವನ್ನು ಕೊಡುತ್ತಿದ್ದಾನೆ. ಈ ಸಾಕ್ಷ್ಯವು ವಿಷ್ಣು ಪುರಾಣದಲ್ಲಿ 10:6 ರಲ್ಲಿ ಬರೆಯಲ್ಪಟ್ಟಿದೆ. ಬೆಳಕನ್ನು ಧರಿಸುವುದಕ್ಕೆ ಶ್ರೀಕೃಷ್ಣನು ಯೋಗ್ಯನು ಅಲ್ಲ. ಆದ್ದರಿಂದ ಯಾರಾದರೇ ಸ್ವತಃವಾಗಿ ಬೆಳಕಾಗಿ ಇದ್ದಾರೋ ಅವರೇ ಬೆಳಕು ಪ್ರಕಾಶಿಸುತ್ತಿರುವ ಮಣಿಯನ್ನು ಧರಿಸುವುದಕ್ಕೆ ಯೋಗ್ಯರು. ಶ್ರೀಕೃಷ್ಣನು ನಾನು ಬೆಳಕು ಅಲ್ಲ ಎನ್ನುತ್ತಿದ್ದಾನೆ ಆದ್ದರಿಂದ ಆತನು ಕತ್ತಲು. ಕತ್ತಲಾದವನು ದೇವರಲ್ಲ"** ಎಂದು ಬರೆದಿದ್ದಾರೆ.

43ನೇ ಪುಟದಲ್ಲಿ ಈ ವಿಧವಾಗಿ ಇದೆ **"ಶ್ರೀಕೃಷ್ಣನು ನಾನು ಶಮಂತಕಮಣಿಯನ್ನು ಎಂದರೆ ಪ್ರಕಾಶಿಸುತ್ತಿರುವ ಬೆಳಕನ್ನು ಧರಿಸುವುದಕ್ಕೆ ಯೋಗ್ಯನು ಅಲ್ಲ ಎಂದು ವಿಷ್ಣು ಪುರಾಣದಲ್ಲಿ 10:6 ರಲ್ಲಿ ಸಾಕ್ಷ್ಯಕೊಡುತ್ತಿರುವಂತೆ ತಾನೇ ಒಪ್ಪಿಕೊಂಡಿದ್ದಾನಾದ್ದರಿಂದ ತಾನು ಸೃಷ್ಠಿಕರ್ತನಾದ ದೇವರು ಅಲ್ಲವೆಂದು ಒಪ್ಪಿಕೊಳ್ಳುತ್ತಿದ್ದಾನೆ. ಆದ್ದರಿಂದ ಶ್ರೀಕೃಷ್ಣನು ಕತ್ತಲಿನ ಶಕ್ತಿಯೆಂದು ನೀವೇಕೆ ಪ್ರಜೆಗಳಿಗೆ ಹೇಳುವುದಿಲ್ಲ ಎಂದು ನಾನು ನಮ್ಮ ತಾತನವರನ್ನು ಕೇಳಿದೆನು. ಅದಕ್ಕೆ ನಾನು ನಮ್ಮ ತಾತನವರಿಂದ ಶಿಕ್ಷಿಸಲ್ಪಟ್ಟಿದ್ದೇನೆ. ಪ್ರಿಯ ಓದುಗರೇ ನೀನು ಸತ್ಯಾನ್ವೇಷಿಯಾದರೆ ಆಲೋಚಿಸು. ಶ್ರೀಕೃಷ್ಣನು ಬೆಳಕನ್ನು ಧರಿಸುವುದಕ್ಕೆ ಅಯೋಗ್ಯನಾದರೇ ನಿನ್ನ ಪಾಪದಿಂದ ನಿನ್ನನ್ನು ಪರಿಹಾರಮಾಡುವುದಕ್ಕೆ ಹೇಗೆ ಯೋಗ್ಯನು. ಯಾರಾದರೂ ತಾನು ಸ್ವತಃವಾಗಿ ಕತ್ತಲಾಗಿದ್ದು ಕತ್ತಲಲ್ಲಿರುವವರಿಗೆ ಬೆಳಕನ್ನು ಹೇಗೆ ಪ್ರಕಾಶಿಸುವಂತೆ ಮಾಡಬಲ್ಲನು?"** ಎಂದು ಬರೆಯಲಾಗಿದೆ.

ಆತನು ಬರೆದ ವಿಷಯವನ್ನು ನೋಡಿದರೆ ದೊಡ್ಡ ಸತ್ಯಾನ್ವೇಷಿ ಅಲ್ಲದೆ ಸ್ವಲ್ಪ ಬುದ್ಧಿ ಇರುವ ಯಾರಿಗಾದರೂ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ.

ಬೆಳಗುತ್ತಿರುವ ಒಂದು ಮಣಿಯನ್ನು ಧರಿಸುವುದರಿಂದ ದೇವರು ಆಗುವುದು ಧರಿಸದೆ ಹೋಗುವುದರಿಂದ ದೇವರು ಅಲ್ಲದೇ ಹೋಗುವುದು ನಡೆಯುತ್ತದಾ? ಮೊದಲು ಸೂರ್ಯನು ಅದನ್ನು ಧರಿಸುತ್ತಿದ್ದನು. ಧರಿಸಿದಷ್ಟು ಮಾತ್ರಕ್ಕೆ ಸೂರ್ಯನು ದೇವರಾಗುತ್ತಾನಾ? ನಂತರ ಸತ್ರಾಜಿತ್ತು ಮಹಾರಾಜ ಧರಿಸಿದ್ದಾನೆ ಆದ್ದರಿಂದ ಆತನನ್ನು ದೇವರನ್ನಬಹುದಾ? ಸತ್ರಾಜಿತ್ತು ರಾಜನ ಸೋದರನಾದ ಪ್ರಸೇನನು ಕಾಡಿಗೆ ಬೇಟೆಗಾಗಿ ಹೋಗುತ್ತಾ ಶಮಂತಕ ಮಣಿಯೊಂದರ ಹಾರವನ್ನು ಕೊರಳಲ್ಲಿ ಧರಿಸಿದ್ದಾನೆ. ಇಲ್ಲಿ ಆತನು ಸಹ ದೇವರಾಗಿ ಹೋದಂತೇನಾ? ಕಾಡಿಗೆ ಹೋದ ಸತ್ರಾಜಿತ್ತು ಸೋದರನು ಸಿಂಹದಿಂದ ಸಾಯಿಸಲ್ಪಟ್ಟಾಗ ಆ ಮಣಿ ಜಾಂಬವಂತನಿಗೆ ಸಿಕ್ಕಿದೆ. ಸ್ವಲ್ಪ ಕಾಲ ಜಾಂಬವಂತನು ಸಹ ಧರಿಸಿದ್ದಾನೆ. ಆದ್ದರಿಂದ ಪರವಸ್ತು ಸೂರ್ಯ ನಾರಾಣರಾವುರವರ ಮಾತಿನ ಪ್ರಕಾರ ಜಾಂಬವಂತನು ಸಹ ದೇವರಾದಂತೇನಾ? ನಂತರ ಜಾಂಬವಂತನ ಮಗಳನ್ನು ಕೃಷ್ಣನು ವಿವಾಹ ಮಾಡಿಕೊಂಡಾಗ ಜಾಂಬವಂತನು ಮಗಳೊಂದಿಗೆ ಶಮಂತಕಮಣಿಯನ್ನು ಸಹ ಕೃಷ್ಣನಿಗೆ ಕೊಟ್ಟಿದ್ದಾನೆ. ಕೃಷ್ಣನು ಇಷ್ಟು ಮಂದಿ ಧರಿಸಿದ ಮಣಿಯನ್ನು ನಾನು ಧರಿಸುವುದಿಲ್ಲವೆಂದು ಅದು ಮೊದಲು ಸತ್ರಾಜಿತ್ತು ರಾಜನದ್ದು ಆದ್ದರಿಂದ ಆತನಿಗೇ ಕೊಡುವುದು ಒಳ್ಳೆಯದೆಂದುಕೊಂಡಿದ್ದಾನೆ. ಇಷ್ಟು ಪ್ರಶ್ನೆಗಳಿಗೆ ಸೂರ್ಯ ನಾರಾಯಣರಾವುರ ವರು ಸಮಾಧಾನ ಕೊಡಬಲ್ಲನಾ? ಮಣಿ ಧರಿಸುವುದರಿಂದ ದೇವರೆಂದು, ಧರಿಸದೆ ಹೋಗುವುದರಿಂದ ದೇವರು ಅಲ್ಲವೆಂದು ಹೇಳುವುದಕ್ಕೆ ಶಾಸ್ತ್ರಬದ್ಧವಾದ ಆಧಾರ ಏನಾದರೂ ಇದೆಯಾ? ದೇವರನ್ನು ಅಷ್ಟು ಸುಲಭವಾಗಿ ಕಂಡುಕೊಳ್ಳುವುದಕ್ಕೆ ಅವಕಾಶವಿದೆಯಾ? ಸ್ವಲ್ಪ ಬುದ್ಧಿ ಇರುವ ಅಮಾಯಕನಿಗೂ ಸಹ ಇಷ್ಟು ಪ್ರಶ್ನೆಗಳು ಬರುತ್ತಿರುವಾಗ ನಿಜವಾದ ಸತ್ಯಾನ್ವೇಷಿಗೆ ಎಷ್ಟು ಪ್ರಶ್ನೆಗಳು ಹುಟ್ಟುತ್ತವೋ!

ಶಾಸ್ತ್ರಗಳು ಪುರಾಣಗಳು ಎಲ್ಲಾ ಪುಸ್ತಕಗಳೇ ಆದರೂ ಹಸುವಿಗೂ ಕತ್ತೆಗೂ ಇರುವಷ್ಟು ವ್ಯತ್ಯಾಸ ಇದೆಯೆಂದು ಮೊದಲೇ ಹೇಳಿಕೊಂಡಿದ್ದೇವೆ.

ಹಸುವಿನ ಹಾಲೂ, ಕತ್ತೆಯ ಹಾಲು ಹೇಗೆ ಸಮಾನವಲ್ಲವೋ ಹಾಗೆಯೇ ಶಾಸ್ತ್ರಗಳು ಪುರಾಣಗಳು ಸಮಾನವಲ್ಲ. ಆರು ಶಾಸ್ತ್ರಗಳಲ್ಲಿ ಐದು ಪ್ರಪಂಚವನ್ನು ಕುರಿತು ತಿಳಿಸಿದಾಗ ಆರನೆಯದಾದ ಬ್ರಹ್ಮವಿದ್ಯಾ ಶಾಸ್ತ್ರ ದೇವರನ್ನು ಕುರಿತು ತಿಳಿಸುವುದಾಗಿ ಇದೆ. ದೈವನುಡಿಗಳೊಂದಿಗೆ ಕೂಡಿಕೊಂಡ ಭಗವದ್ಗೀತೆ, ಬೈಬಲ್ ಎರಡೂ ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಸಂಬಂಧಿಸಿರುವವಾಗಿ ಇವೆ. ಹೇಳಿರುವುದು ಈಡೇರುವಂತೆ ಪ್ರಮಾಣವಾಗಿರುವವು ಗೀತೆ ಬೈಬಲ್. ಹಿಂದೂ ಮತದಲ್ಲಿ ದೇವರಿಗೆ ಪ್ರಮಾಣವಾಗಿ ತೆಗೆದುಕೊಂಡರೇ ಗೀತೆಯನ್ನು ತೆಗೆದುಕೊಳ್ಳಬೇಕು. ಹಾಗೆಯೇ ಕ್ರೈಸ್ತವಮತದಲ್ಲಾದರೇ ಬೈಬಲ್‌ನ್ನು ತೆಗೆದುಕೊಳ್ಳಬೇಕು. ಪರವಸ್ತು ಸೂರ್ಯನಾರಾಯಣ ಹಿಂದೂ ಮತದವನಾಗಿದ್ದು ನಂತರ ಕ್ರೈಸ್ತವಮತದೊಳಗೆ ಬದಲಾಗುವುದರಲ್ಲಿ ತಪ್ಪಿಲ್ಲ. ಆದರೆ ಹುಟ್ಟಿದ ತಾಯಿಯನ್ನು ಬಿಟ್ಟು ಮಾಡಿಕೊಂಡ ಹೆಂಡತಿಯನ್ನು ದೊಡ್ಡದಾಗಿ ಹೇಳಿಕೊಂಡಂತೆ ಪ್ರಭುವನ್ನು ದೇವರೆನ್ನುವುದು ಕೃಷ್ಣನನ್ನು ದೇವರಲ್ಲ ಎನ್ನುವುದು ತಪ್ಪಲ್ಲವೆ! ಒಂದು ವೇಳೆ ಕೃಷ್ಣನೇ ಪ್ರಭುವಾಗಿ ಬಂದಿದ್ದರೇ ದೇವರನ್ನು ಸ್ವಲ್ಪ ದೂಷಿಸಿ ಸ್ವಲ್ಪ ಹೊಗಳಿದಂತೆ ಅಲ್ಲವೆ!

ಮೊದಲು ವಿಷ್ಣುಪುರಾಣವನ್ನು ತೆಗೆದುಕೊಂಡು ಅದರ ಆಧಾರದಿಂದ ಕೃಷ್ಣನನ್ನು ದೇವರಲ್ಲ ಎನ್ನುವುದು ಕಣ್ಣಿನಲ್ಲಿ ಉಸುಗನ್ನು ಹಾಕಿಕೊಂಡು ನೋಡಿದರೆ ಚೆನ್ನಾಗಿ ಕಾಣಿಸುತ್ತದೆ ಎಂದಂತಿದೆ. ದೇವರಿಗೂ ಮಣಿಗೂ ಯಾವ ಸಂಬಂಧವಿದೆ? ದೇವರು ಭೂಮಿ ಮೇಲೆಗೆ ಮನುಷ್ಯನಾಗಿಬಂದು ತನ್ನ ಧರ್ಮ ಗಳನ್ನು ಮಾತ್ರ ತಿಳಿಸುವನು. ಆದರೆ ಮಣಿಗಳನ್ನು ಧರಿಸಿ ಕುಳಿತುಕೊಳ್ಳುತ್ತಾನಾ? ಬೆಳಕಿರುವ ಮಣಿಯನ್ನು ಧರಿಸದವನು ಕತ್ತಲೆಂದು, ಕತ್ತಲಾದವನು ದೇವರು ಅಲ್ಲವೆಂದು ಹೇಳುವುದು ಬಹಳ ವಿಚಿತ್ರವಾಗಿ ಇದೆ. ಮಣಿಯನ್ನು ಧರಿಸದಷ್ಟು ಮಾತ್ರಕ್ಕೆ ಮನುಷ್ಯ ಕತ್ತಲಾಗುವುದೇನು? ಈ ಮಾತು ಬರೆದವರಿಗೆ ಹುಚ್ಚಾ, ಹಠವಾ, ಉನ್ಮಾದವಾ ಎಂದು ಅನುಮಾನ ಬಾರದೆ ಇರುವುದಿಲ್ಲ. ಇದು ಕೇವಲ ತಲೆಯಲ್ಲಿ ಹುಟ್ಟಿದ ಅಸೂಯ ಗುಣವೇ ಹೊರತು ಸತ್ಯಾನ್ವೇಷಣೆ ಅಲ್ಲವೆಂದು ತಿಳಿಯುತ್ತಿದೆ.

ದೇವರು ಇಂತಹವನೆಂದು ತೀರ್ಮಾನಿಸಿ ಹೇಳುವುದಕ್ಕೆ ಅವಕಾಶವಿಲ್ಲ. ಆತನು ಕತ್ತಲಿಗೆ ಕತ್ತಲಾಗಿ, ಬೆಳಕಿಗೆ ಬೆಳಕಾಗಿ ಇದ್ದಾನೆ. ದೇವರು ಮನುಷ್ಯನಾಗಿ ಬಂದರೆ ಬೆಳಕಾಗಿ ಪ್ರಕಾಶಿಸುತ್ತೇನೆಂದು ಹೇಳಲಿಲ್ಲ. ಹಾಗೆಯೇ ಕತ್ತಲಾಗಿ ಇರುತ್ತೇನೆಂದು ಹೇಳಲಿಲ್ಲ. ಆತನಲ್ಲಿ ಇರುವುದೆಲ್ಲಾ ಜ್ಞಾನ ಪ್ರಕಾಶವೇ ಹೊರತು ಬೇರೆ ಪ್ರಕಾಶ ಇರುವುದಿಲ್ಲ. ಜ್ಞಾನ ಹೊರಗಿನ ಕಣ್ಣಿಗೆ ಕಾಣಿಸುವುದಲ್ಲ. ಕೃಷ್ಣನಾಗಿ ಬಂದ ದಿನವಾಗಲೀ, ಪ್ರಭುವಾಗಿ ಬಂದ ದಿನವಾಗಲೀ ಜ್ಞಾನನೇತ್ರಕ್ಕೆ ಕಾಣಿಸುವ ಜ್ಞಾನ ಪ್ರಕಾಶ ಹೊರತು ಕಣ್ಣಿಗೆ ಕಾಣಿಸುವ ಯಾವ ಪ್ರಕಾಶವೂ ಅವರಲ್ಲಿ ಕಾಣಿಸಲಿಲ್ಲ. ಪರವಸ್ತು ಸೂರ್ಯನಾರಾಯಣ ಮಾತಿನ ಪ್ರಕಾರವಾದರೆ ಕೃಷ್ಣನು ತಾನು ಜೀವಿಸಿರುವಾಗ ಒಳ್ಳೆ ಒಳ್ಳೆ ವಜ್ರವೈಡೂರ್ಯಗಳಿಂದ ಕೂಡಿದ ಆಭರಣಗಳನ್ನು ಧರಿಸಿದ್ದಾನೆ, ರತ್ನ ಮಣಿಮಯ ಕಿರೀಟವನ್ನು ಧರಿಸಿದ್ದಾನೆ. ನವರತ್ನಗಳು ಜೋಡಿಸಿದ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದಾನೆ. ಅದನ್ನನುಸರಿಸಿ ಕೃಷ್ಣನನ್ನು ದೇವರೆನ್ನಬೇಕು. ಮಣಿಗಳು ಧರಿಸಿದಷ್ಟು ಮಾತ್ರಕ್ಕೇ ದೇವರೆಂದು ಕೃಷ್ಣನನ್ನು ಹೇಳಿದರೇ, ಜೀವನದಲ್ಲಿ ಯಾವ ಮಣಿಗಳು ಧರಿಸದೇ ಸಾಧಾರಣ ಜೀವನವನ್ನು ಕಳೆದ ಪ್ರಭುವನ್ನು ದೇವರಲ್ಲ ಎನ್ನಬೇಕಾ? ಇದರ ಪ್ರಕಾರ ದೇವರಾದ ಪ್ರಭುವನ್ನು ಒಂದು ಕಡೆ ಹೊಗಳಿ ಮತ್ತೊಂದು ಕಡೆ ಹೀಯಾಳಿಸಿದಂತಲ್ಲವೆ! ಅಷ್ಟೇ ಅಲ್ಲದೆ ಪ್ರಭು ತನ್ನ ಜೀವನದಲ್ಲಿ ಎಷ್ಟೋ ಜ್ಞಾನವನ್ನು ಹೇಳಿದಾಗ ಅದನ್ನು ವಕ್ರಮಾರ್ಗದಲ್ಲಿ ಅರ್ಥ ಮಾಡಿಕೊಂಡು ಹಾಗೆಯೇ ಪ್ರಚಾರ ಮಾಡುವುದು ಪ್ರಭುವನ್ನು ಆರಾಧಿಸಿದಂತಾ ಅವಮಾನಿಸಿ ದಂತಾ? ಪ್ರಭುವೊಂದರ ಜ್ಞಾನ ವಾಕ್ಯಗಳನ್ನು ಯಾವ ವಿಧವಾಗಿ ತಪ್ಪು ದಾರಿ ಹಿಡಿಸಿದ್ದಾರೋ ಕೆಳಗೆ ನೋಡೋಣ.

ಋಜುದರ್ಶಿನಿ ಪುಸ್ತಕದಲ್ಲಿ 22 ನೇ ಪುಟದಲ್ಲಿ **"ಸಾಮವೇದದಲ್ಲಿ ತಾಂಡಿಯ ಮಹಾಬ್ರಹ್ಮಣದಲ್ಲಿ ಒಂದು ಶ್ಲೋಕ "ಶ್ಲೋ" ಸರ್ವ ಪಾಪ ಪರಿಹಾರೋ ರಕ್ತ ಪ್ರೋಕ್ಷಣ ಮವಶ್ಯಕಂ, ತದ್ ರಕ್ತಂ ಪರಮಾತ್ಮೇನ ಪುಣ್ಯದಾನ ಬಲಿಯಾಗಂ." ಇದರ ಭಾವಾರ್ಥ :– ಸರ್ವ ಪಾಪಗಳು ಹೋಗಬೇಕೆಂದರೆ ರಕ್ತ ಪ್ರೋಕ್ಷಣ**

**ಅವಶ್ಯ. ರಕ್ತ ಪ್ರೋಕ್ಷಿಸಲ್ಪಡದಂತೆ ಪಾಪವಿಮೋಚನೆ ಆಗುವುದಿಲ್ಲ.** ಎಂದು ಬರೆಯಲಾಗಿದೆ.

28ನೇ ಪುಟದಲ್ಲಿ **"ಯೋಹಾನು ಬರೆದ 1ನೇ ಪತ್ರಿಕೆ, 1ನೇ ಅಧ್ಯಾಯ, 7ನೇ ವಚನ :– ಆತನು ಬೆಳಕಿನಲ್ಲಿರುವ ಪ್ರಕಾರ ನಾವೂ ಬೆಳಕಿನಲ್ಲಿ ನಡೆದರೆ ನಾವು ಅನ್ಯೋನ್ಯ ಸಹಕಾರ ಇರುವವರಾಗುತ್ತೇವೆ. ಆಗ ಆತನ ಕುಮಾರನಾದ ಯೇಸು ರಕ್ತ ಪ್ರತಿ ಪಾಪಗಳಿಂದ ನಮ್ಮನ್ನು ಪವಿತ್ರನಾಗಿ ಮಾಡುವುದು"**

**ಪೇತುರು 1ನೇ ಪತ್ರಿಕೆ, 1ನೇ ಅಧ್ಯಾಯ, 19ನೇ ವಾಕ್ಯ :– ಆಗ ಅಮೂಲ್ಯವಾದ ರಕ್ತದಿಂದ ಅಂದರೆ ನಿರ್ದೋಷವನ್ನು ನಿಷ್ಕಳಂಕವು ಆದ ಕುರಿಯ ಮರಿಯಂತಹ ಕ್ರಿಸ್ತ ರಕ್ತದಿಂದ ವಿಮೋಚನರಾಗಿದ್ದೀರೆಂದು ನೀವು ತಿಳಿಯುತ್ತೀರ."** ಎಂದು ಬರೆಯಲ್ಪಟ್ಟಿದೆ. ಇದನ್ನು ಕುರಿತು ನಾವು ಹೇಳುವುದೇನೆಂದರೆ!

ಈ ವಾಕ್ಯಗಳನ್ನು ಆಧಾರ ಮಾಡಿಕೊಂಡು ಯೇಸು ತನ್ನ ರಕ್ತದಿಂದ ಪಾಪಿಗಳನ್ನು ಪರಿಶುದ್ಧರಾಗಿ ಮಾಡುತ್ತಿದ್ದಾನೆಂದು ಬಹಳ ಜನ ಕ್ರೈಸ್ತರು ಪ್ರಚಾರ ಮಾಡುತ್ತಿದ್ದಾರೆ. ಯೇಸು ತನ್ನ ಜೀವನದಲ್ಲಿ ಯಾವಾಗಾದರೂ, ಎಲ್ಲಾದರೂ ತನ್ನ ರಕ್ತದಿಂದ ನಿಮ್ಮ ಪಾಪಗಳನ್ನು ತೊಳೆದುಹಾಕುವೆನೆಂದು ಯಾರೊಂದಿಗಾದರೂ ಹೇಳಿದ್ದಾನಾ ಎಂದು ನಾವು ಪ್ರಶ್ನಿಸುತ್ತಿದ್ದೇವೆ. ಮೇಲಿನ ವಾಕ್ಯಗಳನ್ನು ನಾವು ತಪ್ಪು ಹಿಡಿಯುತ್ತಿಲ್ಲ, ಆದರೆ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಕ್ರೈಸ್ತರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆಂದು ತಿಳಿಸುತ್ತಿದ್ದೇವೆ. ಆ ವಾಕ್ಯಗಳೊಂದರ ಸರಿಯಾದ ಅರ್ಥ ನಾವು ನಂತರ ತಿಳಿಸುತ್ತೇವೆ. ಮೊದಲು ಪರವಸ್ತು ಸೂರ್ಯನಾರಾಯಣ ತಿಳಿಸಿದ ಸಾಮವೇದದಲ್ಲಿನ ಶ್ಲೋಕವನ್ನು ವಿವರಿಸಿಕೊಳ್ಳೋಣ. ಸರ್ವ ಪಾಪ ಪರಿಹಾರೋ ರಕ್ತ ಪ್ರೋಕ್ಷಣ ಮವಶ್ಯಕ ಎಂದಿದ್ದಾರೆ. ಅದಕ್ಕೆ ಅರ್ಥ ಪಾಪ ಕಳೆಯಬೇಕೆಂದರೆ ರಕ್ತ ಪ್ರೋಕ್ಷಣೆ ಅವಶ್ಯ ಎಂದು ಇದೆ. ಯಾರ ರಕ್ತದಿಂದ ಪ್ರೋಕ್ಷಣೆ ನಡೆಯಬೇಕೆಂದರೆ "ತದ್ ರಕ್ತಂ ಪರಮಾತ್ಮೇನ" ಎಂದು ಇದೆ. ಅದರ ಅರ್ಥ ಪರಮಾತ್ಮವೊಂದರ ರಕ್ತವೆಂದು ಇದೆ. ಇಲ್ಲಿ

ನಾವು ಯೋಚಿಸಬೇಕಾಗಿರುವುದು ಬಹಳ ಇದೆ. ಅದೇನೆಂದರೆ! ಆತ್ಮ ಎಂದರೆ ಶರೀರದಲ್ಲಿ ನಿವಾಸಿಸುವುದು, ಪರಮಾತ್ಮ ಎಂದರೆ ಆತ್ಮಗಿಂತ ಬೇರೆಯಾಗಿರುವುದು ಮತ್ತು ಶರೀರದೊಳಗೂ, ಶರೀರದ ಹೊರಗೂ ಅಣುವಣುವಿನಲ್ಲೂ ಇದೆ. ಆತ್ಮ ಶರೀರದಲ್ಲಿ ಮಾತ್ರ ಇದೆ, ತಿಂದ ಆಹಾರವನ್ನು ರಕ್ತ ರೂಪದೊಳಗೆ ಬದಲಾಯಿಸಿಕೊಂಡು ಶರೀರಕ್ಕೆ ಶಕ್ತಿಯಾಗಿ ಉಪಯೋಗಿಸಿಕೊಳ್ಳುತ್ತಿದೆ. ಪರಮಾತ್ಮನಿಗೆ ಶರೀರವಿಲ್ಲ, ಆಕಾರವಿಲ್ಲ, ವಿಶ್ವವೆಲ್ಲಾ ಸಮಾನವಾಗಿ ವ್ಯಾಪಿಸಿದೆ. ಆದ್ದರಿಂದ ಶರೀರದಲ್ಲಿರುವ ಆತ್ಮಕ್ಕೆ ರಕ್ತವಿದೆ ಆದರೆ ಶರೀರದ ಹೊರಗೆ ಸರ್ವವಸ್ತುಗಳ ಒಳಗೂ ಹೊರಗೂ ವ್ಯಾಪಿಸಿರುವ ಪರಮಾತ್ಮನಿಗೆ ರಕ್ತ ಹೇಗೆ ಇರುತ್ತದೆ. ಆದ್ದರಿಂದ ಪರಮಾತ್ಮನಿಗೆ ರಕ್ತವಿದೆ ಎಂದುಕೊಳ್ಳುವುದು ಶುದ್ಧ ತಪ್ಪು. ಹಾಗಾದರೆ ಶ್ಲೋಕದಲ್ಲಿ *'ತದ್ ರಕ್ತಂ ಪರಮಾತ್ಮೇನ'* ಆ ರಕ್ತ ಪರಮಾತ್ಮದ್ದು ಎಂದು ಇದೆಯಲ್ಲವೆ! ಎಂದು ಕೆಲವರು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೆ! ಅವರ ರಾಗ ಬಹಳ ದೊಡ್ಡದು ಎಂದು ಇಬ್ಬರನ್ನು ಕುರಿತು ಇತರರು ಹೇಳಿದ್ದಾರೆಂದುಕೊಳ್ಳೋಣ. ರಾಗ ಎನ್ನುತ್ತಲೇ ನಮಗೆ ಅರ್ಥವಾಗುವುದು ಸಂಗೀತದಲ್ಲಿನ ರಾಗ ಎಂದುಕೊಳ್ಳುತ್ತೇವೆ, ಚೆನ್ನಾಗಿ ಹಾಡಬಲ್ಲರೆಂದುಕೊಳ್ಳುತ್ತೇವೆ. ಒಂದು ವೇಳೆ ಆ ಇಬ್ಬರಲ್ಲಿ ಒಬ್ಬನು ಮೂಗ ಇದ್ದಾನೆಂದುಕೊಳ್ಳೋಣ. ಆಗ ಮಾತು ಬರುವವನು ರಾಗ ಎಳೆದು ಹಾಡಬಲ್ಲನು ಆದರೆ ಮೂಗನು ರಾಗ ಹೇಗೆ ತೆಗೆಯಬಲ್ಲನೆಂದು ಅನುಮಾನ ಬಾರದೆ ಇರುವುದಿಲ್ಲ. ಆಗ ಸ್ವಲ್ಪ ಯೋಚಿಸಿದರೇ ರಾಗ ಎಂದರೆ ಸಂಗೀತವೇ ಅಲ್ಲ ಪ್ರೇಮ ಎಂದು ಅರ್ಥ ಕೂಡ ಇದೆಯೆಂದು ತಿಳಿಯುತ್ತಿದೆ. ಮೂಗನಿಗೆ ಪ್ರೇಮ ಇರಬಹುದು ಆದರೆ ಸಂಗೀತ ಇರುವುದಿಲ್ಲವೆಂದು ತಿಳಿಯುತ್ತಿದೆ. ಇಬ್ಬರನ್ನು ಸೇರಿಸಿ ಹೇಳದೆ ಪ್ರತ್ಯೇಕವಾಗಿ ಮೂಗನ ರಾಗ ಎಂದರೆ ತಪ್ಪಾಗಿ ಅರ್ಥೈಸಿಕೊಳ್ಳದೆ ಮೂಗನ ಪ್ರೇಮ ಎಂದು ಅರ್ಥವಾಗಬಲ್ಲದು. ಅದೇ ರೀತಿಯಾಗಿ ಪ್ರತ್ಯೇಕವಾಗಿ ಪರಮಾತ್ಮ ಎಂದು ಹೇಳಿದಾಗ ಶರೀರವಿರುವ ಆತ್ಮಕ್ಕೆ ರಕ್ತವಿರುತ್ತದೆ ಆದರೆ ಸರ್ವವೂ ವ್ಯಾಪಿಸಿ ಕಲ್ಲಿನಲ್ಲಿಯೂ, ನೀರಿನಲ್ಲಿಯೂ, ಅಗ್ನಿಯಲ್ಲಿಯೂ, ಗಾಳಿಯಲ್ಲಿಯೂ ಅಣುವಣುವಿನಲ್ಲೂ ಇರುವವನಿಗೆ ರಕ್ತವಿರುವುದಿಲ್ಲವೆಂದು

ತಿಳಿದುಹೋಗುತ್ತಿದೆ. ಮೂಗನ ರಾಗ ಎಂದಾಗ ಸ್ವಲ್ಪ ಯೋಚಿಸಿ ಸಂಗೀತ ರಾಗವಲ್ಲ, ಅವನಿಗಿರುವ ಪ್ರೇಮವನ್ನು ಕುರಿತು ಹೇಳಿದ್ದಾರೆಂದು ಅರ್ಥ ಮಾಡಿಕೊಂಡಂತೆ ಪರಮಾತ್ಮ ರಕ್ತ ಎಂದಾಗ ಪರಮಾತ್ಮನಿಗೆ ರಕ್ತ ಇರುವುದಿಲ್ಲ ಅಲ್ಲವೆ! ಎಂದು ಯೋಚಿಸಿ ಮೂಗನ ರಾಗಕ್ಕೆ ಅರ್ಥ ಬೇರೆ ಇರುವಂತೆ ಪರಮಾತ್ಮ ರಕ್ತಕ್ಕೆ ಬೇರೆ ಅರ್ಥವಿರುತ್ತದೆಂದು ನೋಡಬೇಕು.

ಒಂದು ಶರೀರವನ್ನು ಪರೀಕ್ಷಿಸಿ ನೋಡಿದರೇ ಶರೀರವೆಲ್ಲಾ ಆತ್ಮ ವ್ಯಾಪಿಸಿದೆ. ಆತ್ಮ ವ್ಯಾಪಿಸಿರುವ ಶರೀರವನ್ನು ಸಜೀವವಾಗಿ ಇರುವ ಶರೀರ ಎನ್ನುತ್ತೇವೆ. ಆತ್ಮ ವ್ಯಾಪಿಸಿ ಬದುಕಿರುವ ಶರೀರದಲ್ಲಿ ಕೆಳಗಿನ ಕಾಲಿಗೆ ರಂಧ್ರ ಮಾಡಿದರೂ ಅಥವಾ ಮೇಲೆ ತಲೆ ಮೇಲೆ ಗಾಯ ಮಾಡಿದರೂ ರಕ್ತಬರುತ್ತದೆ. ಇದನ್ನನುಸರಿಸಿ ನೋಡಿದರೆ ಆತ್ಮ ವ್ಯಾಪಿಸಿ ಇರುವವರೆಗು ರಕ್ತ ಕೂಡ ವ್ಯಾಪಿಸಿ ಇದೆಯೆಂದು ತಿಳಿಯುತ್ತಿದೆ. ಆತ್ಮ ಇದೆಯೆನ್ನುವುದಕ್ಕೆ ರಕ್ತ ಸಾಕ್ಷಿಯಾಗಿರುವಂತೆ ಪರಮಾತ್ಮನಿಗೆ ಕೂಡ ಒಂದು ವಿಧಾನವಿದೆ. ಆತ್ಮಕ್ಕೆ ಶರೀರ ನಿವಾಸವಾದರೆ ಪರಮಾತ್ಮಕ್ಕೆ ವಿಶ್ವವೆಲ್ಲಾ ನಿವಾಸವಾಗಿ ಇದೆ. ಆತ್ಮ ವ್ಯಾಪಿಸಿದ ಶರೀರದಲ್ಲಿ ಆತ್ಮಕ್ಕೆ ಸಾಕ್ಷಿಯಾಗಿ ರಕ್ತವಿರುವಂತೆ, ಪರಮಾತ್ಮ ವ್ಯಾಪಿಸಿದ ವಿಶ್ವವೆಲ್ಲಾಪರಮಾತ್ಮನಿಗೆ ಸಾಕ್ಷಿಯಾಗಿ ಜ್ಞಾನ ಇದೆ. ಶರೀರದಲ್ಲಿ ರಕ್ತದಿಂದ ಆತ್ಮ ಇರುವಿಕೆಯನ್ನು ತಿಳಿದುಕೊಂಡಂತೆ, ವಿಶ್ವದಲ್ಲಿ ಜ್ಞಾನದಿಂದ ಪರಮಾತ್ಮ ಇರುವಿಕೆಯನ್ನು ತಿಳಿದುಕೊಳ್ಳಬಹುದು. ಪರಮಾತ್ಮ ರಕ್ತ ಎಂದು ಎಲ್ಲಾದರೂ ಹೇಳಿದರೇ ಅದನ್ನು ದೇವರ (ಪರಮಾತ್ಮ) ಜ್ಞಾನವಾಗಿ ಅರ್ಥ ಮಾಡಿಕೊಳ್ಳಬೇಕು. ಮೂಗನ ರಾಗವನ್ನು ಸಂಗೀತವಾಗಿ ಭಾವಿಸಿಕೊಂಡರೇ ಎಷ್ಟು ತಪ್ಪೋ ಹಾಗೆಯೇ ಪರಮಾತ್ಮ ರಕ್ತವನ್ನು ಶರೀರದಲ್ಲಿ ಇರುವ ಕೆಂಪು ರಕ್ತವಾಗಿ ಅರ್ಥ ಮಾಡಿಕೊಂಡರೇ ಅಷ್ಟೇ ತಪ್ಪಾಗುತ್ತದೆ. ಚಿಕ್ಕ ತಪ್ಪಿಗೆ ಎಷ್ಟೋ ಅನರ್ಥ ನಡೆಯುವಂತೆ ಚಿಕ್ಕ ಭಾವಲೋಪಕ್ಕೆ ದೇವರ ಮಾರ್ಗವನ್ನು ಬಿಟ್ಟು ಮಾಯೆ ಮಾರ್ಗದೊಳಗೆ ಹೋಗಬಲ್ಲೆವು. ಆದ್ದರಿಂದ ದೇವರ ವಿಷಯದಲ್ಲಿ ಆಳವಾಗಿ ಯೋಚಿಸಬೇಕಾದ ಅವಶ್ಯವಿದೆ.

ಈಗ ಅಸಲಾದ ವಿಷಯದೊಳಗೆ ಬರೋಣ. ಪ್ರಭು ಮನುಷ್ಯನಾಗಿ ಬಂದಿರುವ ದೇವರು ಆದ್ದರಿಂದ ಆತನ ರಕ್ತ ಎಂದಾಗ ಶರೀರದ್ದಾ ಅಲ್ಲವಾ ಎಂದು ಆಲೋಚಿಸಬೇಕು. **ಶರೀರ ರಕ್ತ ಎಂದುಕೊಂಡರೆ ಎಲ್ಲರಹಾಗೆ ಆತನ ಶರೀರದಲ್ಲಿ ಕೂಡ ಆರು ಲೀಟರ್‌ಗಳ ರಕ್ತವೇ ಇರುತ್ತಿತ್ತು.** ಆತನಿಗೆ ಚಿತ್ರಹಿಂಸೆಗಳು ಮಾಡಿ ಶಿಲುಬೆ ಮೇಲೆ ಸಾಯಿಸಿದಾಗಲೇ ಆ ರಕ್ತ ಸೋರಿಹೋಗಿದೆ. ಆತನ ಶರೀರ ರಕ್ತದಿಂದ ಆ ದಿನ ಯಾರ ಪಾಪವನ್ನು ತೊಳೆಯಲಿಲ್ಲ. ಪ್ರಭು ಬದುಕಿರುವ ದಿನಗಳಲ್ಲಿ ಕುರುಡನ ಪಾಪವನ್ನು ಕ್ಷಮಿಸಿ ಕಣ್ಣಿಗೆ ದೃಷ್ಠಿಯನ್ನು ಕೊಟ್ಟಿದ್ದಾರೆ, ಕುಂಟನ ಪಾಪವನ್ನು ಕ್ಷಮಿಸಿ ನಡಿಗೆಯನ್ನು ಕೊಟ್ಟಿದ್ದಾನೆ. ಆ ದಿನ ಅವರ ಪಾಪಗಳನ್ನು ಇಲ್ಲದಂತೆ ಮಾಡಿದಾಗ ಕೂಡ ಆತನ ರಕ್ತದಿಂದ ತೊಳೆಯಲಿಲ್ಲ. ಆತನು ಬದುಕಿರುವಾಗಾಗಲೀ ಮರಣಿಸಿದಾಗಾಗಲೀ ಯಾರ ಪಾಪ ನಿಮಿತ್ತ ರಕ್ತವನ್ನು ಸೋರಿಸುವುದು ಮಾಡಲಿಲ್ಲ ಅಲ್ಲವೆ! ಈಗ ಪ್ರಭು ರಕ್ತದಿಂದ ಪಾಪವನ್ನು ತೊಳೆಯಬೇಕೆನ್ನುವುದರಲ್ಲಿ ಯಾವುದೋ ಆಂತರ್ಯ ಇದೆಯೆಂದು ಏಕೆ ಯೋಚಿಸಲಾರದಂತೆ ಇದ್ದಾರೆ.

ದೇವರ ಜ್ಞಾನದಿಂದಲೇ ಸರ್ವ ಪಾಪಗಳು ನುಚ್ಚು ನೂರಾಗಬಲ್ಲವು. ಇದೇ ವಿಷಯವನ್ನೇ ಭಗವದ್ಗೀತೆ ಜ್ಞಾನಯೋಗದಲ್ಲಿ 37ನೇ ಶ್ಲೋಕದಲ್ಲಿ **'ಜ್ಞಾನಾಗ್ನಿ ಸರ್ವ ಕರ್ಮಾಣಿ ಭಸ್ಮಸಾತ್'** ಎಂದಿದ್ದಾರೆ. ಇದರ ಅರ್ಥ ಜ್ಞಾನವೆನ್ನುವ ಅಗ್ನಿಯಿಂದಲೇ ಸರ್ವ ಕರ್ಮಗಳು ಸುಟ್ಟುಹೋಗುತ್ತವೆ ಎಂದು ಇದೆ. ಆದ್ದರಿಂದ **ನಮ್ಮನ್ನು ಪಾಪಗಳಿಂದ ಮುಕ್ತಿ ಮಾಡುವುದು ಜ್ಞಾನವೆನ್ನುವ ರಕ್ತವೇ ಹೊರತು ಶರೀರ ರಕ್ತ ಅಲ್ಲವೆಂದು ತಿಳಿಯಬೇಕು.** ಇದರ ಪ್ರಕಾರ ಬೈಬಲ್‌ನಲ್ಲಿನ ಪೇತುರು 1ನೇ ಪತ್ರಿಕೆ, 1 ನೇ ಅಧ್ಯಾಯ 19ನೇ ವಚನ ವಿವರಿಸಿಕೊಳ್ಳೋಣ. **"ಅಮೂಲ್ಯವಾದ ರಕ್ತದಿಂದ ಅಂದರೆ ನಿರ್ದೋಷವನ್ನು ನಿಷ್ಕಳಂಕವಾಗುವ ಕುರಿಮರಿಯಂತಹ ಕ್ರಿಸ್ತರಕ್ತದಿಂದ ವಿಮೋಚಿಸಲ್ಪಟ್ಟಿದ್ದೀರೆಂದು ನೀವು ತಿಳಿದಿರುತ್ತೀರಿ."** ಇಲ್ಲಿ ನಾವು ಚೆನ್ನಾಗಿ ಯೋಚಿಸಿ ನೋಡಿದರೆ ಅಮೂಲ್ಯವಾದ ರಕ್ತ ಎಂದು ಹೇಳಲ್ಪಟ್ಟಿದೆ. ಪ್ರಪಂಚದಲ್ಲಿ ಪ್ರತಿ ವಸ್ತುವಿಗೂ ಲೆಕ್ಕಗಟ್ಟಿ ಇದು ಇಷ್ಟು

ಬೆಲೆಯುಳ್ಳದ್ದೆಂದು ಇದಕ್ಕೆ ಮೂಲ್ಯ (ಬೆಲೆ) ಕಟ್ಟಬಹುದು. ರಕ್ತವನ್ನು ಕೂಡ ಮೂಲ್ಯವಾಗಿ ಸ್ವಲ್ಪ ಹಣ ಕೊಟ್ಟು ಬ್ಲಡ್‌ಬ್ಯಾಂಕ್‌ನಿಂದ ತೆಗೆದುಕೊಳ್ಳುತ್ತಿದ್ದೇವೆ. ಆದರೆ ಇಲ್ಲಿ ಹೇಳಿದ ರಕ್ತ ಅಮೂಲ್ಯವಾದುದೆಂದಿದ್ದಾರೆ, ಬೆಲೆಕಟ್ಟಲಾರದ್ದು ಎಂದಿದ್ದಾರೆ. ಅಂತಹ ರಕ್ತ ಒಂದು ಜ್ಞಾನ ಮಾತ್ರವೇಯೆಂದು ತಿಳಿಯಬೇಕು. ಹಾಗೆ ಅರ್ಥ ಮಾಡಿಕೊಂಡರೇನೆ ಸರಿಹೋಗುತ್ತದೆ ಆದರೆ ಬೇರೆ ವಿಧವಾಗಿ ಸರಿಹೋಗುವುದಿಲ್ಲ. ನಿರ್ದೋಷ ಎಂದರೆ ಯಾವ ದೋಷ ಇಲ್ಲದಿರುವುದೆಂದು ಅರ್ಥ. ನಿಷ್ಕಳಂಕ ಎಂದರೆ ಯಾವ ಕಳಂಕ ಇಲ್ಲದಿರುವುದೆಂದು ಅರ್ಥ. ನಿರ್ದೋಷ ನಿಷ್ಕಳಂಕವಾದುದು ಒಂದು ದೇವರ ಜ್ಞಾನ ಹೊರತು ಪ್ರಪಂಚದಲ್ಲಿ ಯಾವುದು ಇಲ್ಲವೆಂದು ತಿಳಿಯಬೇಕು.

ಕ್ರಿಸ್ತ ರಕ್ತವನ್ನು ಕುರಿಮರಿಯಂಥದ್ದೆಂದು ಕೂಡ ಮೇಲಿನ ವಾಕ್ಯದಲ್ಲಿ ಇದೆ. ಇಲ್ಲಿ ಕುರಿಮರಿಯನ್ನು ಏಕೆ ಉದಾಹರಣೆಯಾಗಿ ತೆಗೆದುಕೊಂಡಿದ್ದಾರೆಂದು ನೋಡೋಣ. ಇಲ್ಲಿ ಉದಾಹರಣೆಗೇ ಅಲ್ಲದೆ ಯೇಸು ಪ್ರಭು ಕುರಿಮರಿಯನ್ನು ತನ್ನ ಕೈಯ್ಯಲ್ಲಿ ಇಟ್ಟುಕೊಂಡಂತೆ ಕೂಡ ಚಿತ್ರಗಳಲ್ಲಿ ನೋಡಿರುತ್ತೇವೆ. ಸರ್ವಸಾಧಾರಣವಾಗಿ ಪ್ರಾಣಿಗಳೆಲ್ಲವುಗಳಲ್ಲಿ ಕುರಿ ಬಹಳ ಅಮಾಯಕ ವಾದುದು. ಯಾವ ಕಡೆ ಓಡಿಸಿದರೆ ಆ ಕಡೆ ಹೋಗುತ್ತದೆ. ಉಳಿದ ಪ್ರಾಣಿಗಳಿಗಿಂತ ಗುಣಗಳ ಪ್ರಭಾವ ಇವುಗಳಿಗಿರುವುದಿಲ್ಲ, ಯಾರನ್ನಾದರೂ ಅಮಾಯಕವಾಗಿ ನಂಬಬಲ್ಲದು. ದೊಡ್ಡ ಕುರಿಗೇ ಗುಣಗಳ ಸಾಮರ್ಥ್ಯ ಕಡಿಮೆಯಾದಾಗ ಮತ್ತೆ ಚಿಕ್ಕ ಮರಿಗೆ ಎಂತಹ ಗುಣಗಳು ಇರುವುದಿಲ್ಲ ಅಲ್ಲವೆ! ಎಂತಹ ದೋಷ ಇಲ್ಲದ್ದು ದೇವರ ಜ್ಞಾನ ಆದ್ದರಿಂದ ಜ್ಞಾನವನ್ನು ಕುರಿಮರಿಯೊಂದಿಗೆ ಸಮಾನವಾಗಿ ಹೋಲಿಸಿ ಕುರಿಮರಿಯಂತಹ ಕ್ರಿಸ್ತ ರಕ್ತ ಎಂದಿದ್ದಾರೆ. ಇಲ್ಲಿ ಕ್ರಿಸ್ತ ರಕ್ತ ಕುರಿಮರಿಯಂಥದ್ದೆಂದು ಹೋಲಿಸುವುದರಲ್ಲಿ ಕ್ರಿಸ್ತ ರಕ್ತವನ್ನು ಜ್ಞಾನವಾಗಿ ವರ್ಣಿಸಿದ್ದಾರೆಂದು ತಿಳಿದುಕೊಳ್ಳಬೇಕು.

ಸಮಸ್ತ ಪ್ರಪಂಚಕ್ಕೂ ಅಧಿಪತಿಯಾದ, ಪರಲೋಕ ತಂದೆಯಾದ, ಪರಮಾತ್ಮ ಜ್ಞಾನ ಸಂಪೂರ್ಣವಾಗಿ ಹೊಂದಿ, ಜ್ಞಾನದಿಂದ ಸಮಸ್ತ ಪಾಪಗಳನ್ನು

ತೊಳೆಯುವವನು ಪ್ರಭು. ಆದ್ದರಿಂದ ಪವಿತ್ರವಾದ ಜ್ಞಾನಸ್ವರೂಪನಾಗಿ ವರ್ಣಿಸುತ್ತಾ ಯೋಹಾನ ಸುವಾರ್ತೆ 1 ನೇ ಅಧ್ಯಾಯ 29 ನೇ ವಾಕ್ಯದಲ್ಲಿ **"ಆತನು ಲೋಕ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿ"** ಎಂದಿದ್ದಾರೆ. ಇದರ ಅರ್ಥ ಯೇಸುಪ್ರಭು ಪಾಪಗಳನ್ನು ತೊಳೆಯುವ ಜ್ಞಾನಸ್ವರೂಪನೆಂದು ಅರ್ಥ. ಯೋಹಾನು ಮೊದಲ ಪತ್ರಿಕೆ ಒಂದನೆ ಅಧ್ಯಾಯ ಏಳನೆ ವಾಕ್ಯದಲ್ಲಿ **"ಆತನು ಬೆಳಕಿನಲ್ಲಿರುವುದರ ಪ್ರಕಾರ ನಾವು ಬೆಳಕಿನಲ್ಲಿ ನಡೆದರೆ, ನಾವು ಅನ್ಯೋನ್ಯ ಸಹಕಾರ ಇರುವವರಾಗಿ ಇರುತ್ತೇವೆ. ಆಗ ಆತನ ಕುಮಾರನಾದ ಯೇಸು ರಕ್ತ ಪ್ರತಿ ಪಾಪದಿಂದ ನಮ್ಮನ್ನು ಪವಿತ್ರರಾಗಿ ಮಾಡುವುದು."** ಈ ವಾಕ್ಯದ ಪ್ರಕಾರ ನೋಡಿದಂತಾದರೇ ದೇವರು ಜ್ಞಾನಪ್ರಕಾಶದಲ್ಲಿ ಇದ್ದಾನೆಂದು, ನಾವೂ ಸಹ ಅದೇ ಮಾರ್ಗದಲ್ಲಿ ನಡೆದುಕೊಂಡಾಗ ದೇವರ ಪ್ರತಿನಿಧಿಯಾದ ಯೇಸು ಜ್ಞಾನ ನಮ್ಮನ್ನು ಪಾಪದಿಂದ ತೊಳೆದುಹಾಕುತ್ತದೆಂದು ತಿಳಿಯುತ್ತಿದೆ. ಇಲ್ಲಿ ಕೂಡ ಯೇಸು ರಕ್ತವೆಂದಾಗ ದೇವರ ಜ್ಞಾನ ಎಂದು ಅರ್ಥ ಮಾಡಿಕೊಂಡರೇ ಸರಿಯಾದ ಭಾವವನ್ನು ಹೊಂದಬಲ್ಲರು. ನಾವು ಎಷ್ಟೋ ಜನ ಕ್ರೈಸ್ತವರೊಂದಿಗೆ ಭೇಟಿಯಾದಾಗ, ಇತರೆ ಬೋಧಕರು ಹೇಳುವಾಗ ನೋಡಿದರೇ ಮುಖ್ಯವಾಗಿ ಯೇಸು ರಕ್ತವೆಂದರೇ ಏನೋ ಅವರಿಗೆ ಅರ್ಥ ವಾಗಲಿಲ್ಲವೆಂದು ತಿಳಿಯುತ್ತಿದೆ. ಪುನಃ ಯೇಸೇ ಬಂದು ರಕ್ತವೆಂದರೇ ಜ್ಞಾನವೆಂದು ಹೇಳಿದರೂ ಕೇಳದವರು ಬಹಳ ಜನ ಇದ್ದಾರೆ. ಒಂದು ವೇಳೇ ಯೇಸು ಪ್ರಭು ಕಾಣಿಸಿದರೇ ನಿನ್ನ ರಕ್ತನಮ್ಮ ಪಾಪವನ್ನು ಕಳೆಯುವುದೆಂದು ಆತನನ್ನು ಗಾಯಪಡಿಸಿ ಆತನ ರಕ್ತ ಒಬ್ಬರಿಗೆ ಸರಿಹೋದರೂ ಸಾಕೆಂದು ಬಳಸಿಕೊಳ್ಳುವಂತಿದ್ದಾರೆ. ಪ್ರಭು ರಕ್ತವೆಂದರೇ ಜ್ಞಾನವೆಂದು ತಿಳಿಯುವವರೆಗು ಪ್ರಭು ಕಾಣಿಸಿದರೇ ನಿನ್ನ ರಕ್ತ ನಮಗೋಸ್ಕರ ಸೋರಿಸೆಂದು ಕೋರುವವರು ಇದ್ದಾರೆ.

ಪ್ರಭುವೊಂದರ ರಕ್ತವೆಂದರೇ ಆತನ ಜ್ಞಾನವೆಂದು ತಿಳಿದವರು ಶಿಲುಬೆ ಮೇಲೆ ನಮಗಾಗಿ ಆತನ ರಕ್ತವನ್ನು ಸೋರಿಸಿದ್ದಾನೆಂದುಕೊಳ್ಳುವುದಿಲ್ಲ. ಆ

ದಿನ ಮನುಷ್ಯರೇ ತಿಳಿಯದತನದಿಂದ ಪ್ರಭುವನ್ನು ಬಲವಂತವಾಗಿ ಶಿಲುಬೆ ಮೇಲೆ ಇಟ್ಟು ಮೊಳೆಗಳು ಹೊಡೆದು ರಕ್ತವನ್ನು ಸೋರುವಂತೆ ಮಾಡಿದ್ದಾರೆ. ಆ ದಿನ ಅವರು ಮಾಡುತ್ತಿರುವುದು ತಪ್ಪು ಎಂದು ಅದರಿಂದ ಭಯಂಕರವಾದ ಪಾಪ ಅವರಿಗೆ ಅಂಟಿಕೊಳ್ಳುತ್ತದೆಂದು ತಿಳಿದ ಪ್ರಭು **"ತಂದೆ ಇವರೇನು ಮಾಡುತ್ತಿದ್ದಾರೋ ಇವರು ತಿಳಿಯರು, ಇವರನ್ನು ಕ್ಷಮಿಸು"** ಎಂದು ಪರಮಾತ್ಮನನ್ನು ಬೇಡಿಕೊಂಡಿದ್ದಾನೆ. ಕ್ಷಮಿಸೆಂದು ಹೇಳುತ್ತಿದ್ದಾನೆಂದರೇ ಆ ದಿನ ಮನುಷ್ಯರು ಪಾಪ ಮಾಡುತ್ತಿದ್ದಾರೆಂದಲ್ಲವೇ ಅರ್ಥ.

ಪಿಲಾತುರಾಜು ನ್ಯಾಯಾಧಿಪತಿಯಾಗಿದ್ದು ಪ್ರಭುವನ್ನು ಶಿಲುಬೆಗೆ ಹಾಕುವುದು ಪಾಪವೆಂದು ತಿಳಿದು ತಪ್ಪದೆ ಮರಣಶಿಕ್ಷೆ ಹೇಳಬೇಕಾಗಿ ಬಂದಾಗ ಇದರ ಮೂಲವಾಗಿ ಬರುವ ಪಾಪ ನನಗಾಗಲಿ ನನ್ನ ಮಕ್ಕಳಿಗಾಗಲಿ ಅಂಟದಂತೆ ಇರಬೇಕೆಂದು ಆತನು ಹೇಳಿದಾಗ ಅಲ್ಲಿನ ಪ್ರಜೆಗಳು ಪಾಪಭೀತಿ ಇಲ್ಲದವರಾಗಿ ಆ ಪಾಪ ನಮಗೂ ನಮ್ಮ ಮಕ್ಕಳಿಗೇ ಇರುತ್ತದೆ ನೀನು ಮೊದಲು ಶಿಕ್ಷೆ ಹೇಳೆಂದು ರಾಜನಿಗೆ ಹೇಳಿದ್ದಾರೆ. ಆ ಮಾತನ್ನು ಕೇಳಿದ ಯೇಸುಪ್ರಭು ಶಿಲುಬೆಯನ್ನು ಹೊತ್ತುಕೊಂಡು ಹೋಗುತ್ತಾ ಕೊನೆಯಸಲ ಆತನು ಪ್ರಜೆಗಳಿಗೆ ಕೊಟ್ಟಿರುವ ಸಂದೇಶ ಒಂದು ಇದೆ. **"ನನಗಾಗಿ ಅಳಬೇಡಿ ನಿಮಗೋಸ್ಕರ ನಿಮ್ಮ ಮಕ್ಕಳಿಗೋಸ್ಕರ ದುಃಖಪಡುವಿರಿ"** ಎಂದು ಹೇಳಿದ್ದಾನೆ. ಯಾರ ಜೀವನದಲ್ಲಾದರೂ ಕೊನೆಯ ಸಂದೇಶ ದೊಡ್ಡದಾಗಿ ಪ್ರಾಮುಖ್ಯವಾದುದಾಗಿ ಇರುತ್ತದೆ. ಹಾಗೆಯೇ ಪ್ರಭು ಪ್ರಜೆಗಳಿಗೆ ಕೊಟ್ಟಿರುವ ದೊಡ್ಡ ಸಂದೇಶ ಕೂಡ ಅದೇ. ಏಕೆಂದರೆ ಆತನನ್ನು ಸಾಯಿಸಿದ ಹತ್ಯಾಪಾಪವನ್ನು ತಮಗು ತಮ್ಮ ಮಕ್ಕಳಿಗಿರುವಂತೆ ನ್ಯಾಯಸ್ಥಾನದಲ್ಲಿ ಪ್ರಭು ಮುಂದೆಯೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆ ಪಾಪ ಸುಮ್ಮನೆ ಹೋಗುವುದಿಲ್ಲ. ಅದರಿಂದ ತಪ್ಪದೆ ಅಳಬೇಕಾಗಿ ಬರುತ್ತದೆ. ಆದ್ದರಿಂದ ನಿಮಗೋಸ್ಕರ ನಿಮ್ಮ ಮಕ್ಕಳಿಗೋಸ್ಕರ ದುಃಖಿಸಿರಿ ಎಂದಿದ್ದಾನೆ. ಬಾಧೆಪಡದೇ ಪಾಪ ಹೋಗುವುದಿಲ್ಲ ಆದ್ದರಿಂದ ಅಳಿರಿ ಎಂದಿದ್ದಾನೆ. ಆತನ ಮಾತಿನ ಪ್ರಕಾರ ಯಾವ ಪ್ರಾರ್ಥನಾ ಮಂದಿರದಲ್ಲಾದರೂ

ನಮಗಾಗಿ ನಮ್ಮ ಮಕ್ಕಳಿಗಾಗಿ ಪ್ರಾರ್ಥನೆ ಮಾಡುತ್ತಿದ್ದೇವೆ ಹೊರತು ದೇವರಿಗೋಸ್ಕರ ಕೋರಿಕೆ ಇಲ್ಲದಂತೆ ಯಾರೂ ಮಾಡುತ್ತಿಲ್ಲ. ನಿನ್ನನ್ನು ಸಾಯಿಸಿದ್ದೇವೆ. ಆ ಪಾಪ ಕಳೆಯಬೇಕೆಂದು ಯಾರೂ ಕೇಳುತ್ತಿಲ್ಲ. ನಮಗೋಸ್ಕರ ನೀನು ಸತ್ತುಹೋಗಿದ್ದೀಯ ಎಂದು ಆತನೇ ಯಾವುದೋ ಕೆಲಸವಿದ್ದು ಮರಣಿಸಿದಂತೆ ಹೇಳುತ್ತಿದ್ದಾರೆ.

ನಮಗೋಸ್ಕರ ನಮ್ಮ ಪಾಪ ತೊಳೆಯುವುದಕ್ಕೋಸ್ಕರ ಆತನು ಶಿಲುಬೆ ಮೇಲೆ ರಕ್ತ ಸೋರಿಸಿದ್ದರೇ ನನ್ನ ರಕ್ತದಿಂದ ನಿಮ್ಮ ಪಾಪ ಹೋಗುತ್ತದೆ ನನ್ನ ರಕ್ತ ಸೋರಿದಾಗ ಎಲ್ಲರೂ ಸ್ವಲ್ಪ ಸ್ವಲ್ಪ ತೋಯಿಸಿಕೊಳ್ಳಿರೆಂದು ಪ್ರಭು ಹೇಳಲಿಲ್ಲವೇ! ತನ್ನ ರಕ್ತ ಸೋರುವುದರಿಂದ ಪಾಪ ಬರುತ್ತದೆಂದು ತಿಳಿದು ಇವರನ್ನು ಕ್ಷಮಿಸೆಂದು ದೇವರನ್ನು ಕೋರಿದ್ದಾನೆ. ತನ್ನ ರಕ್ತದಿಂದ ಪಾಪ ಹೋಗುತ್ತದೆಂದು ಪ್ರಭುವಿಗೆ ತಿಳಿದಿದ್ದರೇ ರಕ್ತವನ್ನು ಶಿಲುಬೆ ಮೇಲೆ ವ್ಯಥಾಹೋಗಲು ಬಿಡಬೇಡಿರೆಂದು ಹೇಳಿರುತ್ತಿದ್ದನು. ಹಾಗೆ ಹೇಳದೆ ನೀವು ನಂತರ ಅಳಬೇ ಕಾಗಿರುತ್ತದೆಂದು ಈಗ ನನಗಾಗಿ ಯಾರೂ ಅಳಬೇಕಾದ ಕೆಲಸವಿಲ್ಲ ಎಂದಿದ್ದಾನೆ. ಇದನ್ನನುಸರಿಸಿ ನೋಡಿದರೆ ಪ್ರಭು ರಕ್ತವನ್ನು ಸೋರಿಸುವುದರಿಂದ ಮಾನವರಿಗೆ ಪಾಪವೇ ಬಂದಿದೆ ಆದರೆ, ಪಾಪ ಪರಿಹಾರ ಆಗಲಿಲ್ಲ. ***ಪಾಪಿಗಳಿಗಾಗಿ ಪ್ರಭು ಮರಣಿಸಲಿಲ್ಲ, ಪಾಪಿಗಳಿಂದ ಪ್ರಭು ಮರಣಿಸಿದ್ದಾನೆ. ಪ್ರಭು ಸಾವಿನಿಂದ ಮಾನವರು ಪಾಪಾತ್ಮರಾಗಿದ್ದಾರೆ ಆದರೆ ಮಾನವರು ಪಾಪಪರಿಹಾರಿಗಳು ಆಗಲಿಲ್ಲ.*** ನಮ್ಮ ಕೈಯ್ಯಾರೆ ಆತನನ್ನು ಸಾಯಿಸಿ ನಮಗೋಸ್ಕರ ಆತನು ಮರಣಿ ಸಿದ್ದಾನೆನ್ನುವುದು ನ್ಯಾಯವಾ!

ಯೇಸು ಪ್ರಭು ಪಸ್ಕಾ ಹಬ್ಬದ ಸಂದರ್ಭದಲ್ಲಿ ತನ್ನ ಹನ್ನೆರಡು ಮಂದಿ ಶಿಷ್ಯರೊಂದಿಗೆ ಸೇರಿ ಭೋಜನ ಮಾಡುವುದಕ್ಕೆ ಕುಳಿತುಕೊಂಡಾಗ (ಮತ್ತಾಯ ಸುವಾರ್ತೆ 26 ನೇ ಅಧ್ಯಾಯ 26,27,28 ವಚನಗಳಲ್ಲಿ) "ಅವರು ಭೋಜನ ಮಾಡುತ್ತಿರುವಾಗ ***ಯೇಸು ಒಂದು ರೊಟ್ಟಿಯನ್ನು ಹಿಡಿದುಕೊಂಡು ಅದನ್ನು ಆಶೀರ್ವದಿಸಿ ಮುರಿದು ತನ್ನ ಶಿಷ್ಯರಿಗೆ ಕೊಟ್ಟು ನೀವು ಇದನ್ನು ತೆಗೆದುಕೊಂಡು***

***ತಿನ್ನಿರಿ ಇದು ನನ್ನ ಶರೀರವೆಂದು ಹೇಳಿದನು. ಮತ್ತು ಆತನು ಬಟ್ಟಲು ಹಿಡಿದುಕೊಂಡು ಕೃತಜ್ಞತಾಸ್ತುತಿಗಳು ಸಲ್ಲಿಸಿ ಅವರಿಗೆ ಕೊಟ್ಟು ಇದರಲ್ಲಿರುವುದು ನೀವು ಕುಡಿಯಿರಿ ಇದು ನನ್ನ ರಕ್ತ, ಅಂದರೆ ಪಾಪಕ್ಷಮಾಪಣೆ ನಿಮಿತ್ತ ಅನೇಕರಿಗಾಗಿ ಸೋರಿಸುತ್ತಿರುವ ನಿಬಂಧನೆ ರಕ್ತ"*** ಎಂದಿದ್ದಾನೆ. ಆ ದಿನ ಒಂದು ಬಟ್ಟಲಲ್ಲಿ ದ್ರಾಕ್ಷಾರಸವನ್ನು ಕೊಟ್ಟು ಇದು ಪಾಪಕ್ಷಮಾಪಣೆ ನಿಮಿತ್ತ ಸೋರಿಸಲ್ಪಡುತ್ತಿರುವ ನಿಬಂಧನೆ ರಕ್ತ ಎನ್ನುವುದರಲ್ಲಿ ಇರುವ ಆಂತರ್ಯವನ್ನು ಯಾರೂ ಅರ್ಥ ಮಾಡಿಕೊಂಡಿಲ್ಲ. ಶರೀರದಲ್ಲಿ ಯಾರಿಗಾದರೂ ರಕ್ತವಿರುತ್ತದೆ ಆದರೆ ನಿಬಂಧನೆ ಎನ್ನುವ ಹೆಸರು ಹೊಂದಿದ ರಕ್ತ ಇರುವುದಿಲ್ಲವಲ್ಲವೆ! ಕೊಟ್ಟಿರುವುದು ದ್ರಾಕ್ಷಾರಸ, ಹೇಳಿರುವುದು ರಕ್ತದಲ್ಲಿ ಪ್ರತ್ಯೇಕವಾದ ಹೆಸರು ಹೊಂದಿದೆ, ಆ ಪ್ರತ್ಯೇಕತೆ ಏನೋ ಯಾರಾದರೂ ಆಲೋಚಿಸಿದರೇ ಅದು ಮನುಷ್ಯನ ರಕ್ತ ಅಲ್ಲವೆಂದು, ದೇವರ ಧರ್ಮಗಳೊಂದಿಗೆ (ನಿಬಂಧನೆ ಗಳೊಂದಿಗೆ) ಕೂಡಿಕೊಂಡ ಜ್ಞಾನವೆಂದು ತಿಳಿಯಬಲ್ಲದು. ದೇವರ ರಕ್ತ ಎಂದರೆ ಜ್ಞಾನವೆಂದು ತಿಳಿದಾಗ ಪ್ರಭುವೊಂದರ ಜ್ಞಾನ ಸಂಪೂರ್ಣವಾಗಿ ಅರ್ಥವಾಗುತ್ತದೆ. ದೇವರ ರಕ್ತವನ್ನು ಮನುಷ್ಯರ ರಕ್ತದ ಹಾಗೆ ಸೋರಿಹೋಗುವುದು ಎಂದುಕೊಂಡರೆ ಪ್ರಭುವೊಂದರ ಜ್ಞಾನ ಅರ್ಥವಾಗದಂತೇ ಎಂದು ತಿಳಿಯುತ್ತಿದೆ. ಪರವಸ್ತು ಸೂರ್ಯನಾರಾಯಣರಾವು ಶಿಲುಬೆ ಮೇಲೆ ಶರೀರದಿಂದ ರಕ್ತ ಸೋರಿದ ಪ್ರಭುವನ್ನು ಕುರಿತು ಬ್ರಾಹ್ಮಣ ಕುಲದಿಂದ ಕ್ರೈಸ್ತವಮತದೊಳಗೆ ಬದಲಾಗಿ ಹೋಗಿದ್ದಾನೆ. ಆದರೆ ವಿಶಾಲ ವಿಶ್ವವೇ ಶರೀರವಾಗಿ, ಕಳಂಕವಿಲ್ಲದ ಜ್ಞಾನವೇ ರಕ್ತವಾಗಿ ಇರುವಾಗ, ಮಾಯೆ (ಸಾತಾನ್) ಎನ್ನುವ ಶಿಲುಬೆ ಮೇಲೆ ಮಾನವರಿಗಾಗಿ ಜ್ಞಾನರಕ್ತವನ್ನು ಚೆಲ್ಲಿದ ಪ್ರಭುವನ್ನು ಕುರಿತು ಅಲ್ಲವೆಂದು, ಆತನಿಗೆ ಅಷ್ಟು ವಿಶಾಲವಾದ ಭಾವವಿಲ್ಲವೆಂದು ತಿಳಿಯುತ್ತಿದೆ.

ದೇವರು ವಿಶಾಲವಾದವನೆಂದು, ಆತನಿಗೆ ತಿಳಿಯದಿರುವುದು ಯಾವುದೂ ಇಲ್ಲವೆಂದು, ಆತನನ್ನು ನಾವು ಕೋರಬೇಕಾಗಿರುವುದು ಪರಲೋಕ ರಾಜ್ಯದಲ್ಲಿ ಸ್ಥಾನವೆಂದು (ಮೋಕ್ಷವೆಂದು), ತಿಳಿದವನಾದರೇ ತನ್ನನ್ನು ದೇವರ

ಹತ್ತಿರಕ್ಕೆ ಸೇರಿಸಿಕೊಳ್ಳಬೇಕೆಂದು ಕೋರಬೇಕು. ಹಾಗೆ ಪರವಸ್ತು ಎಂದಿಗೂ ಕೇಳಲಿಲ್ಲ. ಆತನು ದೇವರನ್ನು ಕೇಳಿರುವುದು ನನ್ನ ಮಗನಿಗೆ ಚಪಾತಿ ಬೇಕಂತೆ, ಅನ್ನ ಬೇಡವಂತೆ, ನಮ್ಮ ಹತ್ತಿರ ಗೋದಿಹಿಟ್ಟು ಇಲ್ಲ ಹೇಗಾದರೂ ನಮಗೆ ಗೋದಿಹಿಟ್ಟು ಸಿಗುವಂತೆ ಮಾಡೆಂದು ಕೋರಿದ್ದಾನೆ. ಮತ್ತೊಂದು ಬಾರಿ ನನ್ನ ಮಗನಿಗೆ ಸ್ಕೂಲ್ ಫೀಜಿಗೆ ಪುಸ್ತಕಗಳಿಗೆ ಸಾವಿರ ರೂಪಾಯಿ ಹಣ ಬೇಕೆಂದು ಕೋರಿದ್ದಾನೆ. ಒಂದು ಬಾರಿ ಮಗುವಿಗೆ ಹಾಲಿನ ಡಬ್ಬಿ ಖಾಳಿಯಾಗಿ ಹೋಗಿದೆ ಹೇಗಾದರೂ ಹಾಲಿನ ಡಬ್ಬಿ ಬೇಕು ದಯಮಾಡಿ ಎಂದು ಕೋರುವುದು ನಡೆದಿದೆ. ಪರಲೋಕಾಧಿಪತಿಯಾದ ದೇವರನ್ನು ಪರಲೋಕ ಸಂಬಂಧವಾದ ಕೋರಿಕೆಗಳು ಕೋರಬೇಕಾಗಲಿ ಹಾಗಲ್ಲದೆ ಚಿಕ್ಕ ಚಿಕ್ಕ ಪ್ರಪಂಚ ಕೋರಿಕೆಗಳು ಕೋರುತ್ತಿದ್ದರೇ ಅವು ನೆರವೇರಿಸುವುದಕ್ಕೆ ಆತನೇನಾದರೂ ನಮ್ಮ ಸೇವಕನಾ! ನಾವು ದೇವರ ಸೇವಕರಾಗಿ ಇರಬೇಕೇ ಹೊರತು ದೇವರನ್ನೇ ನಮ್ಮ ಸೇವಕನಾಗಿ ಭಾವಿಸಿಕೊಳ್ಳಬಾರದು. **ಕೇಳಿರಿ ಕೊಡುತ್ತೇನೆ** ಎನ್ನುವ ಮಾತನ್ನು ದೇವರು ಹೇಳಿದರೂ, **ಕೇಳಿದವನಿಗೆ ಕೊಡಲಾಗುತ್ತದೆಂದು** ಹೇಳಿದರೂ ಆತನು ಕೇಳೆಂದಿದ್ದು ಜ್ಞಾನವೇ ಹೊರತು ಪ್ರಪಂಚ ಕೋರಿಕೆಗಳು ಅಲ್ಲ. ಪ್ರಪಂಚದಲ್ಲಿ ಯಾವುದು ಯಾರಿಗೆ ಸಿಗಬೇಕೋ ಅದು ಮೊದಲೇ ನಿರ್ಣಯಿಸಲ್ಪಟ್ಟಿರುತ್ತದೆ. ಪ್ರಪಂಚ ವಿಷಯಗಳು ಹುಡುಕದೇನೆ ಸಿಗುತ್ತವೆ. ದೇವರ ವಿಷಯಗಳು ಹುಡಿಕಿದರೇನೇ ಸಿಗುತ್ತವೆ. ಆದ್ದರಿಂದ ಸ್ವಲ್ಪ ಜ್ಞಾನ ತಿಳಿದವರು ಪ್ರಪಂಚ ವಿಷಯಗಳನ್ನು ಕೋರದೆ, ದೇವರನ್ನು ದೇವರ ವಿಷಯಗಳನ್ನೇ ಕೋರುತ್ತಾರೆ.

ಭೂಮಿ ಮೇಲೆ ಎಷ್ಟೋ ತಿಳಿದಂತೆ ಕಾಣಿಸುವವರು ಸಹ ದೇವರ ಜ್ಞಾನವನ್ನು ಕೋರದೆ ಪ್ರಪಂಚ ಕೋರಿಕೆಗಳನ್ನು ಕೋರುತ್ತಿರುವರು. ಕೆಲವರು ಎಷ್ಟು ಬಡವರಾದರೂ ತಮಗೆ ದೇವರ ಜ್ಞಾನವೇ ಬೇಕೆಂದು ದೇವರನ್ನು ಕೋರುತ್ತಿರುವರು. ಈ ವಿಧವಾಗಿ ಲೆಕ್ಕಿಸಿ ನೋಡಿದರೇ ದೇವರನ್ನು ಪ್ರಾರ್ಥನೆ ಮಾಡಿದರೂ ಕೆಲವರು ಪ್ರಪಂಚ ಕೋರಿಕೆಗಳನ್ನು ಕೋರುವವರು, ಮತ್ತೆ ಕೆಲವರು ಪರಲೋಕರಾಜ್ಯದಲ್ಲಿ ಸ್ಥಾನವನ್ನು ಕೋರುವವರು ಎರಡು ವಿಧಗಳಲ್ಲಿ

ಕಾಣಿಸುತ್ತಿದ್ದಾರೆ. ಇಂತಹ ಎರಡು ವಿಧಗಳ ಕೋರಿಕೆಗಳು ಕೋರುವವರನ್ನು ಎರಡು ವರ್ಗಗಳಾಗಿ ವಿಭಜಿಸಬಹುದು. **ಒಂದು ವರ್ಗ ಹಾವು ಸಂತತಿಯೆಂದು, ಎರಡನೆ ವರ್ಗ ಪಕ್ಷಿಸಂತತಿಯೆಂದು** ಹೇಳಿಕೊಳ್ಳಬಹುದು. ಬೈಬಲ್‌ನಲ್ಲಿ ಕೂಡ ಹಾವು, ಪಕ್ಷಿ ಎನ್ನುವ ಎರಡು ಮಾತುಗಳು ಇವೆ. ಬಾಪ್ತಿಸ್ಮ ಕೊಡುವ ಯೋಹಾನು ಅಲ್ಲಿಗೆ ಬಂದಿರುವ ಪ್ರಜೆಗಳನ್ನು ಉದ್ದೇಶಿಸಿ ಸರ್ಪಸಂತಾನವಾ ಎನ್ನುವ ಮಾತು ಇದೆ. ಆಗಲೇ ಯೇಸು ಪ್ರಭು ಬಂದು ಯೋಹಾನು ಹತ್ತಿರ ಬಾಪ್ತಿಸ್ಮ ಹೊಂದಿದಾಗ ಪರಿಶುದ್ಧಾತ್ಮ ಪಾರಿವಾಳದ ಆಕಾರದಿಂದ ಪ್ರಭು ಮೇಲೆ ಇಳಿಯಿತು ಎಂದು ಸಹ ಇದೆ. ಇಲ್ಲಿ ಪ್ರಸ್ತಾವಿಸಲ್ಪಟ್ಟಿರುವ ಹಾವು ಅಜ್ಞಾನ ಪ್ರಜೆಗಳ ಕಡೆಯೂ, ಹಾಗೆಯೇ ಪಕ್ಷಿ ಜ್ಞಾನವಂತನಾದ ಪ್ರಭು ಕಡೆ ಹೇಳಲ್ಪಟ್ಟಿದೆ. ಹಾಗೆ ಏಕೆ ಹೇಳಿದ್ದಾರೋ ವಿವರಿಸಿಕೊಂಡು ನೋಡಿದಂತಾದರೆ ಹಾವು ಪಕ್ಷಿ ಎರಡು ಬದ್ಧ ಶತ್ರುಗಳು. ಹಾವು ಶರೀರವೆಲ್ಲವನ್ನು ಭೂಮಿಗೆ ಅಂಟಿಸಿ ಭೂಮಿಮೇಲೆಯೇ ಉರುಳುತ್ತಿರುತ್ತದೆ. ಭೂಮಿ ಸ್ಪರ್ಶ ಇಲ್ಲದಂತೆ ಎಂದಿಗೂ ಇರುವುದಿಲ್ಲ. ಭೂಮಿಗೆ ಮೇಲೆ ಆಕಾಶ ಇದೆ. ಪಕ್ಷಿ ಯಾವಾಗಲೂ ಆಕಾಶದಲ್ಲಿಯೇ ಎಗರುತ್ತಾ ಪಯಣಿಸುತ್ತಿರುತ್ತದೆ. ಪಕ್ಷಿ ಜಾತಿಯೆಲ್ಲವೂ ಭೂಮಿಗೆ ಮೇಲೆ ಗಿಡಗಳ ಮೇಲಾಗಲೀ ಆಕಾಶದಲ್ಲಾಗಲೀ ಇರುತ್ತದೆ. ಹಾವು ಯಾವಾಗಲೂ ಕೆಳಗೆ, ಪಕ್ಷಿ ಯಾವಾಗಲೂ ಮೇಲೆ ಇರುತ್ತದೆ. ಅದೇ ರೀತಿಯಾಗಿಯೇ ಅಜ್ಞಾನಕ್ಕಿಂತ ದೊಡ್ಡದಾಗಿ ಉನ್ನತ ಸ್ಥಿತಿಯಲ್ಲಿ ಜ್ಞಾನವಿರುತ್ತದೆ. ಆದ್ದರಿಂದ ಅಜ್ಞಾನ ಹಾವಾಗಿ, ಜ್ಞಾನವನ್ನು ಪಕ್ಷಿಯಾಗಿ ವರ್ಣಿಸಿ ಹೇಳುತ್ತಿದ್ದೇವೆ. ಮಾಯೆಯನ್ನು (ಸಾತಾನ್) ಸರ್ಪವಾಗಿ, ದೇವರ ಆತ್ಮವನ್ನು ಪಕ್ಷಿಯಾಗಿ (ಪಾರಿವಾಳವಾಗಿ) ಬೈಬಲ್‌ನಲ್ಲಿ ಕೂಡ ಹೇಳಿದ್ದಾರೆ. ಹಾವಿಗೂ ಪಕ್ಷಿಗೂ ಶತ್ರುತ್ವವಿದ್ದಂತೇ ಅಜ್ಞಾನಿಗಳಿಗೂ ಜ್ಞಾನಿಗಳಿಗು ಕೂಡ ಭೂಮಿಮೇಲೆ ವಿರುದ್ಧವಾಗಿಯೇ ಇರುತ್ತದೆ. ಜ್ಞಾನಿಗಳ ಕೆಲಸಗಳೆಲ್ಲವೂ ಅಜ್ಞಾನಿಗಳಿಗೆ ವಿರುದ್ಧವಾಗಿ ಕಾಣಿಸುತ್ತಿರುತ್ತವೆ. ಪಕ್ಷಿ ಆಗಾಗಾಗಲೀ ಯಾವಾಗಾದರಾಗಲಿ ಭೂಮಿಮೇಲೆಗೆ ಇಳಿದು ಬರುತ್ತದೆ ಆದರೆ ಹಾವು ಮಾತ್ರ ಎಂದಿಗೂ ಮೇಲಕ್ಕೆ ಹಾರುವುದಿಲ್ಲ. ಆ ವಿಧವಾಗಿಯೇ ಜ್ಞಾನಿ ಯಾವಾಗಾದರೂ ಸ್ವಲ್ಪ ಅಜ್ಞಾನಿಯಾಗಿ ಬದಲಾಗುವುದಕ್ಕೆ ಅವಕಾಶವಿದೆ ಆದರೆ ಅಜ್ಞಾನಿ ಜ್ಞಾನಿಯಾಗಿ

ಬದಲಾಗುವುದು ಬಹಳ ಕಷ್ಟ. ಕೆಳಗೆ ಭೂಮಿ ಮೇಲಿರುವ ಹಾವು ಮೇಲಿರುವ ಪಕ್ಷಿಗಿಂತ ನಾನು ಬಹಳ ಉದ್ದ ಇದ್ದೇನೆಂದು, ಪಕ್ಷಿ ನನಗಿಂತ ಚಿಕ್ಕದೆಂದು ಕೊಳ್ಳುತ್ತಿರುತ್ತದೆ. ಆ ವಿಧವಾಗಿಯೇ ಅಜ್ಞಾನಿ ಜ್ಞಾನಿಯನ್ನು ನೋಡಿ ಅವನಿಗಿಂತ ನಾನೇ ದೊಡ್ಡವ ನನಗೇ ಬಹಳ ತಿಳಿದಿದೆ ಎಂದುಕೊಳ್ಳುತ್ತಿರುವನು. ಭೂಲೋಕದಲ್ಲಿನ ಮನುಷ್ಯರು ಸಹ ತಮಗೆ ಜ್ಞಾನ ತಿಳಿಯದಿದ್ದರೂ ಸಂಪೂರ್ಣ ವಾಗಿ ತಿಳಿದಿದೆಯೆನ್ನುವ ಉದ್ದೇಶದಲ್ಲಿ ಮುಳುಗಿರುತ್ತಾರೆ. ಅಂತಹವರು ಯಾರಿಗು ಕಾಣಿಸದ ದೇವರು ತಮಗೆ ಕಾಣಿಸಿದ್ದಾನೆಂದು ತಮ್ಮೊಂದಿಗೆ ಮಾತನಾಡಿದ್ದಾ ನೆಂದು ಕೂಡ ಹೇಳಿಕೊಳ್ಳುತ್ತಿರುವರು.

ಆಧ್ಯಾತ್ಮಿಕ ವಿದ್ಯೆಯಲ್ಲಿ ಬಲವಾದ ಹೆಬ್ಬಾವು ಎನ್ನುವ ದೊಡ್ಡ ಹಾವನ್ನು ಮಾಯೆ (ಸಾತಾನ್)ಗೆ ಹೋಲಿಸಿ ಹೇಳಿದ್ದಾರೆ. ಹಾಗೆಯೇ ಬಿಳಿ ಪಾರಿವಾಳವನ್ನು ಆತ್ಮವಾಗಿ, ಆತ್ಮ ಜ್ಞಾನವಾಗಿ ಹೋಲಿಸಿ ಹೇಳಿದ್ದಾರೆ. ಮನುಷ್ಯರು ಮಾಯೆಯಲ್ಲೇ ಹೆಚ್ಚಾಗಿ ಇದ್ದಾರೆ. ಮಾಯೆ ಪ್ರಭಾವದಲ್ಲಿನ ಮನುಷ್ಯರೆಲ್ಲರನ್ನೂ ಸರ್ಪ ಸಂತಾನವೆಂದು ಸಹ ಹೇಳುವುದು ನಡೆದಿದೆ. ಮಾಯಾ ಮಾರ್ಗದಲ್ಲಿನ ಅವರು ಸರ್ಪಸಂತಾನವಾದರೇ ದೇವರ ಮಾರ್ಗದಲ್ಲಿ ನಡೆಯುವವರೆಲ್ಲರೂ ಪಕ್ಷಿಸಂತಾನವೆಂದು ಹೇಳಬಹುದು. ಈಗ ನಾವು ಪಕ್ಷಿಸಂತಾನವಾ ಅಥವಾ ಹಾವಿನ ಸಂತಾನವಾ ಎಂದು ಹಿಂತಿರುಗಿ ನೋಡಿಕೊಳ್ಳಬೇಕಾದ ಅವಶ್ಯವಿದೆ.

ನಾವು ಇಲ್ಲಿಯವರೆಗು ಹೇಳಿರುವುದು ಮತಾತೀತ ಜ್ಞಾನ. ಪರವಸ್ತು ಸೂರ್ಯನಾರಾಯಣರಾವು ಅವರು ಹಿಂದೂ ಮತವನ್ನು ಮತ್ತು ಶ್ರೀಕೃಷ್ಣನನ್ನು ಹೀಯಾಳಿಸಿ ಬರೆದಂತೆ ನಾವು ಯಾರನ್ನೂ ಹೀಯಾಳಿಸಲಿಲ್ಲ. ಪ್ರಭುವನ್ನು ದೇವರು ಎನ್ನುತ್ತಿದ್ದೇವೆ. ಹಾಗೆಯೇ ಕೃಷ್ಣನನ್ನು ಕೂಡ ದೇವರೇ ಎನ್ನುತ್ತಿದ್ದೇವೆ. ಒಬ್ಬನೇ ದೇವರು ಹಿಂದೆ ಮುಂದೆ ಹುಟ್ಟಿರುವುದರಿಂದ, ಆತನನ್ನು ಗುರುತಿಸುವ ಜ್ಞಾನ ಇಲ್ಲದೇ ಹೋಗುವುದರಿಂದ, ಪ್ರಭು ಬೇರೆ, ಕೃಷ್ಣನು ಬೇರೆಯೆಂದು ಬಹಳ ಮಂದಿ ಅಂದುಕೊಳ್ಳುತ್ತಿದ್ದಾರೆ. ನಾವು ಹಾಗೆ ಹೇಳದೆ ಪ್ರಭುವೊಂದರ ಆಕಾರವನ್ನು, ಕೃಷ್ಣನೊಂದರ ಆಕಾರವನ್ನು ನೋಡದೆ ಅವರಲ್ಲಿನ ಜ್ಞಾನವನ್ನು

ನೋಡೆನ್ನುತ್ತಿದ್ದೇವೆ. ಜ್ಞಾನದೃಷ್ಠಿಯಿಂದ ನೋಡಿದರೇ ಇಬ್ಬರದ್ದು ಒಂದೇ ಜ್ಞಾನ ಎಂದು ತಿಳಿಯುತ್ತಿದೆ. ಕುರುಡನಿಗೆ ಆನೆ ಕಾಲು ಸ್ಥಂಬದ ಹಾಗೆ, ಕಿವಿ ಮೊರದ ಹಾಗೆ ತಿಳಿದಂತೆ, ಜ್ಞಾನ ದೃಷ್ಠಿ ಇಲ್ಲದವರಿಗೆ ಕೃಷ್ಣನು ಬೇರೆ ಯೇಸುಪ್ರಭು ಬೇರೆಯೆಂದು ಅರ್ಥವಾಗುತ್ತದೆ. ಒಂದೇ ಆನೆಗಿರುವ ಕಾಲನ್ನು ಸ್ಥಂಬವೆಂದು, ಕಿವಿಯನ್ನು ಮೊರವೆಂದು ಬೇರೆಬೇರೆಯಾಗಿ ಹೇಳಿಕೊಂಡಂತೆ ಒಂದೇ ದೇವರನ್ನು ಕೃಷ್ಣನಾಗಿ ಕೆಲವರು ಪ್ರಭುವಾಗಿ ಕೆಲವರು ವಿಭಜಿಸಿಕೊಂಡು ನೋಡುತ್ತಿದ್ದಾರೆ. ಎರಡು ರೂಪಗಳು ಪರಮಾತ್ಮನಿಂದ ಬಂದಿರುವವೇಯೆಂದು ತಿಳಿದಾಗಲೇ ಮತಾತೀತ ಜ್ಞಾನ ಅರ್ಥವಾಗುತ್ತದೆ.

ನೀನು ಹಿಂದೂವಾದರೇ ಇಂದಿನಿಂದ ಪ್ರಭುವನ್ನು ಕುರಿತು ತಿಳಿದು ಕೊಳ್ಳುವುದಕ್ಕೆ ಪ್ರಯತ್ನಿಸು. ಒಂದು ವೇಳೆ ನೀನು ಕ್ರೈಸ್ತವನಾದರೇ ಇಂದಿನಿಂದ ಕೃಷ್ಣನನ್ನು ಕುರಿತು ತಿಳಿಯುವುದಕ್ಕೆ ಪ್ರಯತ್ನಿಸು. ತಿಳಿದಕೊಳ್ಳುವುದರಲ್ಲಿ ತಪ್ಪಿಲ್ಲ. ಮತಗಳು ಬದಲಾಗುವುದರಲ್ಲಿ ತಪ್ಪಿದೆ. ಹಾಗೆ ತಿಳಿದುಕೊಳ್ಳುವುದರಿಂದ ಕ್ರೈಸ್ತರು ಕೃಷ್ಣನನ್ನು ದೂಷಿಸುವುದಿಲ್ಲ. ಹಿಂದೂಗಳು ಪ್ರಭುವನ್ನು ಅಸೂಯೆಯಿಂದ ದ್ವೇಷಿಸುವುದಿಲ್ಲ. ತಿಳಿದುಕೊಳ್ಳದೆ ಹೋಗುವುದರಿಂದ ಕ್ರೈಸ್ತರು ಕೃಷ್ಣನನ್ನು ದೇವರಲ್ಲವೆಂದರೇ, ಅವರು ನಿಜವಾಗಿಯೂ ಅವರ ಪ್ರಭುವನ್ನೇ ದೇವರಲ್ಲ ಎನ್ನುವಂತಿರುತ್ತದೆ. ಹಾಗೆಯೇ ಹಿಂದೂಗಳು ಪ್ರಭುವನ್ನು ದೇವರಲ್ಲವೆಂದರೇ ಅವರು ಕೂಡ ನಿಜವಾಗಿಯೂ ಕೃಷ್ಣನನ್ನೇ ದೇವರಲ್ಲ ಎಂದಂತಿರುತ್ತದೆ. ಏಕೆಂದರೇ ಒಬ್ಬನೇ ದೇವರಾದ ಪರಮಾತ್ಮ ಒಂದುಬಾರಿ ಕೃಷ್ಣನಾಗಿ ಬಂದು ಜ್ಞಾನವನ್ನು ತಿಳಿಸಿಹೋಗಿದ್ದಾನೆ. ಹಾಗೆಯೇ ಮತ್ತೊಂದು ಸಲ ಯೇಸು ಪ್ರಭುವಾಗಿ ಬಂದು ಜ್ಞಾನವನ್ನು ತಿಳಿಸಿಹೋಗಿದ್ದಾನೆ. ನಂತರ ಕೂಡ ಬರುತ್ತೇನೆಂದಿದ್ದಾನೆ. ಯೇಸುಗಿಂತ ಮೊದಲು ಬಂದವನು, ಯೇಸು ನಂತರ ಬರುವವನು ಒಬ್ಬನೇ ದೇವರು. ಆ ದೇವರು ಯಾವ ಹೆಸರೊಂದಿಗೆ ಯಾವಾಗ ಬರುತ್ತಾನೋ ಯಾರಿಗೂ ತಿಳಿದಿಲ್ಲ. ಈ ವಿಷಯವಾಗಿ ಮತ್ತಾಯ ಸುವಾರ್ತೆ 11ನೇ ಅಧ್ಯಾಯದಲ್ಲಿ 27ನೇ ವಚನದಲ್ಲಿ **"ತಂದೆ ಅಲ್ಲದೆ ಕುಮಾರನನ್ನು ಯಾರೂ**

**ತಿಳಿದಿಲ್ಲ. ಕುಮಾರನಲ್ಲದೆ, ಕುಮಾರನು ಯಾರಿಗೆ ಆತನನ್ನು ಹೊರಗಿಡಲು ಉದ್ದೇಶಿಸಿದ್ದಾನೋ ಅವನಲ್ಲದೆ ಮತ್ತೆ ಯಾರೂ ತಂದೆಯನ್ನು ತಿಳಿದಿಲ್ಲ."** ಎಂದು ಇದೆ. ಇದು ಪ್ರಭು ಹೇಳಿದ ಮಾತು.

ಬೈಬಲ್ ಭಾವದ ಪ್ರಕಾರ ತಂದೆ ಎಂದರೆ ಪರಮಾತ್ಮ (ದೇವರು) ಎಂದು ಅರ್ಥ. ಕುಮಾರನೆಂದರೆ ದೇವರು ಮನುಷ್ಯನಾಗಿ ಭೂಮಿ ಮೇಲೆ ಅವತರಿಸಿದಾಗ ಆತನನ್ನು ಕುಮಾರನು ಎಂದು ಕ್ರೈಸ್ತವಮತದಲ್ಲಿ ಕರೆಯುತ್ತಾರೆ. ಹಿಂದೂ ಮತದಲ್ಲಿ ದೇವರ ಅವತಾರವನ್ನು ಭಗವಂತನೆಂದು ಕರೆಯುತ್ತಾರೆ. ಭಗವಂತನೆಂದರು ದೇವರ ಕುಮಾರನೆಂದರೂ ಒಂದೇ ಅರ್ಥ. ದೇವರು ಮನುಷ್ಯನಾಗಿ ಯಾವಾಗ ಎಲ್ಲಿ ಯಾವ ರೂಪದಲ್ಲಿ ಹುಟ್ಟಿದ್ದಾನೋ ಮನುಷ್ಯರಿಗೆ ಯಾರಿಗೂ ತಿಳಿಯದೆಂದು ಭಗವದ್ಗೀತೆಯಲ್ಲಿಯೂ ಹೇಳಲ್ಪಟ್ಟಿದೆ. ಹಾಗೆಯೇ ಬೈಬಲ್‌ನಲ್ಲಿಯೂ ಸಹ ಹೇಳಲ್ಪಟ್ಟಿದೆ. ಇದರ ಪ್ರಕಾರ ಇತ್ತ ಹಿಂದೂಗಳಿಗಾಗಲೀ, ಅತ್ತ ಕ್ರೈಸ್ತರಿಗಾಗಲೀ ದೇವರ ಜನ್ಮವನ್ನು ಕುರಿತು ತಿಳಿಯದೆಂದು ಹೇಳುತ್ತಿದ್ದೇವೆ. ಈಗ ಕೆಲವರು ಈ ವಿಧವಾಗಿ ಪ್ರಶ್ನಿಸಬಹುದು. "ಹಿಂದೂಮತದಲ್ಲಿ ದಶಾವತಾರಗಳೆಂದು ಹೇಳಿ ದೇವರು ಒಂಬತ್ತು ಅವತಾರಗಳಾಗಿ ಹುಟ್ಟಿದ್ದಾನೆಂದು, ಹತ್ತನೆಯ ಅವತಾರವಾದ ಕಲ್ಕಿ ಭಗವಾನ್ ಆಗಿ ಹುಟ್ಟಬೇಕಾಗಿದೆಯೆಂದು ಹೇಳುತ್ತಿದ್ದಾರಲ್ಲವೆ!" ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೆ! ಯಾವುದಾದರೂ ಶಾಸ್ತ್ರ ಆಧಾರದಿಂದಲೇ ಹೇಳಬೇಕೆಂದು ಮೊದಲೇ ಹೇಳಿಕೊಂಡಿದ್ದೇವೆ. ದಶಾವತಾರ ವಿಷಯ ಪುರಾಣದೊಳಗಿನದ್ದು ಆದರೆ ಶಾಸ್ತ್ರದೊಳಗಿನದ್ದಲ್ಲ. ಶಾಸ್ತ್ರ ಪ್ರಮಾಣವಿಲ್ಲದ ಅವತಾರಗಳನ್ನು ಸತ್ಯವೆಂದು ಕೊಳ್ಳಬಾರದು. ಮತ್ತೊಂದು ಮಾತು ಏನೆಂದರೆ ದಶಾವತಾರಗಳಲ್ಲಿ ಕೃಷ್ಣನ ಹೆಸರು ಸಹ ಇಲ್ಲ. ದೇವರ ಹುಟ್ಟುವಿಕೆಯಾದ ಭಗವಂತನು ಯಾರಾಗಿರುವುದು ದೇವರಿಗೇ ತಿಳಿದಿರುತ್ತದೆ ಉಳಿದವರಿಗೆ ತಿಳಿದಿಲ್ಲವೆನ್ನುವ ಭಗವದ್ಗೀತೆ ವಾಕ್ಯಕ್ಕೆ, ತಂದೆಯಲ್ಲದೆ ಕುಮಾರನನ್ನು ಯಾರು ತಿಳಿಯರು ಎಂಬ ಬೈಬಲ್ ವಾಕ್ಯಕ್ಕೆ ವಿರುದ್ಧವಾದವು ದಶಾವತಾರಗಳೆಂದು ತಿಳಿಯಬೇಕು. ದಶಾವತಾರಗಳು ನಿಜವಾದ ಪರಮಾತ್ಮ ಅವತಾರಗಳಲ್ಲ.

ದೇವರು ಮನುಷ್ಯನಾಗಿ ಬಂದುಹೋದ ನಂತರ ಕೂಡ ಇಂತಹವನು ಭಗವಂತನೆಂದು ಗುರುತಿಸಲಾರದೆ ಹೋಗುತ್ತಿರುವ ಮನುಷ್ಯರು ಭಗವಂತನು (ದೇವರ ಕುಮಾರನು) ಭೂಮಿಮೇಲೆ ಇರುವಾಗ ಕಂಡುಕೊಳ್ಳುವುದು ದುರ್ಲಭ. ಜ್ಞಾನವಿರುವವನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿದರೂ ಆತನು ಎದುರುಗಡೆ ಮನುಷ್ಯನಾಗಿ ಇರುವಾಗ ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಮಾಯೆ ಭಗವಂತನನ್ನು ತಿಳಿಯದಂತೆ ಮಾಡಬಲ್ಲದು. ಆತನು ಬಂದು ಹೋದ ನಂತರ ಇಲ್ಲಿಗೆ ಐದು ಸಾವಿರ ವರ್ಷಗಳಾದರೂ ಕೃಷ್ಣನು ಪರಮಾತ್ಮ ಅವತಾರವೆಂದು, ಎರಡು ಸಾವಿರ ವರ್ಷಗಳಾದರೂ ಯೇಸುಪ್ರಭು ದೇವರ ಅವತಾರವೆಂದು ಮನುಷ್ಯರು ತಿಳಿದುಕೊಳ್ಳಲಾರದೆ ಇದ್ದಾರೆ. ಕೆಲವರು ಪ್ರಭುವನ್ನು ದೇವರೆಂದು ಒಪ್ಪಿಕೊಂಡರೆ ಮತ್ತೆ ಕೆಲವರು ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಕೆಲವರು ಕೃಷ್ಣನನ್ನು ದೇವರೆಂದು ಹೇಳಿದರೆ ಮತ್ತೆ ಕೆಲವರು ಯಾವ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲ. ಈ ವಿಧವಾಗಿ ದೇವರು ಭೂಮಿಮೇಲೆಗೆ ಬಂದುಹೋದ ನಂತರ ಸಾವಿರ ವರ್ಷಗಳಿಗೆ ಸಹ ಅವರ ಜನ್ಮಗಳನ್ನು ಕುರಿತು ಅವಗಾಹನೆ ಮಾಡಿಕೊಳ್ಳಲಾರದೆ ಹೋಗುತ್ತಿದ್ದೇವೆ. ಕೆಲವರು ಸ್ವಲ್ಪ ಜ್ಞಾನವನ್ನು ಹೊಂದಿದ್ದರೂ ಪರವಸ್ತು ಸೂರ್ಯನಾರಾಯಣ ಅಂತಹವರು ಅಲ್ಲಿಗೆ ಸುಮ್ಮನಿರದೆ, ನಮಗೆ ಎಲ್ಲಾ ತಿಳಿದಿದೆಯೆಂದುಕೊಂಡು, ತಾನು ನಂಬಿದವನೇ ದೇವರು ಉಳಿದವರು ಅಲ್ಲವೆಂದು ಒಂದು ಅವತಾರವನ್ನು ಹೊಗಳುತ್ತಾ ಒಂದು ಅವತಾರವನ್ನು ದೂಷಿಸುತ್ತಿದ್ದಾರೆ. ಇದರಿಂದ ಒಂದೇ ದೇವರನ್ನು ಸ್ವಲ್ಪ ಹೊಗಳುತ್ತಾ ಸ್ವಲ್ಪ ದೂಷಿಸಿದಂತಾಗುತ್ತಿದೆ. ದೇವರನ್ನು ದೇವರಲ್ಲ ಎನ್ನುವುದು ಅಜ್ಞಾನವಲ್ಲದೆ ಜ್ಞಾನವಾಗುತ್ತದಾ?

ಶ್ರೀಕೃಷ್ಣನು, ಯೇಸುಪ್ರಭುವೊಂದರ ಆಕಾರಗಳು, ಹೆಸರುಗಳು, ಹುಟ್ಟಿದ ದೇಶಗಳು, ನಡೆದ ಪ್ರವರ್ತನೆಗಳು, ಹಾಕಿಕೊಂಡ ಅಲಂಕಾರಗಳು ಬೇರೆಬೇರೆ ಯಾದರೂ ಇಬ್ಬರು ಹೇಳಿದ ಜ್ಞಾನ ಒಂದೇಯೆಂದು ಒಟ್ಟಾರೆ ಮಾನವರಿಗೆ ತಿಳಿಯದಂತೆ ಹೋಗಿದೆ. ಆದ್ದರಿಂದ ಇಬ್ಬರು ಒಂದೇ ದೇವರೆಂದು ಯಾರೂ

ಒಪ್ಪಿಕೊಳ್ಳಲಾರದೆ ಹೋಗುತ್ತಿದ್ದಾರೆ. ಮನುಷ್ಯರೆಲ್ಲರಿಗೂ ತಿಳಿಯದ ವಿಷಯ ನಿಮ್ಮೊಬ್ಬರಿಗೇ ತಿಳಿದಿದೆಯಾ ಎಂದು ಮಾಯೆ ನಿಮ್ಮಲ್ಲಿ ಅನುಮಾನ ತರಿಸಬಲ್ಲದು. ಅದಕ್ಕೆ ಉತ್ತರವಾಗಿ ನಾನೇನು ಹೇಳುತ್ತಿದ್ದೇನೆಂದರೇ ಬೈಬಲ್‌ನಲ್ಲಿ ಹೇಳಿದಂತೆ **ತಂದೆ ಅಲ್ಲದೆ ಕುಮಾರನನ್ನು ಯಾರು ತಿಳಿಯರು** ಎನ್ನುವ ಸೂತ್ರದ ಪ್ರಕಾರ ದೇವರ ಅವತಾರ ಯಾರಿಗೂ ತಿಳಿಯದೆಂದು ಹೇಳುತ್ತಿದ್ದೇವೆ. ಹಾಗೆಯೇ ಕುಮಾರನು ಅಲ್ಲದೆ, ಕುಮಾರನು ಯಾರಿಗು ಆತನನ್ನು (ದೇವರನ್ನು) ತಿಳಿಯ ಪಡಿಸಲು ಉದ್ದೇಶಿಸುವನೋ ಅಂದರೆ ಭಗವಂತನು ದೇವರನ್ನು ಕುರಿತು ಯಾರಿಗೆ ತಿಳಿಸಬೇಕೆಂದುಕೊಳ್ಳುವನೋ ಅವನು ಹೊರತು ದೇವರನ್ನು ಯಾರೂ ಅರಿಯರು ಎನ್ನುವ ಮಾತಿನ ಪ್ರಕಾರ ದೇವರ ವಿಷಯ ಭಗವಂತನಿಗೆ ತಿಳಿಯುತ್ತದೆ. ಹಾಗೆಯೇ ಭಗವಂತನು ದೇವರನ್ನು ಕುರಿತು ಯಾರಿಗೆ ತಿಳಿಸಿ ಹೇಳುವನೋ ಅವನಿಗು ಕೂಡ ದೇವರನ್ನು ಕುರಿತು ತಿಳಿಯುತ್ತದೆ. ಇದರ ಸಾರಾಂಶ ಚೆನ್ನಾಗಿ ಅರ್ಥವಾಗಬೇಕೆಂದರೆ!

**1) ದೇವರ ಅವತಾರ ಯಾವುದಾಗಿರುವುದು ದೇವರಿಗೇ ತಿಳಿಯುತ್ತದೆ.**

**2) ದೇವರ್‍ಯಾರಾಗಿರುವುದು ದೇವರ ಅವತಾರವಾದ ಭಗವಂತನಿಗೆ ಮತ್ತು ಭಗವಂತನು ಯಾರಿಗೆ ದೇವರನ್ನು ಕುರಿತು ತಿಳಿಸಿದ್ದಾನೋ ಅವನಿಗೆ ತಿಳಿಯುತ್ತದೆಂದಿದ್ದಾನೆ.**

ಇಲ್ಲಿ ಎರಡನೆ ಸೂತ್ರದ ಪ್ರಕಾರ ಭಗವಂತನು ಭಗವದ್ಗೀತೆಯಲ್ಲಿಯೂ ಬೈಬಲ್‌ನಲ್ಲಿಯೂ ನನಗೆ ತಿಳಿಸಿರುವುದರ ಪ್ರಕಾರ ದೇವರ ವಿಷಯ ಕಂಡು ಕೊಂಡಿದ್ದೇನೆಂದು ತಿಳಿಸುತ್ತಿದ್ದೇವೆ. ದೇವರನ್ನು ಕುರಿತು ತಿಳಿದರೇ ದೇವರ ಅವತಾರವನ್ನು ಕುರಿತು ಸುಲಭವಾಗಿ ತಿಳಿಯಬಹುದು. ಆದ್ದರಿಂದ ದೇವರ ಅವತಾರಗಳು ದ್ವಾಪರಯುಗದಲ್ಲಿ ಕೃಷ್ಣನು, ಕಲಿಯುಗದಲ್ಲಿ ಯೇಸುಪ್ರಭುವೆಂದು ಹೇಳುತ್ತಿದ್ದೇವೆ.

ಬೈಬಲ್‌ನಲ್ಲಿಯೂ, ಭಗವದ್ಗೀತೆಯಲ್ಲಿಯೂ ಹೇಳಿರುವುದು ನಿನಗೊಬ್ಬನಿಗೇನಾ ಎಂದು ಕೆಲವರು ಕೇಳಬಹುದು. ಇದಕ್ಕೆ ನಮ್ಮ ಸಮಾಧಾನ ಏನೆಂದರೆ! ಹೇಳಿರುವುದು ಎಷ್ಟು ಮಂದಿಗೆ ಎನ್ನುವುದು ಪ್ರಶ್ನೆಯಲ್ಲ. ಅರ್ಥವಾಗಿರುವುದು ಯಾರಿಗೆ ಎನ್ನುವುದು ಪ್ರಶ್ನೆ. ಬೈಬಲ್ಲಾಗಲಿ, ಭಗವದ್ಗೀತೆಯಾಗಲಿ ಯಾರಿಗೂ ವಾಸ್ತವವಾಗಿ, ನಿಜವಾದ ಅರ್ಥದೊಂದಿಗೆ ಸಂಶಯಗಳು ಇಲ್ಲದಂತೆ ಅರ್ಥವಾಗುತ್ತದೋ ಅವನಿಗೇ ದೇವರ ಕುಮಾರನಾದ ಭಗವಂತನು ದೇವರನ್ನು ಕುರಿತು ತಿಳಿಸಿದಂತೆ ಎಂದು ತಿಳಿದುಕೊಳ್ಳಬೇಕು. ಸಂಸ್ಕೃತ ಪಂಡಿತರಾಗಿ ಸ್ವಾಮಿಗಳಾದಷ್ಟು ಮಾತ್ರಕ್ಕೆ ಭಗವದ್ಗೀತೆ, ಫಾದರ್‌ಗಳು ಪಾಸ್ಟರ್‌ಗಳು ಆದಷ್ಟು ಮಾತ್ರಕ್ಕೆ ಬೈಬಲ್ ಅರ್ಥವಾಗಿದೆಯೆಂದುಕೊಳ್ಳುವುದು ತಪ್ಪು. ನಿಜವಾದ ದೇವರ ಜ್ಞಾನ ಅರ್ಥವಾಗಿದ್ದರೇ ಕೃಷ್ಣನನ್ನು ಕುರಿತು ಕ್ರೈಸ್ತರು ಪ್ರಭುವನ್ನು ಕುರಿತು ಹಿಂದೂಗಳು ವಿರೋಧಿಸುವುದಿಲ್ಲ. ಪರವಸ್ತು ಸೂರ್ಯನಾರಾಯಣರಾವು ಕೃಷ್ಣನನ್ನು ಕುರಿತು ಕಡಿಮೆಯಾಗಿ ಹೇಳಿದ್ದಾನೆಂದರೇ ಆತನಿಗೆ ಪ್ರಭು ಸ್ವತಃವಾಗಿ ಕಾಣಿಸಿ ಮಾತನಾಡಿದ್ದಾನೆನ್ನುವುದು ಪೂರ್ತಿ ಅಸತ್ಯವೆಂದು ತಿಳಿಯುತ್ತಿದೆ. ಇಂದಿಗಾದರೂ ಮಾನವನು ಕಣ್ಣು ತೆರೆದು ಮಾಯೆಯಲ್ಲಿ ಬಿದ್ದು ಹೋಗದೆ ದೇವರನ್ನು ಕುರಿತು ತಿಳಿದುಕೊಳ್ಳಬೇಕೆಂದು, ದೇವರ ಅವತಾರಗಳನ್ನು ಅವಹೇಳನವಾಗಿ ಮಾತನಾಡಬಾರದೆಂದು ತಿಳಿಸುತ್ತಿದ್ದೇವೆ.

ದೇವರ ಬೆಲೆಯನ್ನು ತಗ್ಗಿಸುವ ಯಾವ ಬೋಧನೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲ. ದೇವರು ಯಾವ ಕಾಲದಲ್ಲಿ ಹೇಳಿದರೂ, ಯಾವ ದೇಶದಲ್ಲಿ ಹೇಳಿದರೂ, ಯಾವ ಅವತಾರದಲ್ಲಿ ಹೇಳಿದರೂ ಅದು ಮಾನವನನ್ನು ಉದ್ಧರಿಸುವ ಒಂದೇ ಬೋಧನೆಯಾಗಿರುತ್ತದೆ. ದೇವರು ವಿಶ್ವವೆಲ್ಲದಕ್ಕೂ ಅಧಿಪತಿ, ಆದ್ದರಿಂದ ಆತನ ಬೋಧನೆ ವಿಶ್ವವೆಲ್ಲದಕ್ಕೂ ಒಂದೇ ವಿಧವಾಗಿ ಇರುತ್ತದೆ. ದೇವರ ವಿಧಾನವನ್ನು ಅರ್ಥ ಮಾಡಿಕೊಳ್ಳಲಾರದ ಮನುಷ್ಯರು ದೇವರ ಬೋಧನೆಯನ್ನು ಒಂದೊಂದು ಮತದಲ್ಲಿ ಒಂದೊಂದು ವಿಧವಾಗಿ ಅರ್ಥ ಮಾಡಿಕೊಂಡಿದ್ದಾರೆ. ಉದಾಹರಣೆಗೆ ದೇವರ ಒಂದೇ ವಿಧಾನವನ್ನು ಹಿಂದೂ

ಮತದಲ್ಲಿ ಒಂದು ವಿಧವಾಗಿ, ಕ್ರೈಸ್ತಮತದಲ್ಲಿ ಮತ್ತೊಂದು ವಿಧವಾಗಿ ಅರ್ಥ ಮಾಡಿಕೊಂಡು, ದೇವರ ಬೆಲೆಗೆ ಭಂಗ ಉಂಟಾಗುವಂತೆ ಬೋಧಿಸಿದ ವಿಷಯವನ್ನು ವಿವರಿಸಿಕೊಂಡು ನೋಡೋಣ. ದೇವರ ವಿಧಾನಗಳನ್ನು ಹಿಂದೂಮತದಲ್ಲಿ ಧರ್ಮಗಳೆಂದು, ಕ್ರೈಸ್ತಮತದಲ್ಲಿ ಆಜ್ಞೆಗಳೆಂದು ಹೇಳಿಕೊಳ್ಳುತ್ತಿದ್ದೇವೆ. ದೇವರು ಮನುಷ್ಯರಿಗೆ ಹೇಳಿರುವವೆಲ್ಲಾ ಆತನ ಆಜ್ಞೆಗಳು ಅಥವಾ ಆತನ ಧರ್ಮಗಳೆಂದು ಹೇಳಬಹುದು. ಹಿಂದೂಮತದಲ್ಲಿನ ಭಗವದ್ಗೀತೆಯಲ್ಲಿ ಅತಿ ಮುಖ್ಯವಾದ ದೇವರ ಧರ್ಮವನ್ನು ವಕ್ರೀಕರಿಸಿ ಹಿಂದೂಗಳು ಹೇಳಿಕೊಂಡಾಗ, ಕ್ರೈಸ್ತವಮತದಲ್ಲಿನ ಬೈಬಲ್‌ನಲ್ಲಿರುವ ಅದೇ ಧರ್ಮವನ್ನು ಕ್ರೈಸ್ತರು ವಕ್ರೀಕರಿಸಿ ಹೇಳಿಕೊಳ್ಳುವುದು ನಡೆದಿದೆ. ಎರಡು ಗ್ರಂಥಗಳಲ್ಲಿನ ಒಂದೇ ಧರ್ಮವನ್ನು ಎರಡು ಮತದವರು ಯಾರಷ್ಟಕ್ಕೆ ಅವರು ಸಕ್ರಮವಾಗಿ ಹೇಳಿಕೊಂಡಂತೇ ತಿಳಿಯುತ್ತಿದ್ದರೂ, ಎರಡು ಮತದವರಿಗೂ ಅದು ಒಂದೇ ಧರ್ಮವೆಂದು ಕೂಡ ತಿಳಿದಿಲ್ಲ. ಎರಡು ಮತಗಳಲ್ಲಿಯೂ ಸತ್ಯಕ್ಕೆ ದೂರವಾಗಿ ಹೇಳಿಕೊಂಡ ಆ ಒಂದು ಧರ್ಮ ಯಾವುದೋ ವಿವರಿಸಿಕೊಂಡು ನೋಡೋಣ...

ಉದಾಹರಣೆಗೆ ಒಂದು ಜಗಳ ನಡೆಯುತ್ತಿದೆಯೆಂದುಕೊಳ್ಳೋಣ. ಆ ಜಗಳದಲ್ಲಿ ಇಬ್ಬರು ಒಬ್ಬನ ಮೇಲೆ ದಾಳಿಮಾಡಿ ಹೊಡೆಯುತ್ತಿದ್ದಾರೆ. ಆ ಜಗಳದಲ್ಲಿ ಹೊಡೆಯುವವರು ಇಬ್ಬರು, ಹೊಡೆಸಿಕೊಳ್ಳುವವನು ಒಬ್ಬನು. ಆದ್ದರಿಂದ ಜಗಳದಲ್ಲಿ ಭಾಗವಹಿಸಿದವರು ಒಟ್ಟು ಮೂವರೆಂದು ಯಾರಾದರೂ ಸುಲಭವಾಗಿ ಹೇಳಬಹುದು. ಹಾಗಲ್ಲದೆ ಅದರಲ್ಲಿ ಇರುವುದು ಇಬ್ಬರೇ ಎಂದು ಯಾರಾದರೂ ಹೇಳಿದರೆ ಅದಕ್ಕಿಂತ ಅಸತ್ಯವಾಗಲಿ, ಬುದ್ಧಿ ಇಲ್ಲದ ಮಾತಾಗಲಿ ಇಲ್ಲವೆಂದು ಹೇಳಬಹುದು. ಪ್ರಪಂಚ ವಿಷಯಗಳಲ್ಲಿ ಚಿಕ್ಕ ತಪ್ಪನ್ನು ಕೂಡ ಗುರುತಿಸಿ ಹೇಳುವ ಮನುಷ್ಯರು ದೇವರ ವಿಷಯದಲ್ಲಿ ಮಾತ್ರ ದೊಡ್ಡ ತಪ್ಪನ್ನು ಕೂಡ ಗುರುತಿಸಲಾರದೆ ಹೋಗುತ್ತಿದ್ದಾರೆ. ಪಾವು, ಅರ್ಧಶೇರು, ಶೇರಿಗೆ ವ್ಯತ್ಯಾಸ ಹೇಳುವ ಮನುಷ್ಯ ದೇವರ ಜ್ಞಾನದಲ್ಲಿ ಚಿಕ್ಕ ರವೆ ರೇಣುವಿಗೂ,

ದೊಡ್ಡ ಕಲ್ಲಿಗೂ ವ್ಯತ್ಯಾಸವನ್ನು ಕಂಡುಕೊಳ್ಳಲಾರದೆ ಹೋಗುತ್ತಿದ್ದಾನೆಂದರೆ, ನಿಜವಾಗಿಯೂ ದೇವರ ವಿಷಯದಲ್ಲಿ ಕುರುಡನೆಂದೇ ಹೇಳಬಹುದು. ಪ್ರಪಂಚದಲ್ಲಿ ನಿಶಿತವಾದ ನೋಟ, ನಿಶಿತವಾದ ಬುದ್ಧಿ ಇರುವ ಮನುಷ್ಯ ದೈವಮಾರ್ಗದಲ್ಲಿ ಆ ನೋಟವನ್ನು, ಆ ಬುದ್ಧಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಈ ವಿಧವಾಗಿ ಹೇಳಿದರೇ ಇಲ್ಲಿಯವರೆಗು ಮಾನವನ ಬುದ್ಧಿಗೆ ಅರ್ಥವಾಗದ ಒಂದು ವಿಷಯ ಭಗವದ್ಗೀತೆಯಲ್ಲಿಯೂ, ಬೈಬಲ್‌ನಲ್ಲಿಯೂ ಇದೆಯೆಂದು ಅಲ್ಲಿ ಮಾನವನ ಬುದ್ಧಿ ಯಾವ ಮಾತ್ರ ಕೆಲಸ ಮಾಡಲಿಲ್ಲವೆಂದು ಹೇಳಬಹುದು.

ಅದೇನೆಂದರೆ! ಮೊದಲು ಹಿಂದೂಮತದಲ್ಲಿನ ಭಗವದ್ಗೀತೆಯಲ್ಲಿ ನೋಡಿದಂತಾದರೆ ಪುರುಷೋತ್ತಮ ಪ್ರಾಪ್ತಿಯೋಗವೆನ್ನುವ ಅಧ್ಯಾಯದಲ್ಲಿ 16ನೇ ಶ್ಲೋಕದಲ್ಲಿ **"ದ್ವಾವಿಮೌ ಪುರುಷೌಲೋಕೇ ಕ್ಷರಶ್ಚಾಕ್ಷರ ಏವಚ, ಕ್ಷರ ಸ್ಸರ್ವಾಣಿ ಭೂತಾನಿ ಕೂಟಸ್ಥೋಕ್ಷರ ಉಚ್ಯತೇ"** 17ನೇ ಶ್ಲೋಕದಲ್ಲಿ **"ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇ ತ್ಯುದಾಹೃತಃ, ಯೋ ಲೋಕತ್ರಯ ಮಾವಿಶ್ಯ ಬಿಭರ್ತವ್ಯಯ ಈಶ್ವರಃ"** ಎಂದು ಇದೆ. ಈ ಎರಡು ಶ್ಲೋಕಗಳೊಂದರ ಅರ್ಥದಲ್ಲಿ ದೇವರ ವೊಂದು ಸಿದ್ಧಾಂತಪರವಾದ ಮುಖ್ಯವಾದ ಧರ್ಮಗಳು ಇವೆ. ಮುಖ್ಯವಾದ ಧರ್ಮಗಳಿರುವ ಈ ಶ್ಲೋಕಗಳೊಂದರ ಅರ್ಥಗಳು ಇಲ್ಲಿಯವರೆಗು ಮಾನವನ ಬುರುಡೆಗೆ ತಿಳಿಯಲಿಲ್ಲ. ಬೊಧಕರು, ಸ್ವಾಮೀಜಿಗಳು, ಗುರುಗಳು, ಪೀಠಾಧಿಪತಿಗಳು ಆದವರಿಗೆ ಯಾರಿಗೂ ಈ ವಿಷಯ ಅರ್ಥವಾಗದೆ ಗೀತೆಯಲ್ಲಿನ ಈ ಶ್ಲೋಕಗಳಿಗೆ ಭಾವನೆಗಳನ್ನು ತಪ್ಪಾಗಿ ಬರೆದುಕೊಂಡಿದ್ದಾರೆ. ಮೂವರ ಹೊಡೆದಾಟದಲ್ಲಿ ಇಬ್ಬರೇ ಇದ್ದಾರೆನ್ನುವುದು ಎಷ್ಟು ತಪ್ಪೋ ಅಷ್ಟೇ ತಪ್ಪಾಗಿ ಈ ವಿವರಗಳನ್ನು ಹೇಳಿಕೊಂಡಿದ್ದಾರೆ. ಇಂದಿಗೂ ಭಗವದ್ಗೀತೆಯಲ್ಲಿರುವ ಈ ಶ್ಲೋಕ ವಿವರಗಳನ್ನು ಬರೆದವರು, ಓದಿದವರು ಏನು ತಪ್ಪು ಇದೆಯೆಂದು ಗ್ರಹಿಸಲಾರದೆ ಹೋಗುತ್ತಿದ್ದಾರೆ. ಈ ಶ್ಲೋಕಗಳಲ್ಲಿ ದೇವರ ಮುಖ್ಯವಾದ ಧರ್ಮಗಳು ಇವೆಯೆಂದು ಮನುಷ್ಯ ಗ್ರಹಿಸಲಾರದೆ ಹೋಗುತ್ತಿದ್ದಾನೆ. ಮೇಲಿನ ಎರಡು ಶ್ಲೋಕಗಳಲ್ಲಿ ಇಬ್ಬರು ಹೆಸರಿರುವ ಪುರುಷರನ್ನು, ಒಬ್ಬ ಹೆಸರಿಲ್ಲದ

ಪುರುಷನನ್ನು ಕುರಿತು ಹೇಳಿದ್ದಾರೆ. ಹೆಸರಿರುವವರು ಇಬ್ಬರು, ಹೆಸರಿಲ್ಲದವನು ಒಬ್ಬನೆಂದು ಸುಲಭವಾಗಿ ತಿಳಿಯುತ್ತಿದ್ದರೂ, ಇಲ್ಲಿ ಇರುವುದು ಇಬ್ಬರು ಪುರುಷರೇಯೆಂದು ಹೇಳಿಕೊಳ್ಳುವುದು ವಿಡ್ಡೂರವಲ್ಲವೆ! ಇಲ್ಲಿರುವುದು ಮೂವರು ಅಲ್ಲವೆ ಎಂದು ನಿಲ್ಲಿಸಿ ಕೇಳಿದರೇ ಇಬ್ಬರು ಪುರುಷರು ಒಬ್ಬ ಸ್ತ್ರೀ ಎಂದು ಹೇಳುವುದು ಸಹ ನಡೆದಿದೆ. ಸ್ತ್ರೀ ಎನ್ನುವ ಪದ ಶ್ಲೋಕಗಳಲ್ಲಿ ಇಲ್ಲದಿದ್ದರೂ, ಇಬ್ಬರು ಮತ್ತೊಬ್ಬರೆಂದು ಇದ್ದರೂ, ಮೂವ್ವರು ಯಾರೆನ್ನುವ ವಿವರ ತಿಳಿಯದೆ ಇಬ್ಬರು ಪುರುಷರೊಂದಿಗೆ ಸರಿಮಾಡಿ ಹೇಳಿಕೊಂಡು ದೇವರು ತಿಳಿಸಿದ ಮಾತಿಗೆ ಬೆಲೆ ಇಲ್ಲದಂತೆ ಮಾಡಿದ್ದಾರೆ.

ಹಾಗೆಯೇ ಕ್ರೈಸ್ತಮತದಲ್ಲಿ ಬೈಬಲ್ ಹೊಸ ನಿಬಂಧನೆಯಲ್ಲಿ ಮತ್ತಾಯ ಸುವಾರ್ತೆ 22ನೇ ಅಧ್ಯಾಯದಲ್ಲಿ 36,37,38,39,40 ವಾಕ್ಯಗಳಲ್ಲಿ ಪರಿಶಯ್ಯನು ಯೇಸುಪ್ರಭುವನ್ನು ಶೋಧಿಸುತ್ತಾ ಕೇಳಿರುವುದು ಈ ವಿಧವಾಗಿ ಇದೆ. "ಬೋಧಕನೇ! ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಆಜ್ಞೆ ಯಾವುದೆಂದು ಕೇಳಿದನು. ಅದಕ್ಕೆ **ಆತನು – ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣಾತ್ಮದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ದೇವರಾದ ಪ್ರಭುವನ್ನು ಪ್ರೀತಿಸಬೇಕೆನ್ನುವುದೇ, ಇದು ಮುಖ್ಯವಾದುದು, ಮೊದಲನೆಯದಾದ ಆಜ್ಞೆ. ನಿನ್ನ ಹಾಗೆ ನಿನ್ನ ಪಕ್ಕದಲ್ಲಿ ಇರುವವನನ್ನು ಪ್ರೀತಿಸಬೇಕೆನ್ನುವ ಎರಡನೆ ಆಜ್ಞೆಯು ಅದರಂತಹದ್ದೇ. ಈ ಎರಡು ಆಜ್ಞೆಗಳು ಧರ್ಮಶಾಸ್ತ್ರವೆಲ್ಲದಕ್ಕೂ ಪ್ರವಕ್ತರಿಗೂ ಆಧಾರವಾಗಿವೆಯೆಂದು ಆತನೊಂದಿಗೆ ಹೇಳಿದನು."** ಯಾವ ವಿಧವಾಗಿ ಗೀತೆಯಲ್ಲಿ ಎರಡು ಶ್ಲೋಕಗಳಿಗು ಹಿಂದೂಗಳ ಹತ್ತಿರ ಸರಿಯಾದ ಅರ್ಥ ಇಲ್ಲಿಯವರೆಗು ಇಲ್ಲವೋ, ಅದೇ ವಿಧವಾಗಿ ಬೈಬಲ್‌ನಲ್ಲಿನ ಈ ವಾಕ್ಯಗಳಿಗೆ ಕೂಡ ಇಲ್ಲಿಯವರೆಗು ಕ್ರೈಸ್ತರ ಹತ್ತಿರ ಸರಿಯಾದ ಅರ್ಥ ಇಲ್ಲವೆಂದೇ ಹೇಳಬಹುದು. ದೇವರ ಆಜ್ಞೆಗಳಲ್ಲಿ ಮುಖ್ಯವಾದವು ಈ ಎರಡೆಂದು ಸ್ವತಃವಾಗಿ ಯೇಸು ಪ್ರಭು ಹೇಳಿದ್ದಾನೆ. ಪ್ರಭುವೇ ಮುಖ್ಯವೆಂದು, ಮೊದಲ ಆಜ್ಞೆಗಳೆಂದು ಹೇಳಿದಾಗ ಅವುಗಳನ್ನು ದೊಡ್ಡದಾಗಿ ಆಲೋಚಿಸಿ ನೋಡದೆ ಸುಲಭವಾಗಿ ಅರ್ಥ

ಮಾಡಿಕೊಳ್ಳುವುದು ತಪ್ಪು. ಪ್ರಭು ಹೇಳಿದ ಮಾತುಗಳನ್ನು ಆಳವಾಗಿ ಯೋಚಿಸಿ ನೋಡಿದರೆ ಒಂದು ದೇವರಾದ ಪ್ರಭುವನ್ನು ಪ್ರೀತಿಸಬೇಕೆಂದು ಹೇಳುವುದು, ಎರಡು ನಿನ್ನ ಹಾಗೆ ನಿನ್ನ ಪಕ್ಕದವನನ್ನು ಪ್ರೀತಿಸೆಂದು ಹೇಳುವುದು ನಡೆದಿದೆ. ಈ ಎರಡು ಮಾತುಗಳಲ್ಲಿ ಒಂದು ದೇವರೆಂದು ಅರ್ಥವಾಗಿದೆ, ಎರಡನೆಯದು ಪಕ್ಕದವನೆಂದು ಅರ್ಥವಾಗಿದೆ, ಮೂರನೆಯವನು ಮನುಷ್ಯನಾಗಿ ಇರುವವನು. ಇದರಲ್ಲಿ ಮೂರು ಪಾತ್ರಗಳು ಇವೆ. ಒಬ್ಬನು ಪ್ರೀತಿಸುವವನು, ಇಬ್ಬರು ಪ್ರೀತಿಸಲ್ಪಡುವವರು. ಪ್ರೀತಿಸಬೇಕಾಗಿರುವವನು ಸಜೀವವಾದ ಮನುಷ್ಯನಾದಾಗ, ಪ್ರೀತಿಸಲ್ಪಡುವವರು ಇಬ್ಬರು, ಅದರಲ್ಲಿ ಒಬ್ಬರು ದೇವರು ಎಂದುಕೊಳ್ಳೋಣ. ಇಲ್ಲಿಯವರೆಗು ಸವ್ಯವಾಗಿಯೇ ಇದೆ. ಪ್ರೀತಿಸಬೇಕಾಗಿರುವ ಮತ್ತೊಬ್ಬನು ನಿನ್ನ ಪಕ್ಕದವನು. ಈ ಪಕ್ಕದವನ್ಯಾರೆನ್ನುವುದು ಇಲ್ಲಿ ದೊಡ್ಡ ಪ್ರಶ್ನೆ. ನಮ್ಮ ಲೆಕ್ಕದಲ್ಲಿ ದೊಡ್ಡ ಪ್ರಶ್ನೆಯಾಗಿ ಇದ್ದರೂ ಎಲ್ಲರ ಲೆಕ್ಕದಲ್ಲಿ ಇದು ಪ್ರಶ್ನೆಯೇ ಅಲ್ಲ. ಪಕ್ಕದವನೆಂದರೇ ಎಲ್ಲರ ಉತ್ತರ ಪಕ್ಕದಲ್ಲಿ ಸಂಸಾರ ಮಾಡುವವನೆಂದು ಅಥವಾ ತನ್ನ ಪಕ್ಕದಲ್ಲಿ ನಿವಾಸ ಮಾಡುವ ಕಣ್ಣಿಗೆ ಕಾಣಿಸುವ ಮನುಷ್ಯನೆಂದು ಅರ್ಥ. ಈ ಅರ್ಥದಿಂದ ಆ ದಿನ ಪ್ರಭು ಹೇಳಿದ್ದರೇ ಅಸಲು ಸಮಸ್ಯೆಯೇ ಇರುವುದಿಲ್ಲ. ಆದರೆ ಆ ದಿನ ಪ್ರಭು ಅಷ್ಟು ಸುಲಭವಾಗಿ ಹೇಳಲಿಲ್ಲ.

ಮೊದಲ ಆಜ್ಞೆಯಲ್ಲಿ ದೇವರಾದ ಪ್ರಭುವನ್ನು ಪ್ರೀತಿಸು ಎಂದಿದ್ದಾನೆ. ನಾನು ದೇವರಾದ ಪ್ರಭುವು, ನನ್ನನ್ನು ಪ್ರೀತಿಸೆಂದು ಆ ದಿನ ಹೇಳಲಿಲ್ಲ. ದೇವರ ಮುಖ್ಯವಾದ ಆಜ್ಞೆಗಳೇನು ಎಂದು ಕೇಳಿರುವುದು ಆದಿನದ ಅಜ್ಞಾನಿಗಳಾದ ಪರಿಶಯ್ಯರು. ಆದಿನ ಅವರು ಯೇಸು ದೊಡ್ಡವನೆಂದು ವಿಶ್ವಾಸಿಸಿ ಆತನನ್ನು ಕೇಳಲಿಲ್ಲ. ಆತನನ್ನು ಶೋಧಿಸುವುದಕ್ಕೆ ಕೇಳಿದ ಮಾತುಗಳೇ ಹೊರತು ಆತನ ಮೇಲೆ ಗೌರವದಿಂದ ಕೇಳಲಿಲ್ಲ. ಅಂತಹವರಿಗೆ ನಾನು ದೇವರೆಂದು ಪ್ರಭು ಹೇಳುವುದಿಲ್ಲ, ಹೇಳಿದರೂ ಅವರು ಕೇಳುವುದಿಲ್ಲ. ಆ ದಿನ ಪರಿಶಯ್ಯರು ಕೇಳಿರುವುದು, ಪ್ರಭು ಹೇಳಿರುವುದು ದೇವರ ಆಜ್ಞೆಗಳು. ಅದರಲ್ಲಿ ಮೊದಲ ವಾಕ್ಯ ನಿನ್ನ **ಪೂರ್ಣ ಹೃದಯದಿಂದ, ನಿನ್ನ ಪೂರ್ಣ ಮನಸ್ಸಿನಿಂದ ದೇವರಾದ**

**ಪ್ರಭುವನ್ನು ಪ್ರೀತಿಸು ಎಂದಿದ್ದಾನೆ.** ಆದರೆ ಎದುರುಗಡೆ ಇರುವ ನನ್ನನ್ನು ಪ್ರೀತಿಸು ಎನ್ನಲಿಲ್ಲ. ದೇವರು ಎಲ್ಲರಿಗೂ ಪ್ರಭುವೇ ಆದ್ದರಿಂದ ಕಾಣಿಸದ ದೇವರನ್ನು ಪ್ರೀತಿಸುವುದು ದೇವರ ಮೊದಲ ಆಜ್ಞೆ, ಇಲ್ಲಿ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾದ ಅವಶ್ಯವಿದೆ. ಪ್ರೀತಿಸಬೇಕಾದವನು ಜೀವಿಯು, ಪ್ರೀತಿಸಲ್ಪಡುವವನು ದೇವರು ಮೊದಲು ತನ್ನನ್ನು ಕುರಿತು ತಾನು ತಿಳಿದುಕೊಂಡರೇ ನಂತರ ದೇವರನ್ನು ಕುರಿತು, ತನ್ನ ಪಕ್ಕದವನನ್ನು ಕುರಿತು ತಿಳಿಯುತ್ತದೆ.

ಪ್ರತಿ ಮನುಷ್ಯನಿಗು ಪ್ರಪಂಚದಲ್ಲಿ ಉತ್ತರ ಹುಡುಕಬೇಕಾದ ಪ್ರಶ್ನೆಗಳು ಮೂರು ಇವೆ. ಒಂದು ನಾನ್ಯಾರು? ಎರಡು ನನ್ನ ಪಕ್ಕದವನ್ಯಾರು? ಮೂರು ದೇವರು ಯಾರು? ಮೊದಲ ಪ್ರಶ್ನೆಗೆ ಉತ್ತರ ಸಿಕ್ಕರೆ ಉಳಿದ ಎರಡು ಪ್ರಶ್ನೆಗಳಿಗು ಉತ್ತರ ಸ್ವಲ್ಪ ಆಲಸ್ಯವಾಗಿಯಾದರೂ ಸಿಗಬಲ್ಲದು. ಈ ಮೂರು ಪ್ರಶ್ನೆಗಳನ್ನು ಮಿಳಿತ ಮಾಡಿ ಪ್ರಭು ಬೈಬಲ್‌ನಲ್ಲಿ ತನ್ನ ಆಜ್ಞೆಗಳಲ್ಲಿ ನೀನು, ನಿನ್ನ ಪಕ್ಕದವನು, ದೇವರು ಎನ್ನುವ ಮೂವರನ್ನು ಪ್ರಸ್ತಾಪಿಸಿದ್ದಾನೆ. ಇದೇ ವಿಷಯವನ್ನೇ ಭಗವದ್ಗೀತೆಯಲ್ಲಿ ಒಬ್ಬನು ಕ್ಷರನು, ಎರಡನೆಯವನು ಅಕ್ಷರನು, ಮೂರನೆಯವನು ಇಬ್ಬರಿಗಿಂತ ಉತ್ತಮವಾದ ದೇವರು ಎಂದಿದ್ದಾನೆ. ದೇವರನ್ನು ಪಕ್ಕಕ್ಕಿಟ್ಟು ನೋಡಿದರೇ ಕ್ಷರನ್ಯಾರೋ, ಅಕ್ಷರನ್ಯಾರೋ ಐದುಸಾವಿರ ವರ್ಷಗಳಿಂದ ಹಿಂದೂಗಳಿಗೆ ಅರ್ಥವಾಗಲಿಲ್ಲ. ಹಾಗೆಯೇ ನೀನು, ನಿನ್ನ ಪಕ್ಕದವನು ಎನ್ನುವುದರಲ್ಲಿ ನಾನ್ಯಾರು? ನನ್ನ ಪಕ್ಕದವನ್ಯಾರು? ಎನ್ನುವುದು ಎರಡು ಸಾವಿರ ವರ್ಷಗಳಿಂದ ಕ್ರೈಸ್ತರಿಗೆ ಅರ್ಥವಾಗಲಿಲ್ಲ. ಕ್ಷರನ್ಯಾರೋ, ಅಕ್ಷರನ್ಯಾರೋ ನಮಗೆ ತಿಳಿದಿದೆಯೆಂದು ಇಲ್ಲಿಯವರೆಗು ಹಿಂದೂಗಳು ಅಂದುಕೊಳ್ಳುತ್ತಿದ್ದಂತೆ, ಕ್ರೈಸ್ತರು ಸಹ ನಾನು ತಿಳಿದಿದೆ, ನನ್ನ ಪಕ್ಕದವನು ತಿಳಿದಿದೆ ಎಂದುಕೊಳ್ಳುತ್ತಿದ್ದಾರೆ. ನಮಗೆ ತಿಳಿದಿದೆಯೆಂದುಕೊಳ್ಳುವವರಿಗೆ ತಿಳಿದುಕೊಳ್ಳಬೇಕಾದ ಅವಶ್ಯ ಇರುವುದಿಲ್ಲ. ತಿಳಿದಿಲ್ಲವೆಂದುಕೊಳ್ಳುವವರಿಗೆ ತಪ್ಪದೆ ತಿಳಿದುಕೊಳ್ಳಬೇಕಾದ ಅವಶ್ಯವಿದೆ. ಆದ್ದರಿಂದ ಗೀತೆಯಲ್ಲಿ ಹೇಳಿದ ಆ ಮೂವರು ಯಾರೋ, ಹಾಗೆಯೇ ಬೈಬಲ್‌ನಲ್ಲಿ ಹೇಳಿದ ಆ ಮೂವರು ಯಾರೋ, ದೇವರ ಜ್ಞಾನದಿಂದಲೇ ವಿವರಿಸಿಕೊಂಡು ಸರಿಯಾದ ಸಮಾಧಾನ ತಿಳಿದುಕೊಳ್ಳೋಣ.

ನಮ್ಮ ಶರೀರದಲ್ಲಿ ಶರೀರದಿಂದ ನಿತ್ಯವು ಕೆಲಸಗಳು ನಡೆಯುತ್ತಿದೆ. ಆ ಕೆಲಸಗಳಲ್ಲಿ ನಮಗೆ ತಿಳಿದು ಕೆಲವು ತಿಳಿಯದೆ ಕೆಲವು ನಡೆಯುತ್ತಿವೆ. ನಡೆಯುವುದು, ಮಾತನಾಡುವುದು, ತಿನ್ನುವುದು, ಕೆಲಸಮಾಡುವುದು ಪ್ರತಿ ಮನುಷ್ಯನಿಗು ತಿಳಿದು ನಡೆಯುತ್ತಿವೆ. ತಿಂದಿದ್ದು ಜೀರ್ಣವಾಗುವುದು, ಶ್ವಾಸ ಆಡುವುದು, ಗುಂಡಿಗೆ ಬಡೆದುಕೊಳ್ಳುವುದು, ಮೂತ್ರ ಪಿಂಡಗಳ ಕೆಲಸ ನಮಗೆ ತಿಳಿಯದೆ ನಡೆಯುತ್ತಿವೆ. ನೀನು ಮಾಡದಿದ್ದರೂ ನಿನ್ನ ಶರೀರದಲ್ಲಿ ನಡೆಯುವ ಕೆಲಸಗಳು ಬಹಳ ಇವೆ. ನಿನಗೆ ತಿಳಿಯದಂತೆ, ನೀನು ಮಾಡದಂತೆ ಆ ಸ್ವಲ್ಪ ಕೆಲಸಗಳು ಯಾರು ಮಾಡುತ್ತಿದ್ದಾರೆಂದು ಪ್ರಶ್ನಿಸಿಕೊಂಡರೆ, ನಿನ್ನ ಶರೀರದಲ್ಲಿ ನೀನಲ್ಲದೆ ನಿನ್ನೊಂದಿಗೆ ಇನ್ನೊಬ್ಬರಿದ್ದಾರೆಂದು ತಪ್ಪದೆ ತಿಳಿಯುತ್ತದೆ. ಇದು ಸ್ವಲ್ಪ ವಿಚಿತ್ರವಾಗಿ ತೋಚಿದರೂ ನೀನಲ್ಲದೆ ನಿನ್ನ ಶರೀರದಲ್ಲಿ ನಿನ್ನ ಮನಸ್ಸೊಂದು ಇದೆ. ಮನಸ್ಸು ಎಲ್ಲರಿಗೂ ಇರುತ್ತದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ಕೊಳ್ಳುತ್ತೇನೆ. ಏಕೆಂದರೆ ಪ್ರತಿಯೊಬ್ಬರು ನನಗೆ ಮನಸ್ಸು ಇದೆ ಎನ್ನುತ್ತಿರುತ್ತಾರೆ. ಶರೀರದಲ್ಲಿ ನೀನು ಬೇರೆ, ನಿನ್ನ ಮನಸ್ಸು ಬೇರೆ, ಆದ್ದರಿಂದ ಮನಸ್ಸನ್ನು ನನ್ನ ಮನಸ್ಸು ಎನ್ನುತ್ತಿದ್ದೇವೆ. ಹಾಗೆಯೇ ನೀನು ಬೇರೆ ನಿನ್ನ ಆತ್ಮ ಬೇರೆಯಾಗಿ ಇದೆ. ಆದ್ದರಿಂದ ನನ್ನ ಆತ್ಮ ಎಂದು, ನನ್ನ ಆತ್ಮಸಾಕ್ಷಿಯಾಗಿ ಎಂದು ಸಹ ಅನ್ನುತ್ತಿರುತ್ತೇವೆ. ಶರೀರದಲ್ಲಿ ಎಲ್ಲ ಕೆಲಸಗಳು ಮಾಡುವುದು ಆತ್ಮ. ನೀನು ಎನ್ನುವವನು ಒಬ್ಬನಿದ್ದರೇ, ನಿನ್ನ ಆತ್ಮ ಎನ್ನುವುದು ಮತ್ತೊಂದು ಇರುತ್ತದೆ. ನಿನ್ನನ್ನು ಜೀವಾತ್ಮ ಎನ್ನುತ್ತಾರೆ, ನಿನ್ನ ಹಿಂದೆ ತಿಳಿಯದಂತೆ ಇರುವುದನ್ನು ಆತ್ಮ ಎನ್ನುತ್ತಾರೆ. ನೀನು ಎಲ್ಲಿದ್ದರೇ ನಿನ್ನೊಂದಿಗೆ ನಿನ್ನ ಆತ್ಮ ಅಲ್ಲೇ ಇರುತ್ತದೆ. ನೀನಲ್ಲದೆ, ನಿನ್ನ ಆತ್ಮ ಅಲ್ಲದೆ, ಮತ್ತೊಂದು ಇದೆ ಅದೇ ಪರಿಶುದ್ಧಾತ್ಮ, ಅದನ್ನೇ ದೇವರು ಎನ್ನುತ್ತಿದ್ದೇವೆ. ಮತ್ತಾಯ ಸುವಾರ್ತೆಯಲ್ಲಿ ಹೇಳಿದ ದೇವರ ಮೊದಲ ಆಜ್ಞೆಯಲ್ಲಿ ನಿನ್ನ ಪೂರ್ಣಾತ್ಮದಿಂದ, ನಿನ್ನ ಪೂರ್ಣ ಮನಸ್ಸಿನಿಂದ ಎಂದು ಇದೆ ಅಲ್ಲವೆ! ಇಲ್ಲಿ ಚೆನ್ನಾಗಿ ಯೋಚಿಸಿದರೆ ನೀನು, ನಿನ್ನ ಆತ್ಮನೊಂದಿಗೆ ಬೆರೆತು ದೇವರನ್ನು ಪ್ರೀತಿಸಬೇಕೆಂದು ಅರ್ಥವಾಗಬಲ್ಲದು. ನೀನು ನಿನ್ನ ಆತ್ಮದೊಂದಿಗೆ ಬೆರೆತು ಎಂದಾಗ ಇಬ್ಬರೂ ಬೆರೆತು ಮೂರನೆಯವನಾದ

ದೇವರನ್ನು ಪ್ರೀತಿಸಬೇಕೆಂದು ಅರ್ಥ. ಮೂರನೆಯವನಾದ ದೇವರು ವಿಶ್ವವೆಲ್ಲಾ ವ್ಯಾಪಿಸಿ ಅಣುವಣುವಿನಲ್ಲೂ ತುಂಬಿದ್ದಾನೆ. ಪ್ರೀತಿಸುವವನಾದ ನೀನು, ನಿನ್ನ ಆತ್ಮ ಒಂದು ಶರೀರದಲ್ಲಿ ಮಾತ್ರ ಇದ್ದೀರ. ನೀನು ಶರೀರದಲ್ಲಿ ಸ್ವಲ್ಪ ಕಾಲವಿದ್ದು ಶರೀರವನ್ನು ಬಿಟ್ಟು ಹೋಗುತ್ತಿದ್ದೀಯ. ನಿನ್ನೊಂದಿಗೆ ನಿನ್ನ ಆತ್ಮವೂ ಸಹ ನಿನ್ನ ಹಿಂದೆಯೇ ಇದ್ದು, ನಿನ್ನ ಹಿಂದೆಯೇ ಬರುತ್ತಿದೆ. ನಿನ್ನ ಶರೀರದಲ್ಲಿ ನಿನ್ನೊಂದಿಗೆ ಇರುತ್ತಾ, ನಿನ್ನೊಂದಿಗೆ ಎಷ್ಟೋ ಕೆಲಸಗಳು ಮಾಡಿಡುತ್ತಿರುವ ನಿನ್ನ ಆತ್ಮವೇ ಯಾವಾಗಲೂ ನಿನ್ನ ಪಕ್ಕದಲ್ಲಿರುವವನು. ಆದ್ದರಿಂದ ನಿನ್ನ ಹಾಗೆ ನಿನ್ನ ಪಕ್ಕದವನನ್ನು ಪ್ರೀತಿಸೆಂದು ಎರಡನೆ ಆಜ್ಞೆಯಲ್ಲಿ ಇದೆ. ಆಗ ಆ ಮಾತಿನ ಪ್ರಕಾರ ನೀನು ಬೇರೆ, ನಿನ್ನ ಆತ್ಮ ಬೇರೆಯೆಂದು ತಿಳಿಯುತ್ತಿದೆಯಲ್ಲವೆ. ನೀನು ಜೀವಾತ್ಮ, ನಿನ್ನ ಪಕ್ಕದವನು ಆತ್ಮ. ನೀನು ನಿನ್ನ ಆತ್ಮದೊಂದಿಗೆ ಸಹ ದೇವರನ್ನು ಪ್ರೀತಿಸಿದಂತೆ, ನಿನ್ನಲ್ಲಿನ ಆತ್ಮವನ್ನು ಸಹ ಪ್ರೀತಿಸೆಂದು ಪ್ರಭು ವಾಕ್ಯದಲ್ಲಿ ಅರ್ಥವಿದೆ. ಈ ದಿನ ಮಾನವನು ಮೇಲ್ನೋಟವನ್ನೇ ನೋಡಿ, ಮೇಲಿನ ಅರ್ಥವನ್ನೇ ತಿಳಿಯುವು ದರಿಂದ ತಾನ್ಯಾರೋ ತನಗೇ ತಿಳಿದಿಲ್ಲ. ಹಾಗೆಯೇ ತನ್ನ ಆತ್ಮ ಯಾರೋ ಸಹ ತಿಳಿದಿಲ್ಲ. ಕೊನೆಗೆ ದೇವರು ಯಾರೋ ಆತನ ವಿಸ್ತೀರ್ಣವೇನೋ ಸಹ ತಿಳಿದಿಲ್ಲ. ತಾನು ಇಂತಹ ಹೆಸರಿರುವ ಮನುಷ್ಯನೆಂದು ಭೌತಿಕವಾಗಿ ಅರ್ಥಮಾಡಿಕೊಂಡು, ಭೌತಿಕವಾಗಿ ಹೊರಗಿರುವ ಮನುಷ್ಯರನ್ನು ತನ್ನ ಪಕ್ಕದವನಾಗಿ ಗುರುತಿಸುತ್ತಿದ್ದೇವೆ. ಆತ್ಮ ಪರವಾಗಿ ಅಲ್ಲದೆ ಭೌತಿಕವಾಗಿ ಅರ್ಥ ಮಾಡಿಕೊಳ್ಳುವುದರಿಂದ ಪ್ರಭು ಹೇಳಿದ ಜ್ಞಾನ ನಮಗೆ ಪೂರ್ತಿಯಾಗಿ ಅರ್ಥವಾಗದಂತೆ ಹೋಗಿದೆ. ಇದೇ ರೀತಿಯಾಗಿ ಗೀತೆಯಲ್ಲಿ ಹೇಳಿದ ಕ್ಷರ ಅಕ್ಷರ ಪುರುಷೋತ್ತಮರು ಹಿಂದೂಗಳಿಗೆ ಅರ್ಥವಾಗಲಿಲ್ಲ. ಅಲ್ಲಿಯೂ ಸಹ ಆತ್ಮ ಪರವಾಗಿ ಅರ್ಥಮಾಡಿಕೊಂಡರೆ ಕ್ಷರನು ಎಂದರೆ ಜೀವಾತ್ಮ ಎಂದು, ಅಕ್ಷರನು ಎಂದರೆ ಆತ್ಮಯೆಂದು, ಪುರುಷೋತ್ತಮನೆಂದರೆ ಪರಮಾತ್ಮ ಎಂದು ತಿಳಿಯಬಲ್ಲದು. ಹಿಂದೂಗಳು ಕ್ಷರನೆಂದರೆ ಶರೀರವೆಂದು, ಅಕ್ಷರನೆಂದರೆ ಜೀವಿ ಎಂದು, ಪುರುಷೋತ್ತಮನೆಂದರೆ ದೇವರೆಂದು ಬರೆದುಕೊಂಡಿದ್ದಾರೆ.. ಹಾಗೆ ಬರೆದುಕೊಳ್ಳುವುದು, ಹೇಳಿಕೊಳ್ಳುವುದರಿಂದ,

ಮೂರು ಆತ್ಮಗಳಲ್ಲಿ ಮೊದಲನೆಯದಾದ ಜೀವಾತ್ಮ ಸ್ಥಾನದಲ್ಲಿ ಪ್ರಕೃತಿಯೊಂದಿಗೆ ಕೂಡಿಕೊಂಡ ಶರೀರವನ್ನು ಸೇರಿಸಿಕೊಳ್ಳುವುದರಿಂದ, ಅಕ್ಷರನಾಗಿ ಜೀವಾತ್ಮವನ್ನು ಹೇಳಿಕೊಳ್ಳುವು ದರಿಂದ, ಮಧ್ಯದಲ್ಲಿನ ಆತ್ಮ ತಿಳಿಯದಂತೆ ಹೋಗಿದೆ. ಹಿಂದೂ ಮತದಲ್ಲಿ ದೇವರು ತನ್ನ ಗೀತೆಯಲ್ಲಿ ಮೂವರು ಪುರುಷರನ್ನು (ಆತ್ಮಗಳನ್ನು) ಹೇಳಿದರೆ ಮನುಷ್ಯರು ಇಬ್ಬರು ಪುರುಷರನ್ನು ಮಾತ್ರ ಹೇಳಿಕೊಂಡಿದ್ದಾರೆ. ಒಬ್ಬ ಪುರುಷನನ್ನು ಇಲ್ಲದಂತೆ ಮಾಡಿದ್ದಾರೆ. ದೈವ ಜ್ಞಾನದಲ್ಲಿ ಮೊದಲ ಸೂತ್ರವಾದ ಮೂರು ಆತ್ಮಗಳ ವಿಷಯ ತಿಳಿಯದಿರುವುದರಿಂದ ಗೀತೆ ಮೊದಲಿಗೇ ಅರ್ಥವಾಗದೇ ಹೋಗಿದೆ. ಇಂದಿಗೂ ಹಿಂದೂಗಳಿಗೆ ಜೀವಾತ್ಮ ಪರಮಾತ್ಮ ಹೊರತು ಆತ್ಮ ವಿವರ ನಾಮಮಾತ್ರವಾಗಿ ಕೂಡ ಇಲ್ಲ.

ದೇವರು ಗೀತೆಯಲ್ಲಿ ತಿಳಿಸಿದ ಧರ್ಮಗಳಲ್ಲಿ ಬಹಳ ಮುಖ್ಯವಾದ ಧರ್ಮ ಆತ್ಮಗಳ ವಿವರ. ಪೂರ್ತಿಯಾಗಿ ಮಗ್ಗಿ (ಸಂಖ್ಯೆಗಳು) ಬಾರದೆ ಲೆಕ್ಕ ಹೇಗೆ ಮಾಡಲಾರೆವೋ ಹಾಗೆಯೇ ಮೂರು ಆತ್ಮಗಳ ವಿವರ ತಿಳಿಯದೇ ದೈವಜ್ಞಾನ ತಿಳಿಯುವುದಿಲ್ಲ. ಆದ್ದರಿಂದ ಇಂದಿಗೂ ಗೀತೆ ಬಹಳ ಜನರಿಗೆ ತಿಳಿದಿಲ್ಲ. ತ್ರೈತಸಿದ್ಧಾಂತ ಭಗವದ್ಗೀತೆಯಲ್ಲಿ ನಾವು ಹೊರತು ಮೂರು ಆತ್ಮಗಳ ವಿವರ ಯಾರೂ ಇಲ್ಲಿಯವರೆಗು ಬರೆದಿಲ್ಲ. ಹಿಂದೂಗಳು ಮೂರು ಆತ್ಮಗಳಲ್ಲಿ ಒಂದು ಆತ್ಮವನ್ನು ಬಿಟ್ಟು ಹಾಕಿದಂತೆ ಕ್ರೈಸ್ತರು ಜೀವಾತ್ಮವನ್ನು, ಆತ್ಮವನ್ನು ಎರಡನ್ನೂ ಬಿಟ್ಟು ಒಂದು ಪರಮಾತ್ಮನನ್ನು ಮಾತ್ರ ಹೇಳಿಕೊಳ್ಳುತ್ತಿದ್ದಾರೆ. ಜೀವಾತ್ಮವನ್ನು ಒಬ್ಬ ಮನುಷ್ಯನಾಗಿ, ಆತ್ಮವನ್ನು ಪಕ್ಕದ ಮನುಷ್ಯನಾಗಿ ಭೌತಿಕವಾಗಿ ಲೆಕ್ಕಿಸುತ್ತಿದ್ದಾರೆ. ಆದ್ದರಿಂದ ಬೈಬಲ್‌ನಲ್ಲಿರುವ ಪ್ರಭು ವಾಕ್ಯಗಳಲ್ಲಿನ ಸಾರಾಂಶ ಕ್ರೈಸ್ತರಿಗೂ ಸಹ ಅರ್ಥವಾಗಲಿಲ್ಲವೆಂದೇ ಹೇಳಬಹುದು. ದೇವರು ಗೀತೆಯಲ್ಲಿಯೂ, ಬೈಬಲ್‌ನಲ್ಲಿಯೂ ಸಂದರ್ಭಾನುಸಾರ ಮೂರು ಆತ್ಮಗಳನ್ನು ಕುರಿತು ಹೇಳಿದರೆ, ಎರಡರಲ್ಲಿಯೂ ಒಂದೇ ವಿಧಾನವಿದೆಯೆಂದು ತಿಳಿಯದೆ ಹೋಗುವುದರಿಂದ, ಆತ್ಮಗಳ ವಿವರಗಳು ಸ್ವಲ್ಪವೂ ತಿಳಿಯದಂತೆ ಹೋಗಿವೆ. ದೇವರ ಜ್ಞಾನವಾದ ಗೀತೆ ಹಿಂದೂಗಳಿಗೆ, ಬೈಬಲ್ ಕ್ರೈಸ್ತರಿಗೂ ಅರ್ಥವಾಗದೆ,

ಹೇಳಿದ ವಾಕ್ಯಗಳಲ್ಲಿನ ಸಾರಾಂಶವನ್ನು ಅರ್ಥಮಾಡಿಕೊಳ್ಳಲಾರದೆ, ನಮ್ಮ ದೇವರು ಬೇರೆ, ನಿಮ್ಮ ದೇವರು ಬೇರೆ ಎಂದುಕೊಳ್ಳುವುದು ತಪ್ಪಲ್ಲವೆ! ಇಂದಿಗಾದರೂ ಮತಾತೀತ ದೇವರ ಜ್ಞಾನವನ್ನು ಅರ್ಥಮಾಡಿಕೊಂಡರೆ ದೇವರು ಎಲ್ಲರಿಗೂ ಒಂದೇಯೆಂದು, ಎಲ್ಲರಿಗು ಅಧಿಪತಿ ದೇವರೊಬ್ಬನೇ ಎಂದು ತಿಳಿಯಬಲ್ಲದು. ಅಸಲಾದ ದೇವರ ಜ್ಞಾನ ಅರ್ಥವಾದರೇ ಮತದ್ವೇಷಗಳು ಬರುವುದಿಲ್ಲ.

ಭೌತಿಕ ಶರೀರ ಆಧ್ಯಾತ್ಮಿಕ ವಿದ್ಯೆಯಲ್ಲಿ ಒಂದು ಪರಿಕರವಂತಾದ್ದು. ಶರೀರದಲ್ಲಿ ನಿವಾಸಿಸುವ ಆತ್ಮಗಳನ್ನು ಅಧ್ಯಯನ ಮಾಡುವುದನ್ನು ಆಧ್ಯಾತ್ಮಿಕ ಎನ್ನುತ್ತಿದ್ದೇವೆ. ಶರೀರದಲ್ಲಿ ನಿವಾಸಿಸುವ ಜೀವಾತ್ಮ ವಿಶ್ವವೆಲ್ಲ ನಿವಾಸಿಸುವ ದೇವರನ್ನು ತಿಳಿದುಕೊಳ್ಳುವ ವಿದ್ಯೆಯನ್ನು ಆಧ್ಯಾತ್ಮಿಕ ವಿದ್ಯೆ ಅಥವಾ ಬ್ರಹ್ಮವಿದ್ಯೆ ಎನ್ನುತ್ತಿದ್ದೇವೆ. ದೇವರನ್ನು ತಿಳಿದುಕೊಳ್ಳುವುದಕ್ಕೆ ಬ್ರಹ್ಮವಿದ್ಯೆ ಇರುವಂತೆ, ಪ್ರಪಂಚವನ್ನು ತಿಳಿಯುವುದಕ್ಕೆ ಪ್ರಪಂಚ ವಿದ್ಯೆಗಳು ಸಹ ಇವೆ. ಯಾವ ವಿದ್ಯೆಗಾದರೂ ಶಾಸ್ತ್ರ ಪ್ರಾಣವಂತಾದ್ದು. ಪ್ರಪಂಚವಿದ್ಯೆಯನ್ನು ತಿಳಿಯುವುದಕ್ಕೆ ಐದು ಶಾಸ್ತ್ರಗಳು ಇವೆ. ಹಾಗೆಯೇ ದೇವರ ಆಧ್ಯಾತ್ಮಿಕ ವಿದ್ಯೆಯನ್ನು ತಿಳಿಯುವುದಕ್ಕೆ ಬ್ರಹ್ಮವಿದ್ಯಾಶಾಸ್ತ್ರ ಒಂದು ಇದೆ. ಪಂಚಭೂತಗಳೊಂದಿಗೆ ತಯಾರಾದ ಪ್ರಪಂಚಕ್ಕೆ 1. ಗಣಿತಶಾಸ್ತ್ರ 2. ಖಗೋಳಶಾಸ್ತ್ರ 3. ರಸಾಯನ ಶಾಸ್ತ್ರ 4. ಭೌತಶಾಸ್ತ್ರ 5. ಜ್ಯೋತಿಷ್ಯಶಾಸ್ತ್ರ ಎನ್ನುವ ಐದು ಶಾಸ್ತ್ರಗಳು ಇವೆ. ಶಾಸ್ತ್ರ ಎಂದರೆ ಶಾಸನಗಳೊಂದಿಗೆ ಕೂಡಿಕೊಂಡಿರುವುದೆಂದು ಅರ್ಥ. ಶಾಸನ ಎಂದರೆ ನಡೆದು ತೀರುವುದೆಂದು ಅರ್ಥ. ಶಾಸನಗಳು ಸಿದ್ಧಾಂತಗಳೊಂದಿಗೆ ಕೂಡಿಕೊಂಡಿರುತ್ತವೆ. ನಿರೂಪಣೆಗೆ ಬರುವುದು ಸಿದ್ಧಾಂತ. ಸಿದ್ಧಾಂತಪರವಾಗಿ ತಿಳಿಸಿರುವ ಶಾಸನಗಳೊಂದಿಗೆ ಕೂಡಿಕೊಂಡಿರುವುದನ್ನು ಶಾಸ್ತ್ರ ಎನ್ನುತ್ತೇವೆ. ಇದನ್ನನುಸರಿಸಿ ಪುಸ್ತಕಗಳೆಲ್ಲವೂ ಶಾಸ್ತ್ರಗಳು ಅಲ್ಲವೆಂದು, ಪುಸ್ತಕಗಳಲ್ಲಿ ವೇದಗಳು, ಉಪ ನಿಷತ್ತುಗಳು, ಪುರಾಣಗಳು, ಇತಿಹಾಸಗಳು (ಚರಿತ್ರೆಗಳು) ಕಾವ್ಯಗಳು ಎನ್ನುವವು ಎಷ್ಟೋ ಇವೆಯೆಂದು ತಿಳಿಯುತ್ತಿದೆ. ಪ್ರಪಂಚದಲ್ಲಿ ಎಷ್ಟೋ ಲಕ್ಷ ಪುಸ್ತಕಗಳಲ್ಲಿ

ಕೆಲವು ಮಾತ್ರವೇ ಶಾಸ್ತ್ರಗಳೆಂದು, ಅವುಗಳಲ್ಲಿ ಭಗವದ್ಗೀತೆ ಮತ್ತು ಬೈಬಲ್ ಬ್ರಹ್ಮವಿದ್ಯಾ ಶಾಸ್ತ್ರಗಳೆಂದು ತಿಳಿಯುತ್ತಿದೆ.

ಕೆಲವು ಸಿದ್ಧಾಂತಗಳೊಂದಿಗೆ ಕೂಡಿಕೊಂಡಿರುವುದು ಶಾಸ್ತ್ರವಾದರೂ, ಶಾಸ್ತ್ರದಲ್ಲಿ ಕೆಲವು ಮೂಲ ಸಿದ್ಧಾಂತಗಳು ಪ್ರತ್ಯೇಕವಾಗಿ ಇರುತ್ತವೆ. ಅಂತಹ ಮೂಲ ಸಿದ್ಧಾಂತಗಳು ಶಾಸ್ತ್ರವೆಲ್ಲದಕ್ಕೂ ಮುಖ್ಯ ಆಧಾರವಾಗಿ ಇರುತ್ತವೆ. ಶಾಸ್ತ್ರ ತಿಳಿದ ಶಾಸ್ತ್ರಿಗಳಿಗೆ ಆ ಮುಖ್ಯ ಸಿದ್ಧಾಂತಗಳು ಮೊದಲು ತಿಳಿದಿರಬೇಕು. ಉದಾಹರಣೆಗೆ ಗಣಿತಶಾಸ್ತ್ರದಲ್ಲಿ 0 ಯಿಂದ 9 ರವರೆಗು ಇರುವ ಹತ್ತು ಅಂಕಗಳು ಬಹಳ ಮುಖ್ಯವಾದವು. ಈ ಹತ್ತು ಅಂಕಗಳೊಂದಿಗೇ ಗಣಿತಶಾಸ್ತ್ರವೆಲ್ಲ ಆಧಾರಪಟ್ಟಿದೆ. ಗಣಿತಶಾಸ್ತ್ರದಲ್ಲಿ ಎಷ್ಟೋ ಸಿದ್ಧಾಂತಗಳೊಂದಿಗೆ ಕೂಡಿಕೊಂಡ ಲೆಕ್ಕಗಳಿದ್ದರೂ ಅವುಗಳೆಲ್ಲವುಗಳಿಗೂ ಮೂಲ ಆಧಾರ ಸೊನ್ನೆಯಿಂದ ಒಂಭತ್ತರವರೆಗು ಇರುವ ಅಂಕಗಳೇ ಎಂದು ತಿಳಿಯುತ್ತಿದೆ. ಹಾಗೆಯೇ ದೇವರಿಗೆ ಸಂಬಂಧಿಸಿದ ಶಾಸ್ತ್ರದಲ್ಲಿ ಎಷ್ಟೋ ಸಿದ್ಧಾಂತಗಳಿದ್ದರೂ ಅವುಗಳೆಲ್ಲವುಗಳಿಗೂ ಆಧಾರವಾದ ಮುಖ್ಯವಾದ ಸಿದ್ಧಾಂತ ಇದೆ. ಅದೇ **ತ್ರೈತಸಿದ್ಧಾಂತ**. ತ್ರೈತ ಎಂದರೆ ಮೂರು, ಆ ಮೂರು ಯಾವುವು ಎನ್ನುವ ವಿಷಯವನ್ನು ಭಗವದ್ಗೀತೆಯಲ್ಲಿ ಎರಡು ಶ್ಲೋಕಗಳಾಗಿ, ಬೈಬಲ್‌ನಲ್ಲಿ ಎರಡು ವಾಕ್ಯಗಳಾಗಿ ದೇವರು ಭಗವಂತನ ರೂಪದಿಂದ ಹೇಳಿದ್ದಾನೆ. ಗೀತೆಯಲ್ಲಿ ಹೇಳಿದ ಎರಡು ಶ್ಲೋಕಗಳಲ್ಲಿನ ವಿಷಯಗಳು ಭಗವದ್ಗೀತೆಗೆ ಆಧಾರವಾದ ಧರ್ಮಗಳಾಗಿ ಇವೆ. ಹಾಗೆಯೇ ಬೈಬಲ್‌ನಲ್ಲಿ ಹೇಳಿದ ಎರಡು ವಾಕ್ಯಗಳು ಎರಡು ಆಜ್ಞೆಗಳಾಗಿ (ಧರ್ಮಗಳಾಗಿ) ಇವೆ. ಈ ಎರಡು ಆಜ್ಞೆಗಳು ಶಾಸ್ತ್ರಕ್ಕೆ ಆಧಾರವೆಂದು ಸ್ವತಃವಾಗಿ ಯೇಸುಪ್ರಭುವೇ ಹೇಳಿದ್ದಾನೆ. ಮತ್ತಾಯ ಸುವಾರ್ತೆ 22ನೇ ಅಧ್ಯಾಯ 40ನೇ ವಚನದಲ್ಲಿ **"ಈ ಎರಡು ಆಜ್ಞೆಗಳು ಧರ್ಮಶಾಸ್ತ್ರವೆಲ್ಲದಕ್ಕೂ ಪ್ರವಕ್ತರಿಗೂ ಆಧಾರವಾಗಿವೆಯೆಂದು ಆತನೊಂದಿಗೆ ಹೇಳಿದನು"** ಎಂದು ಇದೆ. ಬೋಧನೆಯಾಗಿರುವ ಶಾಸ್ತ್ರಕ್ಕೂ, ಬೋಧಿಸುವ ಪ್ರವಕ್ತರಿಗೂ ಕೂಡ ಆಧಾರವಾಗಿವೆ ಯೆಂದರೇ ಈ ಧರ್ಮಗಳು ಬಹಳ ಮುಖ್ಯವಾದವೆಂದು ಹೇಳದೇನೆ ತಿಳಿಯುತ್ತಿದೆ.

ಶಾಸ್ತ್ರಗಳಿಗೆ ಬೆಳಕು, ಪ್ರವಕ್ತರು ಬೋಧಿಸುವುದಕ್ಕೆ ಆಧಾರವಾದ ಮುಖ್ಯ ಸೂತ್ರಗಳನ್ನು ಯಾವ ಮತದಲ್ಲಿಯೂ ಮನುಷ್ಯರು ಯಾರೂ ಪ್ರಾಮುಖ್ಯವಾಗಿ ತೆಗೆದುಕೊಂಡಿಲ್ಲ. ಪ್ರವಕ್ತ (ಭಗವಂತನು) ಆದ ಶ್ರೀಕೃಷ್ಣನು, ಯೇಸು ಪ್ರಭು ಇತ್ತ ಗೀತೆಯಲ್ಲಿ, ಅತ್ತ ಬೈಬಲ್‌ನಲ್ಲಿ ಮುಖ್ಯಧರ್ಮಗಳಾಗಿ ಯಾವ ವಾಕ್ಯಗಳನ್ನು ಹೇಳಿದ್ದಾರೋ, ಸಿದ್ಧಾಂತಗಳಾದ ಆ ದೈವವಾಕ್ಕುಗಳನ್ನು ಗೀತೆಯಲ್ಲಿ ಬೈಬಲ್‌ನಲ್ಲಿ ಹೇಳುವುದಕ್ಕಿಂತ ಮುಂಚೆಯೇ ಜಗತ್ತು ಹುಟ್ಟಿದಾಗಲೇ ಪರಿಶುದ್ಧಾತ್ಮ ಪರಮಾತ್ಮನಾದ ದೇವರು ಪ್ರತಿ ಮನುಷ್ಯವೊಂದರ ಹಸ್ತದಲ್ಲಿ ಗೆರೆಗಳ ರೂಪದಲ್ಲಿ ಮುದ್ರಿಸಿ ಕಳುಹಿಸಿದ್ದಾನೆ. ಪ್ರತಿ ಮಾನವನ ಹಸ್ತದಲ್ಲಿಯೂ ಮುಖ್ಯವಾಗಿ ಮೂರು ರೇಖೆಗಳು ಇರುತ್ತವೆ. ದೇವರು ತನ್ನ ಗ್ರಂಥಗಳಲ್ಲಿ ತಿಳಿಸಿದ ಸಿದ್ಧಾಂತವನ್ನು ನಾವು ತ್ರೈತಸಿದ್ಧಾಂತವೆಂದು ಕರೆಯುತ್ತಿದ್ದೇವೆ. ಮೂರು ಆತ್ಮಗಳ ವಿವರವನ್ನು ತಿಳಿಸುವ ಸಿದ್ಧಾಂತವಾದ್ದರಿಂದ ನಾವು ತ್ರೈತ ಸಿದ್ಧಾಂತ ಎಂದಿದ್ದೇವೆ.. ತ್ರೈತ ಸಿದ್ಧಾಂತವನ್ನು ದೇವರು ಪ್ರತಿ ಮನುಷ್ಯನ ಹಸ್ತದಲ್ಲಿ ಮೂರು ರೇಖೆಗಳಾಗಿ ಶಾಶ್ವತವಾಗಿ ಇರುವಂತೆ ಮಾಡಿದ್ದಾನೆ. ಇವು ಶಾಶ್ವತವಾದ ದೇವರ ಧರ್ಮಗಳು ಆದ್ದರಿಂದ ಅಳಸಿದರೂ ಅಳಸಿಹೋಗದ, ಮಾಸಿಹೋಗದ ಗೆರೆಗಳಾಗಿ ನಮ್ಮ ಹಸ್ತದಲ್ಲಿ ಇವೆ. ಶಾಸ್ತ್ರವಚನಗಳಾಗಿ ಗೀತೆಯಲ್ಲಿ ಬೈಬಲ್‌ನಲ್ಲಿ ಇರುವ ಧರ್ಮಗಳು ಕೆಟ್ಟುಹೋಗದ ಮೂರು ರೇಖೆಗಳಾಗಿ ಕೈಯ್ಯಲ್ಲಿ ನಿಂತಿವೆ.

ಕಾಣಿಸುವ ಶರೀರದಲ್ಲಿ ಕಾಣಿಸದಂತೆ ಮೂರು ಆತ್ಮಗಳು ಇವೆ. ಮೂರು ಆತ್ಮಗಳಲ್ಲಿ ಎರಡು ಎಂದಿಗೂ ಬಿಡದ ಜೋಡಿಯಾಗಿ ಜೀವಾತ್ಮ, ಆತ್ಮ ಎಂದು ಹೆಸರು ಹೊಂದಿವೆ. ಎರಡು ಆತ್ಮಗಳ ನಿವಾಸ ಒಂದೇ ಶರೀರ. ಎರಡು ಆತ್ಮಗಳಲ್ಲಿ ಒಂದು ಚಿಕ್ಕದು ಮತ್ತೊಂದು ದೊಡ್ಡದಾಗಿ ಇವೆ. ಚಿಕ್ಕದಾದ ಜೀವಾತ್ಮ ಒಂದು ಚಿಕ್ಕ ರೇಣುವಷ್ಟಿದ್ದು ತಲೆಯಲ್ಲಿ ಕಣ್ಣ ಹುಬ್ಬುಗಳ ಮಧ್ಯಭಾಗದಲ್ಲಿ ಒಳಗೆ ಇದೆ. ದೊಡ್ಡದಾದ ಎರಡನೆ ಆತ್ಮ ನಖಶಿಖ ಪರ್ಯಂತ ಶರೀರವೆಲ್ಲಾ ವ್ಯಾಪಿಸಿದೆ. ಈ ಎರಡು ಆತ್ಮಗಳು ಹುಟ್ಟುವಿಕೆಯಲ್ಲಿಯೂ ಸಾವಿನಲ್ಲಿಯೂ ಮಧ್ಯಕಾಲದಲ್ಲಿಯೂ ಜೂತೆಯಾಗಿ ಶರೀರದಲ್ಲಿ ಇವೆ. ಮೂರನೆಯದಾದ

ಮತ್ತೊಂದು ಇದೆ ಅದನ್ನೇ ಪರಮಾತ್ಮ ಎನ್ನುತ್ತಿದ್ದೇವೆ. ಈ ಮೂರನೆಯದನ್ನೇ ದೇವರು ಎಂದು ಸಹ ಕರೆಯುತ್ತಿದ್ದೇವೆ. ದೇವರಿಗೆ ರೂಪ ಹೆಸರು ಇಲ್ಲ. ರೂಪ ಹೆಸರಿರುವವನು ದೇವರಲ್ಲ ಎನ್ನುವ ಸೂತ್ರದ ಪ್ರಕಾರ ಮೂರನೆಯ ದಾದ ಪರಮಾತ್ಮನಿಗೆ ಹೆಸರು ಇಲ್ಲ ಎನ್ನುತ್ತಿದ್ದೇವೆ. ಪರಮಾತ್ಮ ಎಂದು ಹೆಸರಿಟ್ಟು ಹೇಳುತ್ತಾ ಹೆಸರು ಇಲ್ಲ ಎನ್ನುವುದು ಆಶ್ಚರ್ಯವಾಗಿ ಇದೆಯೆಂದು ಕೆಲವರಂದುಕೊಳ್ಳಬಹುದು. ಇಲ್ಲಿ ಇರುವ ಸತ್ಯವೇನೆಂದರೇ ದೇವರಿಗೆ ಹೆಸರಿಲ್ಲ ಎನ್ನುವುದು ಸತ್ಯ. ದೇವರು ಎನ್ನುವುದು ಸಹ ಹೆಸರು ಅಲ್ಲ. **ದೇವರು ಎಂದರೆ ಹುಡುಕಬೇಕಾದವನು ಎಂದು ಅರ್ಥ. ದೇವಲ್ಪಡುವವನೆಂದರೆ ಹುಡುಕಬೇಕಾದವನು ಎಂದು ಅರ್ಥ. ಹುಡುಕುತ್ತಿದ್ದೇವೆಂದರೇ ಕಾಣಿಸದವನೆಂದೇ ಅಲ್ಲವೆ ಅರ್ಥ.** ಶರೀರದಲ್ಲಿ ಜೀವಾತ್ಮ ಆತ್ಮ ಎರಡಿವೆಯೆಂದು ಅಂದುಕೊಂಡಿದ್ದೇವೆ ಅಲ್ಲವೆ! ಎರಡನೆಯದಾದ ಆತ್ಮಗಿಂತ ಬೇರೆಯಾಗಿ ಇರುವವನೆನ್ನುವ ಅರ್ಥದೊಂದಿಗೆ ಪರಮಾತ್ಮ ಎನ್ನುತ್ತಿದ್ದೇವೆ. ಪರವಾಗಿರುವವನು ಎಂದರೇ ಇತರನು ಎಂದು ಅರ್ಥ ಅಲ್ಲವೆ! ಆತ್ಮಗಿಂತ ಪರವಾಗಿ ಇರುವವನು ಆದ್ದರಿಂದ ದೇವರನ್ನು ಪರಮಾತ್ಮ ಎನ್ನುತ್ತಿದ್ದೇವೆ. ಅದೇ ವಿಧವಾಗಿ ದೇವರನ್ನು ಪರಿಶುದ್ಧಾತ್ಮ ಎನ್ನುತ್ತಿದ್ದೇವೆ. ಶರೀರದಲ್ಲಿ ಕರ್ಮ ಎನ್ನುವ ಕಲುಷಿತದಿಂದ ಕೂಡಿಕೊಂಡವನು ಜೀವಾತ್ಮ, ಯಾವ ಕರ್ಮ ಇಲ್ಲದ ಶುದ್ಧಾತ್ಮ ಎರಡನೆಯದಾದ ಆತ್ಮ. ಶರೀರದಲ್ಲಿ ಎರಡನೆಯದಾದ ಶುದ್ಧಾತ್ಮಕ್ಕಿಂತ ಬೇರೆಯಾಗಿ ಇರುವುದು ಪರಿಶುದ್ಧಾತ್ಮ. ಈ ವಿಧವಾಗಿ ಪರಿಶುದ್ಧಾತ್ಮ ಎಂದರೂ, ಪರಮಾತ್ಮ ಎಂದರೂ ಎರಡು ದೇವರಿಗೇ ಸಲ್ಲುತ್ತವೆಂದು ತಿಳಿಯಬೇಕು.

ಮೂರನೆಯದಾದ ಪರಮಾತ್ಮ ಅಥವಾ ದೇವರು ಶರೀರದೊಳಗೆ ಹೊರಗೆ ಎಲ್ಲಾ ವ್ಯಾಪಿಸಿ ಇದ್ದಾನೆ. ಆತ್ಮ ಜೀವಾತ್ಮಗಳಿಗೆ ಶರೀರ ಗೃಹವಾದಾಗ, ಪರಮಾತ್ಮನಿಗೆ ವಿಶ್ವವೆಲ್ಲಾ ಗೃಹವೆಂದೇ ಹೇಳಬಹುದು. ಜೀವಾತ್ಮ ಆತ್ಮಗಳು ಎರಡು ಒಂದು ಜೋಡಿಯಾಗಿ ಇರುವಾಗ, ಪರಮಾತ್ಮ ಮಾತ್ರ ಪ್ರತ್ಯೇಕವಾಗಿ ಇದೆ. ಈ ವಿಷಯ ಎಲ್ಲರಿಗೂ ತಿಳಿಯುವಂತೆ ಹಸ್ತದಲ್ಲಿ ಕೂಡ ಎರಡು

ರೇಖೆಗಳು ಒಂದು ಕೊನೆಯಲ್ಲಿ ಬೆರೆತಿವೆ. ಒಂದು ರೇಖೆ ಮಾತ್ರ ಪ್ರತ್ಯೇಕವಾಗಿ ಎರಡು ರೇಖೆಗಳಿಗೂ ಮೇಲೆ ಕಾಣಿಸುತ್ತಿದೆ. ಮೂರು ಆತ್ಮಗ್ಗಳಲ್ಲಿ ಎರಡು ಒಂದು ಜೊತೆ ಆದಾಗ ಮತ್ತೊಂದು ಪ್ರತ್ಯೇಕವಾಗಿ ಇದೆಯೆಂದು, ಅದನ್ನೇ ಆರಾಧಿಸಬೇಕೆಂದು ತಿಳಿಯುವಂತೆ ಬೈಬಲ್‌ನಲ್ಲಿ ಮೊದಲ ಆಜ್ಞೆ, ಎರಡನೆ ಆಜ್ಞೆ ಎಂದು ಎರಡು ಆಜ್ಞೆಗ್ಗಳಾಗಿ ಪ್ರಭು ಹೇಳಿದ್ದಾನೆ. ಹಾಗೆಯೇ ಎರಡು ಆತ್ಮಗ್ಗಳಿಗು ಹೆಸರುಗಳಿವೆಯೆಂದು ಮೂರನೆಯದಕ್ಕೆ ಹೆಸರಿಲ್ಲವೆಂದು, ಎರಡು ಆತ್ಮಗ್ಗಳು ಬೆರೆತು ಕೂಟಸ್ಥವಾಗಿ ಶರೀರದಲ್ಲಿ ಇವೆಯೆಂದು, ಮೂರನೆಯದಾದ ಪರಮಾತ್ಮ ಪ್ರತ್ಯೇಕವಾಗಿ ಮೂರು ಲೋಕಗಳು ಆವರಿಸಿ ಇದೆಯೆಂದು ಗೀತೆಯಲ್ಲಿ ಕೃಷ್ಣನು ಹೇಳಿದ್ದಾನೆ.

ನೀನು, ನಿನ್ನ ಪೂರ್ಣಾತ್ಮದೊಂದಿಗೆ, ನಿನ್ನ ದೇವರಾದ ಪ್ರಭುವನ್ನು ಪ್ರೀತಿಸಬೇಕೆಂದು ಬೈಬಲ್‌ನಲ್ಲಿ ಇದೆ. ನೀನು ಬೇರೆ, ನಿನ್ನ ಪೂರ್ಣಾತ್ಮ ಬೇರೆ, ನಿನ್ನ ದೇವರು ಬೇರೆಯೆಂದು ಈ ವಾಕ್ಯದಲ್ಲಿ ತಿಳಿಯುತ್ತಿದೆ. ಹಾಗೆಯೇ ಕ್ಷರನು, ಅಕ್ಷರನು ಪುರುಷೋತ್ತಮನು ಎಂದು ಗೀತೆಯಲ್ಲಿ ಇದೆ. ಕ್ಷರನು ಬೇರೆ, ಅಕ್ಷರನು ಬೇರೆ, ಪುರುಷೋತ್ತಮನು ಬೇರೆಯೆಂದು ಇಲ್ಲಿ ತಿಳಿಯುತ್ತಿದೆ. ಈ ವಿಧವಾಗಿ ಬೈಬಲ್ ಮತ್ತಾಯ ಸುವಾರ್ತೆಯಲ್ಲಿಯೂ, ಭಗವದ್ಗೀತೆ ಪುರುಷೋತ್ತಮಪ್ರಾಪ್ತಿ ಯೋಗದಲ್ಲಿಯೂ ಹೇಳಲ್ಪಟ್ಟಿರುವಾಗ, ಅಲ್ಲಿ ಹೇಳಿದ ವಿಷಯವೇ ಪ್ರತಿ ಮಾನವನ ಕೈ ಹಸ್ತದಲ್ಲಿಯೂ ಮುದ್ರಿಸಿದ ಮುದ್ರೆಯಾಗಿ ಇರುವಾಗ, ಇತ್ತ ಕ್ರೈಸ್ತರಿಗೂ ಅತ್ತ ಹಿಂದೂಗಳಿಗು ಸ್ವಲ್ಪವೂ ಅರ್ಥ ಆಗಲಿಲ್ಲ. ಮಾನವನಿಗೆ ಮುಖ್ಯವಾದ ಧರ್ಮಗಳಾಗಿ ಗೀತೆಯಲ್ಲಿಯೂ, ದೇವರು ಹೇಳಿದ ಮುಖ್ಯವಾದ ಆಜ್ಞೆಗ್ಗಳಾಗಿ ಬೈಬಲ್‌ನಲ್ಲಿಯೂ ಇದ್ದರೇ ಅವುಗಳನ್ನು ಸ್ವಲ್ಪವೂ ಗ್ರಹಿಸದೆ, ನಮ್ಮ ದೇವರು ಪಾಪಿಗಳನ್ನು ಸಾಯಿಸುವುದಕ್ಕೆ ಬರುತ್ತಾನೆಂದು ಹಿಂದೂಗಳು, ನಮ್ಮ ದೇವರು ಪಾಪಗಳನ್ನು ತೊಳೆಯುವುದಕ್ಕೆ ಬರುತ್ತಾನೆಂದು ಕ್ರೈಸ್ತರು ಹೇಳಿಕೊಳ್ಳುವುದು ತಪ್ಪಲ್ಲವೆ! ಗೀತೆಯಲ್ಲಿ ಪಾಪಿಗಳನ್ನು ತನ್ನ ಆಯುಧದಿಂದ ಸಾಯಿಸುತ್ತೇನೆಂದು ಕೃಷ್ಣನಾಗಲಿ, ಬೈಬಲ್‌ನಲ್ಲಿ ತನ್ನ ರಕ್ತದಿಂದ

ತೊಳೆಯುತ್ತೇನೆಂದು ಪ್ರಭುವಾಗಲಿ ಹೇಳಲಿಲ್ಲ. ಗೀತೆಯಲ್ಲಾಗಲೀ ಬೈಬಲ್‌ನಲ್ಲಾಗಲೀ ಹೇಳದ ವಾಕ್ಯಗಳನ್ನು ಅದೇ ಕೆಲಸದಂತೆ ಹೇಳಿಕೊಳ್ಳುವುದು, ಹೇಳಿದ ಧರ್ಮಗಳನ್ನು (ಆಜ್ಞೆಗಳನ್ನು) ಬಿಟ್ಟುಹಾಕುವುದು ಮನುಷ್ಯರ ತಪ್ಪಲ್ಲವೆ!

ಇದರ ಪ್ರಕಾರ ಭಗವದ್ಗೀತೆಯಲ್ಲಿ ಪಾಪಾತ್ಮರನ್ನು ಕೃಷ್ಣನು ಸಂಹರಿಸುತ್ತಾನೆಂದು ಬರೆದವರು ಎಷ್ಟು ದೊಡ್ಡ ಸ್ವಾಮಿಗಳಾದರೂ ತಪ್ಪು ಮಾಡಿದಂತೇ, ಪ್ರಜೆಗಳನ್ನು ವಕ್ರಮಾರ್ಗದೊಳಗೆ, ಮಾಯಾ ಮಾರ್ಗದೊಳಗೆ ಕಳುಹಿಸಿದಂತೇ. ಅದೇ ವಿಧವಾಗಿ ಬೈಬಲ್‌ನಲ್ಲಿ ಪಾಪಾತ್ಮರನ್ನು ಪ್ರಭು ತನ್ನ ರಕ್ತದಿಂದ ತೊಳೆಯುತ್ತೇನೆಂದು ಹೇಳುವವರು ಯಾರಾದರೂ ತಪ್ಪು ಮಾಡಿದಂತೇ, ಪ್ರಜೆಗಳನ್ನು ಸಾತಾನು ಮಾರ್ಗದೊಳಗೆ ಕಳುಹಿಸಿದಂತೇ.

ಹಿಂದೂಮತದಲ್ಲಿನ ಭಗವದ್ಗೀತೆಯಲ್ಲಿ ಕ್ಷರಾಕ್ಷರ ಪುರುಷೋತ್ತಮರಾದ ಮೂವರು ಪುರುಷರಿಗೆ ಅರ್ಥ ಹೇಳದೆ, ಸ್ತ್ರೀ ಸ್ವರೂಪವಾದ ಪ್ರಕೃತಿಯನ್ನು ಕ್ಷರನಾಗಿ, ಜೀವಾತ್ಮವನ್ನು ಅಕ್ಷರನಾಗಿ ವರ್ಣಿಸುವವರ್‍ಯಾರಾದರೂ ದೇವರ ಧರ್ಮಗಳನ್ನು ಅಧರ್ಮವಾಗಿ ಬದಲಾಯಿಸಿ ಹೇಳಿದಂತೇಯಾಗುತ್ತದೆ. ಅದೇ ವಿಧವಾಗಿ ಬೈಬಲ್‌ನಲ್ಲಿ ಹೇಳಿದಂತೆ ನಿನ್ನನ್ನು ನಿನ್ನ ಆತ್ಮವನ್ನು ಬಿಟ್ಟು, ನಿನ್ನನ್ನು ಶರೀರವಾಗಿ, ನಿನ್ನ ಆತ್ಮವನ್ನು ಪಕ್ಕದಲ್ಲಿರುವ ಮನುಷ್ಯನಾಗಿ ವರ್ಣಿಸಿ ನೀನು ನಿನ್ನ ಮನೆ ಪಕ್ಕದವನನ್ನು ಪ್ರೀತಿಸು ಎನ್ನುವುದು ದೇವರ ಆಜ್ಞೆಯನ್ನು ಮೀರಿದಂತಾಗುತ್ತದೆ ಅಲ್ಲವೆ!

ವಿಶ್ವವೆಲ್ಲದಕ್ಕೂ ಅಧಿಪತಿಯಾಗಿ, ಎಲ್ಲ ಮತಗಳಿಗು ಆಧಾರಭೂತನಾದ ದೇವರನ್ನು ಮತಗಳ ಮೌಢ್ಯದಿಂದ ಗುರುತಿಸದೆ, ಆತನ ಅವತಾರಗಳಲ್ಲಿ ಹೇಳಿದ ಬೋಧನೆಗಳನ್ನು ಅರ್ಥ ಮಾಡಿಕೊಳ್ಳದೆ, ಒಂದೇ ದೇವರೊಂದರ ಎರಡು ಅವತಾರಗಳಲ್ಲಿ ತನಗಿಷ್ಟಬಂದಿರುವ ಅವತಾರವನ್ನು ಹೊಗಳುವುದು, ಮತ್ತೊಂದು ಅವತಾರವನ್ನು ತಿರಸ್ಕರಿಸುವುದು ಮನುಷ್ಯನೊಂದರ ಅಜ್ಞಾನವಲ್ಲವೆ! ದೇವರ ಅವತಾರಗಳಲ್ಲಿ ಬೋಧಿಸಿದ ಜ್ಞಾನವನ್ನು ನೋಡದೆ ಅವತಾರಗಳ ಹೆಸರನ್ನು, ರೂಪವನ್ನು ನೋಡಿ ಅಸೂಯಪಡುವುದು ಒಳ್ಳೆಯದಾ!

ಮಾನವನನ್ನು ಉದ್ದರಿಸಿ ತನ್ನ ಮಾರ್ಗದಲ್ಲಿ ಕಳುಹಿಸುವುದಕ್ಕೆ, ತನ್ನ ಜ್ಞಾನವನ್ನು ತಿಳಿಸುವ ನಿಮಿತ್ತ ದೇವರು ಮನುಷ್ಯನಾಗಿ ಬರುವುದು ತಪ್ಪಲಿಲ್ಲ. ಬಂದವನಲ್ಲಿನ ಘನತೆಯನ್ನು ಗುರುತಿಸದ ಮನುಷ್ಯರು ದೇವರ ಅವತಾರವನ್ನು ಸಹ ಮನುಷ್ಯನಾಗಿ ಲೆಕ್ಕಿಸಿ, ಆತನ ಮೂಲಕ ಜ್ಞಾನವನ್ನು ತಿಳಿದುಕೊಳ್ಳದೆ ಮೇಲಾಗಿ ಆತನ ಮೇಲೆ ಅಸೂಯೆಪಟ್ಟು, ಆತನು ಯಾರಿಗು ಯಾವ ಅಪಕಾರ ಮಾಡದಿದ್ದರೂ ಶತ್ರುವಿಗಿಂತ ಹೆಚ್ಚಾಗಿ ತಿಳಿದು, ಯಾವುದೋ ಒಂದು ವಿಧವಾಗಿ ಹಿಂಸಿಸಿ ಹತ್ಯೆ ಮಾಡುವುದು ನಡೆದಿದೆ. ಕೃಷ್ಣನಾಗಿ ಬಂದಾಗ ಆ ದಿನದ ಮನುಷ್ಯರು ಆತನನ್ನು ಮೇಲ್ನೋಟವನ್ನೇ ನೋಡಿದ್ದಾರೆ ಹೊರತು ದೇವರಾಗಿ ತಿಳಿಯಲಿಲ್ಲ. ಕೊನೆಗೆ ಆತನು ಬಾಣದಿಂದ ಹೊಡೆಯಲ್ಪಟ್ಟು, ರಕ್ತ ಸೋರಿ ಮರಣಿಸಿದ್ದಾನೆ. ಅದೇ ವಿಧವಾಗಿ ಯೇಸು ಪ್ರಭುವಿನ ರೂಪದಲ್ಲಿ ಬಂದಿರುವ ದೇವರನ್ನು ಮನುಷ್ಯರು ಗುರುತಿಸದೆ, ಆತನ ಬೋಧನೆಗಳನ್ನು ಅರ್ಥ ಮಾಡಿಕೊಳ್ಳದೆ ಆತನನ್ನು ಶತ್ರುವಿಗಿಂತ ಹೀನವಾಗಿ ನೋಡಿ ಚಿತ್ರಹಿಂಸೆಗಳ ಪಾಲು ಮಾಡಿದ್ದಾರೆ. ಕೊನೆಗೆ ಪ್ರಭು ಕೈಗಳಿಗೆ ಮೊಳೆಗಳು ಹೊಡೆಯುವುದರಿಂದ ರಕ್ತ ಸೋರಿ ಮರಣಿಸಿದ್ದಾನೆ. ಇತ್ತ ಕೃಷ್ಣನಿಗೂ ಅತ್ತ ಪ್ರಭುವಿಗೂ ಒಂದೇ ಸಲ ಪ್ರಾಣ ಹೋಗದೆ ಒಬ್ಬರು ಬಾಣದಿಂದ, ಒಬ್ಬರು ಮೊಳೆಗಳಿಂದ ಬಾಧೆಪಡುತ್ತಾ, ರಕ್ತಸೋರುತ್ತಿರುವಾಗ ಸ್ವಲ್ಪ ಹೊತ್ತಿಗೆ ಪ್ರಾಣ ಬಿಟ್ಟಿದ್ದಾರೆ. ಹುಟ್ಟಿದಾಗ ಕೂಡ ಒಬ್ಬರು ಅಪರಿಶುಭ್ರವಾದ ಜೈಲಿನಲ್ಲಿ ಮತ್ತೊಬ್ಬರು ಅಪರಿಶುಭ್ರವಾದ ಪಶುಗಳ ಕೊಟ್ಟಿಗೆಯಲ್ಲಿ ಹುಟ್ಟಿದ್ದಾರೆ. ಹುಟ್ಟಿದಾಗ ಇಬ್ಬರ ಪ್ರಾಣಕ್ಕೂ ಅಪಾಯವಿರುವುದರಿಂದ ಒಂದೇ ವಿಧವಾಗಿ ಇತರೆ ಸ್ಥಳಗಳಿಗೆ ಬದಲಾಯಿಸಲ್ಪಟ್ಟಿದ್ದಾರೆ. ದೊಡ್ಡವರಾದ ನಂತರ ಒಂದೇ ಜ್ಞಾನವನ್ನು ಹೇಳಿದ್ದಾರೆ. ಒಂದೇ ವಿಧವಾಗಿ ರಕ್ತ ಸೋರುವುದರಿಂದ ಮರಣಿಸಿದ್ದಾರೆ. ಅವರಿಬ್ಬರು ಹೇಗೆ ಹುಟ್ಟಿದ್ದಾರೆ ಹೇಗೆ ಮರಣಿಸಿದ್ದಾರೆನ್ನುವುದು ಮುಖ್ಯವಲ್ಲದಿದ್ದರೂ ಅವರು ಅವರ ಜೀವನದಲ್ಲಿ ಏನು ಹೇಳಿದ್ದಾರೆನ್ನುವುದು ಮುಖ್ಯ. ಅವರು ಹೇಳಿದ ಜ್ಞಾನವನ್ನು ನೋಡದೆ ಆತನು ಮದುವೆ ಮಾಡಿಕೊಂಡಿದ್ದಾನೆ, ಈತನು ಮದುವೆ ಮಾಡಿಕೊಂಡಿಲ್ಲ

ಎನ್ನುವುದು ಒಳ್ಳೆಯದಾ! ಅವರು ಏನು ತಿಂದಿದ್ದಾರೆ, ಏನು ಅನುಭವಿಸಿದ್ದಾರೆ ಎನ್ನುವುದು ಮುಖ್ಯವಲ್ಲ. ಅವರು ಏನು ಹೇಳಿದ್ದಾರೆನ್ನುವುದು ಮುಖ್ಯ.

ಇಲ್ಲಿಯವರೆಗು ಅವತಾರ ಪುರುಷರಾದ ಕೃಷ್ಣನನ್ನು ಯೇಸುಪ್ರಭುವನ್ನು ಕುರಿತು ಮತಗಳಿಗೆ ಅತೀತವಾಗಿ ಇರುವ ಸತ್ಯವನ್ನು ಹೇಳುತ್ತಾ ಬಂದಿದ್ದೇವೆ. ಈ ವಿಷಯಗಳಿಂದ ಇತ್ತ ಹಿಂದೂಗಳಿಗೂ ಅತ್ತ ಕ್ರೈಸ್ತರಿಗೂ ಅಸಂತೃಪ್ತಿಯನ್ನು ಉಂಟುಮಾಡುವಂತೆ ಮಾಯೆ ಮಾಡಿರಬಹುದು. ಇಂದಿಗೂ ಅರ್ಥವಾಗದೆ ಆತನು ಬೇರೆ, ಈತನು ಬೇರೆ, ಈತನ ಬೋಧನೆ ಬೇರೆ, ಆತನ ಬೋಧನೆ ಬೇರೆಯೆನ್ನುವವರಿರಬಹುದು. ಇತ್ತ ಗೀತೆಯಲ್ಲಾಗಲೀ ಅತ್ತ ಬೈಬಲ್‌ನಲ್ಲಾಗಲೀ ಒಂದೇ ಅರ್ಥವನ್ನು ಕೊಡುವ ಒಂದು ವಾಕ್ಯವನ್ನಾದರೂ ತೋರಿಸಬಲ್ಲಿರಾ ಎಂದು ಕೆಲವರು ಕೇಳಬಹುದು. ಅಂತಹವರಿಗೆ ಗೀತೆಯಲ್ಲಿನ ಒಂದು ವಾಕ್ಯವನ್ನು, ಬೈಬಲ್‌ನಲ್ಲಿನ ಒಂದು ವಾಕ್ಯವನ್ನು ಇಲ್ಲಿ ಬರೆಯುತ್ತಿದ್ದೇವೆ. ಈ ಎರಡು ವಾಕ್ಯಗಳು ಪ್ರಭು ಜೀವನ, ಕೃಷ್ಣನ ಜೀವನವಿದ್ದಂತೆ ಭಿನ್ನವಾಗಿ ಇರುತ್ತದೆ. ಪ್ರಭು ಜೀವನದಲ್ಲಿ ಆಕಾರ ಹವ್ಯಾಸಗಳು ಅನುಭವಗಳು ಬೇರೆ, ಕೃಷ್ಣನ ಜೀವನದಲ್ಲಿ ಆಕಾರ ಅಭ್ಯಾಸಗಳು ಅನುಭವಗಳು ಬೇರೆ. ಅದೇ ವಿಧವಾಗಿ ಈಗ ಹೇಳುವ ಅವರ ವಾಕ್ಯಗಳು ಎರಡು ನೋಡುವುದಕ್ಕೆ ಒಂದಕ್ಕೊಂದು ಭಿನ್ನವಾಗಿ ಇರುತ್ತವೆ. ನೋಡುವುದಕ್ಕೆ ಬೇರೆಬೇರೆಯಾಗಿ ಇದ್ದರೂ ಪ್ರಭು ಕೃಷ್ಣನು ಇಬ್ಬರು ಒಂದೇ ದೇವರ ಅವತಾರವೆಂದು ನಾವು ಹೇಳಿದಂತೆ, ನೋಡುವುದಕ್ಕೆ ಬೇರೆಬೇರೆಯಾಗಿ ಇರುವ ಈ ಎರಡು ವಾಕ್ಯಗಳಲ್ಲಿಯೂ ಒಂದೇ ಅರ್ಥ ಒಳಗೊಂಡಿದೆ. ಅಜ್ಞಾನದಿಂದ ನೋಡಿದವರಿಗೆ ಕೃಷ್ಣನು ಬೇರೆ ಪ್ರಭುವುಬೇರೆಯಾಗಿ ಕಾಣಿಸುವನು. ಜ್ಞಾನದೃಷ್ಠಿಯಿಂದ ನೋಡಿದವರಿಗೆ ಪ್ರಭು ಕೃಷ್ಣನು ಇಬ್ಬರು ಒಂದೇ. ಹಾಗೆಯೇ ಈಗ ಬರೆದ ವಾಕ್ಯಗಳು ಎರಡು ಅಜ್ಞಾನ ನೋಟದಿಂದ ನೋಡಿದವರಿಗೆ ಬೇರೆಬೇರೆ ಅರ್ಥ ಕೊಡುವವಾಗಿ ಕಾಣಿಸುತ್ತವೆ. ಜ್ಞಾನದೃಷ್ಠಿಯಿಂದ ನೋಡಿದರೇ ಎರಡು ವಾಕ್ಯಗಳು ಒಂದಾಗಿಯೇ ಕಾಣಿಸುತ್ತವೆ ನೋಡಿರಿ. ಭಗವದ್ಗೀತೆ ಮೋಕ್ಷಸನ್ಯಾಸ ಯೋಗ 17ನೇ ಶ್ಲೋಕ.

**"ಯಸ್ಯ ನಾಹಂ ಕೃತೋ ಭಾವೋ ಬುದ್ಧಿರ‍್ಯಸ್ಯ ನಲಿಪ್ಯತೇ, ಹತ್ವಾಪಿ ಸಇಮಾನ್ ಲೋಕಾನ್ನಹನ್ತಿ ನನಿಬಧ್ಯತೇ" "ನಾನು ಮಾಡುತ್ತಿದ್ದೇನೆನ್ನುವ ಅಹಂಕಾರ ಇಲ್ಲದಂತೆ ಲೋಕದಲ್ಲಿ ಎಲ್ಲರನ್ನೂ ಸಾಯಿಸಿದರೂ ಆತನು ಹಂತಕನು ಅಲ್ಲ, ಪಾಪ ಬರುವುದಿಲ್ಲ"** ಎಂದು ಇದೆ.

ಬೈಬಲ್ ಹೊಸ ಒಡಂಬಡಿಕೆ ಮತ್ತಾಯ 5ನೇ ಅಧ್ಯಾಯ 28ನೇ ವಚನ **"ಒಬ್ಬ ಸ್ತ್ರೀಯನ್ನು ಮೋಹದ ನೋಟದಿಂದ ನೋಡುವ ಪ್ರತಿಯೊಬ್ಬನು ಆಗಲೇ ತನ್ನ ಹೃದಯದಲ್ಲಿ ಆಕೆಯೊಂದಿಗೆ ವ್ಯಭಿಚಾರ ಮಾಡಿದವನಾಗುತ್ತಾನೆ"** ಎಂದು ಇದೆ. ಗೀತೆಯಲ್ಲಿ ಅಂತರಂಗದಲ್ಲಿ ಭಾವನೆಯಿಲ್ಲದೆ ಹತ್ಯೆ ಮಾಡಿದರೆ ಆತನು ಮಾಡದಂತೇ ಪಾಪ ಬರುವುದಿಲ್ಲ. ಹಂತಕನು ಅಲ್ಲ ಎಂದರೆ, ಬೈಬಲ್‌ನಲ್ಲಿ ಮಾಡದಿದ್ದರೂ ಅಂತರಂಗದಲ್ಲಿ ಅಂದುಕೊಳ್ಳುವುದರಿಂದಲೇ ಮಾಡಿದಂತಾಗುತ್ತದೆಂದು ಪಾಪಬರುತ್ತದೆಂದು, ಅತ್ಯಾಚಾರವಾಗುತ್ತದೆಂದು ಹೇಳಲ್ಪಟ್ಟಿದೆ. ಈ ಎರಡು ವಾಕ್ಯಗಳು ಒಂದಾಗಿ ಇವೆಯಾ? ಅಥವಾ ಪರಸ್ಪರ ವಿರುದ್ಧವಾಗಿ ಇವೆಯಾ ನೀವೇ ನೋಡಿರಿ ಈ ವಾಕ್ಯಗಳು ಹೇಗೆ ಅರ್ಥವಾದರೇ ಹಾಗೆಯೇ ಈ ಪುಸ್ತಕವೆಲ್ಲವೂ ಅರ್ಥವಾಗಿರುತ್ತದೆಂದು ಅಂದುಕೊಳ್ಳುತ್ತೇವೆ.

ನಾವು ಇಲ್ಲಿಯವರೆಗು ಬರೆದಿರುವುದು ಮತಾತೀತವಾದ ಜ್ಞಾನ. ನಾವು ಇಷ್ಟಾಗಿ ಹೇಳಿದರೂ ಮತಕ್ಕೆ ಅತೀತವಾಗದೆ ಮತವೊಂದರ ಅಧೀನದಲ್ಲಿ ಇದ್ದು ಮಾತನಾಡುವವರು ಬಹಳ ಜನ ಇದ್ದಾರೆ. ನಾವು ಹೇಳಿರುವುದೆಲ್ಲಾ ಮತಕ್ಕೆ ಸಂಬಂಧಿಸಿರುವುದು ಅಲ್ಲವೆಂದು ತಿಳಿದುಕೊಳ್ಳಲಾರದೆ ಒಂದು ಮತವನ್ನು ಕೇಂದ್ರವಾಗಿ ಮಾಡಿಕೊಂಡು ನಮ್ಮನ್ನು ವಿಮರ್ಶಿಸುವವರು ಕೂಡ ಇದ್ದಾರೆ. ಅಂತಹವರನ್ನು ಉದ್ದೇಶಿಸಿ ಮತಗಳನ್ನು ಕುರಿತು ಸ್ವಲ್ಪ ಬರೆಯುತ್ತಿದ್ದೇವೆ. ಪ್ರಶ್ನೆ ಉತ್ತರಗಳೊಂದಿಗೆ ಇರುವ ಈ ಕೆಳಗಿನ ವಿಷಯವನ್ನು ನೋಡಿ ಮತ ಎಂದರೇ ಏನೋ ಕೆಲವರಾದರೂ ಸ್ವಲ್ಪವಾದರೂ ತಿಳಿಯಬಲ್ಲರೆಂದು ಕೊಳ್ಳುತ್ತಿದ್ದೇವೆ. ಇದರಿಂದ ಮತಗಳ ಭ್ರಮೆ ಸ್ವಲ್ಪವಾದರೂ ಬಿಡಬಲ್ಲರೆಂದು ಆಶಿಸುತ್ತಿದ್ದೇವೆ.

**1) ಪ್ರಶ್ನೆ :– ಮತಗಳು ಸನಾತನವಾದವುಗಳಾ ಮಧ್ಯದಲ್ಲಿ ಬಂದಿರುವವಾ?**

ಉತ್ತರ :– ಮತಗಳು ಸನಾತನವಾದವುಗಳಲ್ಲ, ಮಧ್ಯದಲ್ಲಿ ಬಂದಿರುವವು ಮಾತ್ರ. ಮನುಷ್ಯನಲ್ಲಿ ಸ್ವಲ್ಪ ನಾಗರಿಕತೆ ಬೆಳೆದ ನಂತರ ಮತಗಳು ಹುಟ್ಟಿಕೊಂಡುಬಂದಿವೆ.

**2) ಪ್ರಶ್ನೆ :– ಮತ ಎಂದರೆ ಏನು?**

ಉತ್ತರ :– ಇದಕ್ಕೆ ಸರಿಯಾದ ಸಮಾಧಾನ ಮನುಷ್ಯ ಇಷ್ಟಪಟ್ಟ ಒಂದು ಪದ್ದತಿಯನ್ನು ಮತ ಎನ್ನುತ್ತಿದ್ದೇವೆ. ಹಿಂದೀಯಲ್ಲಿ ಮತದಾನ್ ಎನ್ನುವ ಪದ ಇದೆ. ರಾಜಕೀಯಪಾರ್ಟೀಯಲ್ಲಿ ಯಾವುದೋ ಒಂದು ಪಾರ್ಟೀಯನ್ನು ಇಷ್ಟಪಟ್ಟು ತನ್ನ ಒಪ್ಪಿಗೆ (ಇಷ್ಟವನ್ನು) ತಿಳಿಸುವುದನ್ನು, ಅಥವಾ ಓಟು ಹಾಕುವುದನ್ನು ಮತದಾನ್ ಎನ್ನುತ್ತಿದ್ದೇವೆ. ದೇವರನ್ನು ತಿಳಿದುಕೊಳ್ಳುವುದಕ್ಕೆ ಕೆಲವರು ಏರ್ಪಡಿಸದವರಿಗೆ ಇಷ್ಟವಾದ ಪದ್ಧತಿಗಳನ್ನು ಮತಗಳು ಎನ್ನುತ್ತಿದ್ದೇವೆ. ಆ ಪದ್ದತಿಗಳಲ್ಲಿ ಯಾವುದನ್ನೂ ಇಷ್ಟಪಟ್ಟು ಇತರರು ಅವಲಂಭಿಸುತ್ತಿದ್ದಾರೋ ಅವರನ್ನು ಆ ಮತಸ್ಥರೆಂದು ಸಹ ಹೇಳುತ್ತಿದ್ದೇವೆ.

**3) ಪ್ರಶ್ನೆ :–ಈಗಿರುವ ಮತಗಳಲ್ಲಿ ಯಾವುದು ಸರಿಯಾದುದು ಹೇಳಬಲ್ಲಿರಾ?**

ಉತ್ತರ :– ಎಲ್ಲ ಮತಗಳು ದೇವರನ್ನು ತಿಳಿದುಕೊಳ್ಳುವುದಕ್ಕೆ ನಿರ್ಣಯಿಸಿದ ಮಾರ್ಗಗಳೇ ಆದ್ದರಿಂದ ಎಲ್ಲ ಸರಿಯಾದವೆಂದೇ ಹೇಳಬಹುದು. ಇದು ಸರಿಯಾದುದು ಅದು ಸರಿಯಲ್ಲವೆಂದು ಹೇಳುವುದು ಬಹಳ ತಪ್ಪು.

**4) ಪ್ರಶ್ನೆ :– ಮತ ಮಾರ್ಪಾಟು ಏಕೆ ನಡೆಯುತ್ತಿದೆ?**

ಉತ್ತರ :– ಪ್ರತಿ ಮನುಷ್ಯ ಹುಟ್ಟುವಿಕೆಯಿಂದಲೇ ಒಂದು ಮತದಲ್ಲಿ ಸಿಲುಕಿಕೊಂಡಿದ್ದಾನೆ. ತಾಯಿ ತಂದೆಯರು ಯಾವ ಮತದಲ್ಲಿ ಇದ್ದರೇ ಆ ಮತವೇ ಹುಟ್ಟಿದ ಮಕ್ಕಳದ್ದು ಕೂಡ ಆಗುತ್ತಿದೆ. ಸಹಜವಾಗಿ ಒಂದು ಮತದಲ್ಲಿರುವ ವ್ಯಕ್ತಿ ಮತ್ತೊಂದು ಮತದೊಳಗೆ ಬದಲಾಗುವುದು ಸಹ ಅಲ್ಲಲ್ಲಿ

ನಡೆಯುತ್ತಿದೆ. ಕೆಲವರು ಮತ ಮಾರ್ಪಾಟಾಗುವುದಕ್ಕೆ ಕಾರಣ ಅವರವರ ಸ್ವಾರ್ಥ, ಸ್ವಲಾಭ ಕಾರಣವೆಂದು ಹೇಳಬಹುದು. ಸಮಾಜದಲ್ಲಿ ಧನವನ್ನು ಬೆಳಸಿಕೊಳ್ಳುವುದಕ್ಕೂ, ಗೌರವ ಬೆಳಸಿಕೊಳ್ಳುವುದಕ್ಕೂ, ಆಸ್ತಿಗಳು ಬೆಳಸಿಕೊಳ್ಳುವು ದಕ್ಕು ಕೆಲವರು ಮತಮಾರ್ಪಾಟು ಮಾಡಿಕೊಳ್ಳುತ್ತಿದ್ದಾರೆ. ಆಧ್ಯಾತ್ಮಿಕರೀತಿಯಲ್ಲಿ ಮತಮಾರ್ಪಾಟಿನಿಂದ ಎಂತಹ ಪ್ರಯೋಜನವೂ ಇಲ್ಲ. ಪ್ರಪಂಚರೀತಿಯಲ್ಲಿ ಯಾವುದೋ ಒಂದು ಆಶಿಸಿದವರೇ ಮತಗಳನ್ನು ಬದಲಾಯಿ ಸಿಕೊಳ್ಳುತ್ತಿದ್ದಾರೆ.

**5) ಪ್ರಶ್ನೆ :– ಮತವನ್ನು ಹೆಚ್ಚಾಗಿ ಯಾರು ಬದಲಾಯಿಸಿಕೊಳ್ಳುತ್ತಿದ್ದಾರೆ?**

ಉತ್ತರ :– ಒಬ್ಬ ಹಿಂದೂ ಮತದಲ್ಲಿನವರೇ ಇತರೆ ಮತಗಳನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ.

**6) ಪ್ರಶ್ನೆ :– ಹಿಂದೂಮತದಲ್ಲಿ ಎಷ್ಟೋ ಕುಲಗಳು ಇವೆ. ಅವುಗಳಲ್ಲಿ ಹೆಚ್ಚಾಗಿ ಯಾವ ಕುಲದವರು ಮತವನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ?**

ಉತ್ತರ :– ಸಮಾಜದಲ್ಲಿ ಹೆಚ್ಚಿನ ಕುಲವಾಗಿ ಪರಿಗಣಿಸಲ್ಪಡುತ್ತಿರುವ ಬ್ರಾಹ್ಮಣರು ಮತ್ತು ಸಮಾಜದಲ್ಲಿ ಕಡಿಮೆ ಕುಲಗಳಾಗಿ ಲೆಕ್ಕಿಸಲ್ಪಡುತ್ತಿರುವ ಛಲವಾದಿ, ಮಾದಿಗ ಕುಲದವರು ಹೆಚ್ಚಾಗಿ ಮತವನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ. ಕ್ರೈಸ್ತವಮತದೊಳಗೆ ಕಡಿಮೆ ಕುಲದವರು ಬದಲಾಗುವುದರಿಂದ ತಮ್ಮನ್ನು ಕಡಿಮೆ ಕುಲಸ್ಥರಾಗಿ ಸಮಾಜ ನೋಡುವುದು ಬಿಟ್ಟು ಕ್ರೈಸ್ತರಾಗಿ ನೋಡುವರೆಂದು, ಆದ್ದರಿಂದ ಸಮಾಜದಲ್ಲಿ ಗೌರವ ಬೆಳೆಯುತ್ತದೆಂದು ಕೆಲವರು ಕಡಿಮೆ ಕುಲದವರು ಮತಮಾರ್ಪಾಟು ಮಾಡಿಕೊಳ್ಳುತ್ತಿದ್ದಾರೆ. ಹೆಚ್ಚಿನ ಕುಲದವರಾದ ಬ್ರಾಹ್ಮಣರಿಗೆ ಸಮಾಜದಲ್ಲಿ ಕುಲ ಮರ್ಯಾದೆ ಇದ್ದರೂ ಅವರಿಗೆ ಕುಲವೃತ್ತಿ ಲಭಿಸದೆ ಹೋಗುವುದರಿಂದ ಎಷ್ಟೋ ಜನ ಕೆಲಸವಿಲ್ಲದೆ ಉಳಿದುಹೋಗುತ್ತಿದ್ದಾರೆ. ಅಂತಹವರು ಮತಮಾರ್ಪಾಟು ಮಾಡಿಕೊಳ್ಳುವುದರಿಂದ, ಬದಲಾದ ಕೂಡಲೇ ಕ್ರೈಸ್ತವಮತದಲ್ಲಿ ಬೋಧಕರಾಗಿ ಗೌರವ ಲಭಿಸುವುದರಿಂದ ಬ್ರಾಹ್ಮಣರು ತಮ್ಮ ಜೀವನೋಪಾದಿ ನಡೆಸಿಕೊಳ್ಳುವುದಕ್ಕೆ ಮತ ಮಾರ್ಪಾಟಿಗೆ ಭಾಗಿಯಾಗುತ್ತಿದ್ದಾರೆ.

**7. ಪ್ರಶ್ನೆ :– ಮನುಷ್ಯನಿಗೆ ಮತಮಾರ್ಪಾಟಿನಿಂದ ದೈವಜ್ಞಾನ ಅಭಿವೃದ್ಧಿ ಆಗುತ್ತಿದೆಯಾ?**

ಉತ್ತರ :– ಮತಮಾರ್ಪಾಟಿಗೂ ಜ್ಞಾನಕ್ಕೂ ಎಂತಹ ಸಂಬಂಧವಿಲ್ಲ. ಇರುವ ಮತದಲ್ಲಿ ಜ್ಞಾನವನ್ನು ತಿಳಿಯದವನು ನಂತರ ಮತದಲ್ಲಿ ಕೂಡ ಜ್ಞಾನವನ್ನು ತಿಳಿಯಲಾರನು. ಕುರುಡನು ಇರುವ ಊರಲ್ಲಿ ನೋಡಲಾರನು. ಹಾಗೆಯೇ ಬೇರೆ ಊರಿಗೆ ಹೋದರೂ ನೋಡಲಾರನು. ಒಂದು ಮತದಲ್ಲಿ ಜ್ಞಾನವನ್ನು ನೋಡಲಾರದವನು ಅವನು ಮತ್ತೊಂದು ಮತದೊಳಗೆ ಹೋದರೂ ಆ ಮತದಲ್ಲಿ ಕೂಡ ಜ್ಞಾನವನ್ನು ನೋಡಲಾರನು.

**8. ಪ್ರಶ್ನೆ :– ಮನುಷ್ಯನಿಗೂ ದೇವರಿಗೂ ಮಧ್ಯದಲ್ಲಿ ಮತ ಅವಶ್ಯವಾ?**

ಉತ್ತರ :– ಪಯಣಿಸುವ ಮನುಷ್ಯನಿಗೆ ಸೇರಬೇಕಾದ ಗಮ್ಯಕ್ಕೆ ದಾರಿ ಅವಶ್ಯವಾದಂತೆ ಮನುಷ್ಯನಿಗೂ ದೇವರಿಗೂ ಮಧ್ಯದಲ್ಲಿ ಮತವೂ ಸಹ ಅಷ್ಟೇ ಅವಶ್ಯ. ಮನುಷ್ಯನಿಗೂ ದೇವರಿಗೂ ಮಧ್ಯದಲ್ಲಿ ಮತ ದಾರಿಯಂತಾದ್ದು. ಆ ದಾರಿ ಜ್ಞಾನಮಾರ್ಗವಾಗಿ ಇರಬೇಕು ಆದರೆ ಪರಮತವನ್ನು ದೂಷಿಸುವುದಾಗಿ ತನ್ನ ಮತವನ್ನು ದೊಡ್ಡದಾಗಿ ಹೇಳಿಕೊಳ್ಳುವುದಾಗಿ ಇರಬಾರದು.

**9. ಪ್ರಶ್ನೆ :– ಕ್ರೈಸ್ತವ ಮತದಲ್ಲಿ ಸೇರಿದ ಕೆಲವರು ತಮಗೆ ಪ್ರಭು ಕಾಣಿಸಿದ್ದಾನೆಂದು ಹಾಗೆ ಕಾಣಿಸುವುದರಿಂದ ಮತದೊಳಗೆ ಸೇರಿದ್ದೇವೆಂದು ಅನ್ನುತ್ತಿದ್ದಾರೆ. ಆ ಮಾತು ಎಲ್ಲಿಯವರೆಗು ವಾಸ್ತವ?**

ಉತ್ತರ :– ಒಬ್ಬ ಹಿಂದೂಮತಸ್ಥನು ಕ್ರೈಸ್ತವನಾಗಿ ಬದಲಾಗಿ ಆ ಮತದಲ್ಲಿ ಫಾದರ್‌ಆಗಿ ಒಂದು ಚರ್ಚಿಗೆ ಅಧಿಪತಿಯಾಗಿ ಇರುವ ಆ ವ್ಯಕ್ತಿ ನಮ್ಮೊಂದಿಗೆ ಒಂದು ಸಲ ಭೇಟಿಯಾಗುವುದು ನಡೆದಿದೆ. ಆತನು ತಿರುಪತಿ ವೆಂಕಟೇಶ್ವರ ಸ್ವಾಮಿಗೆ ಕಳೆದ 40 ವರ್ಷಗಳಿಂದ ಭಕ್ತನೆಂದು, 40 ವರ್ಷಗಳಿಂದ ಪ್ರತಿ ತಿಂಗಳು ಮೊದಲ ತಾರೀಖಿನಂದು ತಪ್ಪದೆ ತಿರುಮಲಗೆ ಹೋಗಿ ವೆಂಕಟೇಶ್ವರ

ಸ್ವಾಮಿ ಯನ್ನು ದರ್ಶಿಸಿಕೊಳ್ಳುತ್ತಿದ್ದನೆಂದು ಅಂತಹ ಭಕ್ತಿ ಹೊಂದಿದ ತನಗೆ ಒಂದು ಸಲ ಜೀಪ್ ಆಕ್ಸಿಡೆಂಟ್ ನಡೆದಿದೆಯೆಂದು ಹೇಳಿದ್ದಾನೆ. ಆಗ ಕರ್ನೂಲ್ ಆಸ್ಪತ್ರೆಯಲ್ಲಿ ತೀವ್ರ ಗಾಯಗಳೊಂದಿಗೆ ಸೇರಿದ ತನಗೆ ಚಿಕಿತ್ಸೆ ಮಾಡುತ್ತಾ ಕೆಲವು ಗಂಟೆಗಳ ನಂತರ ಮರಣಿಸಿದಂತೆ ಡಾಕ್ಟರ್‌ಗಳು ನಿರ್ಧಾರಣೆ ಮಾಡಿದಂತೆ ಸಹ ಹೇಳಿದ್ದಾನೆ. ತನ್ನ ಸ್ನೇಹಿತರೆಲ್ಲರೂ ಸಹ ಮರಣಿಸಿದ ತನ್ನನ್ನು ನೋಡಿ ಅಳುತ್ತಿದ್ದಂತೆ ಸಹ ಹೇಳಿದ್ದಾನೆ. ಆ ಸಮಯದಲ್ಲಿ ಯೇಸುಪ್ರಭು ಕಾಣಿಸಿ ನಿನ್ನನ್ನು ನಾನು ಬದುಕಿಸುತ್ತಿದ್ದೇನೆ. ನೀನು ಇಂದಿನಿಂದ ಕ್ರೈಸ್ತವನಾಗಿ ಬದಲಾಗಿ ನನ್ನ ಭಕ್ತನಾಗಿ ಇರುಯೆಂದು ಹೇಳುವುದರಿಂದ ಅಂದಿನಿಂದ ವೆಂಕಟೇಶ್ವರನನ್ನು ಬಿಟ್ಟು ಪ್ರಭು ಭಕ್ತನಾಗಿ ಬದಲಾಗಿದ್ದೇನೆಂದು ಸಹ ಹೇಳಿದ್ದಾನೆ. ಈ ವಿಷಯವೆಲ್ಲಾ ಆತನಿಂದ ನಾನು ಕೇಳುವುದು ನಡೆದಿದೆ.

'ಋಜುದರ್ಶಿನಿ' ಎನ್ನುವ ಪುಸ್ತಕದಲ್ಲಿ ಪರವಸ್ತು ಸೂರ್ಯನಾರಾಯಣ ಸಹ ಸತ್ಯನಾರಾಯಣ ಗುಡಿಯಲ್ಲಿ ಬ್ರಾಹ್ಮಣ ಪೂಜಾರಿಯಾಗಿ ಇದ್ದಾಗ ತಮ್ಮ ಸಂಬಂಧಿಕರಿಂದ ಹೊಡೆಯಲ್ಪಟ್ಟು ಕಟ್ಟಿಹಾಕಲ್ಪಟ್ಟಾಗ ಯೇಸು ಪ್ರಭು ಕಾಣಿಸಿ ಬಿಡಿಸಿದಹಾಗೆ ಬರೆಯಲ್ಪಟ್ಟಿದೆ. ಆ ಬರಹವನ್ನು ಇಲ್ಲಿ ಹೊಂದಿಸುತ್ತಿದ್ದೇವೆ.

**"ನನ್ನ ಆಲೋಚನೆಯಲ್ಲಿ ಯೇಸು ಮೂರ್ತೀಭವಿಸಿದನು. ಇನ್ನು ಯೇಸು ಹೊರತು ನನ್ನನ್ಯಾರು ಬಿಡುಸುವುದಿಲ್ಲವೆಂದು ನಿಶ್ಚಯಿಸಿಕೊಂಡೆನು. ಆಗ ಪ್ರಾರ್ಥಿಸಿದೆನು. ವರ್ಣಿಸಲಾರದಷ್ಟು ಬಲಹೀನತೆಯಿಂದ ಯೇಸನ್ನು ಮೊರೆಹೋದೆನು. ದೇವರೆಂದು ಯಾರಾದರೂ ಇದ್ದರೆ ಅವರು ನನ್ನನ್ನು ಬಿಡಿಸಬೇಕು. ನನ್ನ ಕಣ್ಣಿಗೆ ಕಾಣಿಸಬೇಕು, ನನ್ನೊಂದಿಗೆ ಮಾತನಾಡಬೇಕು. ದೇವರೆನ್ನುವವನು ಇಲ್ಲದ ಪಕ್ಷದಲ್ಲಿ ನಾನು ಮರಣಿಸುತ್ತೇನೆ. ಎಂದು ಪ್ರಾರ್ಥಿಸಿಕೊಂಡೆನು. ಸ್ವಲ್ಪ ಸಮಯ ಕಳೆದ ನಂತರ ನಾನು ಭಗವದ್ಯಾನದಲ್ಲಿರುವಾಗ ನಿಧಾನವಾಗಿ ಬಾಗಿಲು ತೆರೆಯುವ ಶಬ್ದವಾಯಿತು. ಬಹು ಭೀತಿಯನ್ನು ಹೊಂದಿದವನಾಗಿ ಬಾಗಿಲು ತೆರೆಯುವುದನ್ನು ನೋಡಿದೆನು. ಒಬ್ಬ ದಿವ್ಯ ಸ್ವರೂಪನು ಗರ್ಭಗುಡಿಯಲ್ಲಿ ಹೆಜ್ಜೆ ಇಟ್ಟು ನನ್ನ ಕಡೆ ನೋಡಿದನು. ನಾನು ಆತನ ಕಡೆ**

ನೋಡಿದಾಗ ಬೆಂಕಿಕೆಂಡದಂತಹ ಮುಖವರ್ಛಸ್ಸು, ಜ್ಯೋತಿಯನ್ನು ಹೋಲಿದ ಆತನ ಎರಡು ಕಣ್ಣು, ಅಪರಂಜಿಯನ್ನು ಹೋಲಿದ ಆತನ ಪಾದಗಳನ್ನು ನೋಡಿದೆನು. ಆತನ ಶರೀರದಲ್ಲಿರುವ ದಿವ್ಯವಾದ ಕಾಂತಿ ಕಿರಣಗಳು ನನ್ನ ಮೇಲೆ ಬೀಳುತ್ತಿದ್ದವು. ಆ ಕ್ಷಣದಲ್ಲಿಯೇ ನನಗೆ ಕಟ್ಟಿದ ಹಗ್ಗಗಳು ಬಿಚ್ಚಿಕೊಳ್ಳುವುದು, ನನ್ನ ಮುರಿದ ಎಲುಬುಗಳು ಸ್ವಸ್ಥತೆ ಹೊಂದುವುದು ನನಗೆ ತಿಳಿಯದೆನೇ ನಡೆದಿವೆ. ನಾನು ಆ ನೆಲದ ಮೇಲೆ ಬಂಧಿಸಲ್ಪಟ್ಟು ಬಿದ್ದಿರುವುದು ಮಾತ್ರವೇ ನನಗೆ ತಿಳಿದಿದೆ. ನಂತರ ಆತನು ನಿಧಾನವಾಗಿ ಹೆಜ್ಜೆ ಹಾಕುತ್ತಾ ಬಂದು ನನ್ನ ಹತ್ತಿರ ನಿಂತಿರುವಾಗ ಆತನಲ್ಲಿಂದ ಬರುತ್ತಿರುವ ಆ ದಿವ್ಯವಾದ ಕಾಂತಿ ನನ್ನ ಶರೀರವೆಲ್ಲಾ ವ್ಯಾಪಿಸಿತು. ನನ್ನ ಕುಮಾರ! ಪರವಸ್ತು : ನೀನು ಎದ್ದು ನಿಲ್ಲು. ಎಂದು ನನ್ನೊಂದಿಗೆ ಆತನು ಹೇಳಿದಾಗ ಅಯ್ಯಾ! ನಾನು ಬಂಧಿಸಲ್ಪಟ್ಟಿರುವುದು ನೀವು ತಿಳಿದಿರುತ್ತೀರ. ಅನ್ನ ಪಾನೀಯಗಳು ಇಲ್ಲದೆ ಬಲಹೀನತೆಯಿಂದ ಕೂಡಿಕೊಂಡಿದ್ದೇನೆಂದು ನಿಮಗೆ ತಿಳಿದಿದೆ. ನೀವು ನನಗೆ ಕಟ್ಟಿದ ಸರಪಳಿಯನ್ನು ಬಿಚ್ಚಿದರೆ ನಾನು ಎದ್ದು ನಿಲ್ಲುತ್ತೇನೆ ಎಂದು ದೀನ ಸ್ವರದಿಂದ ಹೇಳುತ್ತಿರುವಾಗ ಆ ವ್ಯಕ್ತಿ ಮಂದಹಾಸದಿಂದ ನೆಲಕ್ಕೆ ಬಗ್ಗಿ ತನ್ನ ದಕ್ಷಿಣ ಹಸ್ತದಿಂದ ನನ್ನ ದಕ್ಷಿಣ ಭುಜವನ್ನು ಹಿಡಿದು ಮೇಲಕ್ಕೆ ಎತ್ತಿದನು. ನನ್ನನ್ನು ಆತನು ಎಬ್ಬಿಸುತ್ತಿರುವಾಗ ನನ್ನ ಕೈಗಳಿಗು ಕಾಲುಗಳಿಗೂ ಬಂಧಿಸಿದ ಸರಪಣಿಗಳು ಅಕಸ್ಮಾತ್ತಾಗಿ ಮುರಿದು ಚೂರುಚೂರುಗಳಾಗಿ ಕೆಳಗೆ ಬಿದ್ದು ಹೋಗಿವೆ. ಅವುಗಳ ಶಬ್ದವನ್ನು ಕೇಳಿ ನಾನು ಹಿಂತಿರುಗಿ ನೋಡಿ ವಿಷಯವನ್ನು ಅರ್ಥಮಾಡಿಕೊಂಡು ಈತನು ಯಾರೋ ದೊಡ್ಡ ಮಹಾನುಭಾವನಂತೆ ಇದ್ದಾನೆ. ಈತನು ಯಾರೋ ಒಬ್ಬ ದೇವರಾಗಿರುತ್ತಾನೆಂದು ನಿರ್ಣಯಕ್ಕೆ ಬಂದಿದ್ದೇನೆ. ಆ ನಂತರ ಆತನು ನನ್ನನ್ನು ನೋಡುತ್ತಿರುವಾಗ ನನ್ನ ಮುರಿದ ಪಕ್ಕದ ಎಲುಬನ್ನು ನೋಡಿದೆನು. ಅದು ಸ್ವಸ್ಥತೆ ಹೊಂದಿದೆಯೆಂದು ತಿಳಿದುಕೊಂಡೆನು. ನನ್ನ ಎಡ ಭುಜದ ಕಡೆ ನೋಡಿದೆನು. ಅದಕ್ಕೂ ಸಹ ಸ್ವಸ್ಥತೆ ಉಂಟಾಗಿದೆಯೆಂದು ತಿಳಿದುಕೊಂಡೆನು. ನನ್ನ ಎರಡು ಕೈಗಳು ಮೇಲಕ್ಕೆತ್ತಿ ತಿರುಗಿಸಿ ನೋಡಿಕೊಂಡೆನು. ಈಗ ನನಗೆ ಯಾವ ಅನುಮಾನ ಇಲ್ಲ. ನನ್ನ ಶರೀರವೆಲ್ಲಾ ಏರ್ಪಟ್ಟ ಕೆಂಪು ಕಪ್ಪು ಮಚ್ಚೆಗಳನ್ನು ನೋಡಿಕೊಂಡೆನು. ಅವು ನನ್ನ ಬಂಧುಗಳು ಕಟ್ಟಿಗೆಗಳಿಂದ ಹೊಡೆದಾಗ

ಏರ್ಪಟ್ಟ ಮಚ್ಚೆಗಳು ಅವು ಹಾಗೆಯೇ ಇದ್ದವು. ಅಲ್ಲಿಯವರೆಗು ನನ್ನ ಎದುರು ನಿಂತಿರುವ ಆ ವ್ಯಕ್ತಿ ಮಂದಹಾಸದಿಂದ ನಿಶ್ಶಬ್ದವಾಗಿ ನಿಂತು ನನ್ನ ಚರ್ಯೆಗಳೆಲ್ಲವನ್ನು ಗಮನಿಸುತ್ತಿದ್ದಾನೆ. ಆತನನ್ನು ನೋಡಿ ನನಗೆ ಉಂಟಾದ ಈ ದೊಡ್ಡ ಮೇಲನ್ನು ಅನುಸರಿಸಿ ಆತನ ಪಾದಾರವಿಂದಗಳಿಗೆ ಸಾಷ್ಟಾಂಗಬಿದ್ದು ನಮಸ್ಕರಿಸಬೇಕೆಂದು ಪ್ರೇರೇಪಣೆಹೊಂದಿ ಆತನ ಪಾದಗಳ ಹತ್ತಿರ ಸಾಷ್ಟಾಂಗಬಿದ್ದೆನು. 'ನನ್ನ ಕುಮಾರಾ! ನೀನು ಎದ್ದು ನಿಲ್ಲು. ನಾನು ನಿನ್ನೊಂದಿಗೆ ಮಾತನಾಡಬೇಕಾಗಿದೆ.' ಎಂದು ನನಗೆ ಅಜ್ಞಾಪಿಸಿದನು. ನಾನು ಆ ಮಾತುಗಳಿಗೆ ವಿಧೇಯನಾದೆನು. 'ನೀನು ಬಿಡುಗಡೆ ಹೊಂದಿದ್ದೀಯ. ನಾನು ನಿನಗೆ ಜೊತೆಯಾಗಿ ಇದ್ದೇನೆ ಭಯಪಡಬೇಡ, ನಾನು ನಿನ್ನ ದೇವರಾಗಿ ಇದ್ದೇನೆ ಚಿಂತಿಸಬೇಡ, ನಾನು ನಿನ್ನನ್ನು ಬಲಪಡಿಸುವೆನು. ನಿನಗೆ ಸಹಾಯ ಮಾಡುವವನು ನಾನೇ, ನಿನ್ನ ಮೇಲೆ ಕೋಪಗೊಂಡವರೆಲ್ಲರೂ ನಾಚಿಕೆಪಟ್ಟು ವಿಸ್ಮಯ ಹೊಂದುವರು. ನಿನ್ನೊಂದಿಗೆ ವಾದಿಸುವವರು ಮಾಯವಾಗಿ ನಶಿಸುವರು. ಜನಗಳಿಗೆ ನನ್ನ ನಾಮವನ್ನು ಪ್ರಕಟಿಸು.'

'ಸ್ವಾಮಿ! ತಾವ್ಯಾರು? ತಮ್ಮ ಹೆಸರೇನು? ತಮ್ಮ ಹೆಸರು ತಿಳಿಯದೇ ನಿಮ್ಮನ್ನು ಕುರಿತು ಯಾವ ರೀತಿಯಾಗಿ ಪ್ರಕಟಿಸಬೇಕು? ನೀವು ರಾಮನಾ? ಕೃಷ್ಣನಾ? ವೆಂಕಟರಮಣಾ? ಶಂಕರನಾ? ಆದಿವಿಷ್ಣುವಾ? ನಿಮ್ಮ ನಿಜ ಸ್ವರೂಪ ಯಾವುದು? ಇಲ್ಲವೆ ನೀವು ಯೇಸು ಪ್ರಭುವಾ? ಯೇಸುಪ್ರಭುವಾದರೆ ನಿಮ್ಮ ದೇಹ ಗಾಯಗಳಾಗಿ ಶಿಲುಬೆ ಮೇಲೆ ನೇತಾಡುತ್ತಿದ್ದಂತೆ ನಾನು ನೋಡಿರಬೇಕಾಗಿದೆ. ಈಗ ನಿಮ್ಮ ದೇಹಕ್ಕೆ ಗಾಯಗಳು ಇಲ್ಲ. ನೀವ್ಯಾರೆಂದು ನಾನು ಗುರುತಿಸಬಲ್ಲೆನು? ದಯವಿಟ್ಟು ನೀವು ಅದೃಶ್ಯರಾಗದಂತೆ ಸ್ವಲ್ಪ ಸಮಯ ನನ್ನೊಂದಿಗೆ ಮಾತನಾಡುತ್ತಾ ನನಗೆ ಉಂಟಾಗುವ ಅನುಮಾನಗಳನ್ನು ತೀರಿಸಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ದೇವರು ಭಕ್ತನಿಗೆ ಪ್ರತ್ಯಕ್ಷವಾಗಿ ಕೆಲವು ಕ್ಷಣಗಳು ಮಾತ್ರವೇ ಅವನೊಂದಿಗೆ ಸಂಭಾಷಿಸಿ ಅದೃಶ್ಯವಾಗುವಂತೆ ಅನೇಕ ಗ್ರಂಥಗಳಲ್ಲಿ ತಿಳಿದಿದ್ದೇನೆ. ನೀವು ಸಹ ಅದೃಶ್ಯವಾದರೆ ನನ್ನ ಅನುಮಾನಗಳು ತೀರಿಸುವವರ್ಯಾರು? ಸಾಮವೇದದಲ್ಲಿನ ಎರಡನೆ ಭಾಗವಾದ ತಾಂಡಿಯ ಮಹಾ ಬ್ರಾಹ್ಮಣದಲ್ಲಿ 'ಪ್ರಜಾಪತಿರ್ದೇವೇಭ್ಯಂ' ಎಂದು ಶ್ಲೋಕವಿದೆ.

ಆ ಯಜ್ಞ ಯಾರು ಮಾಡಿರುವುದು? ಎರಡನೆಯದಾಗಿ 'ಸರ್ವಪಾಪಪರಿಹಾರೋ' ಎಂದು ಬೇರೊಂದು ಶ್ಲೋಕ ಸಹ ಇದೆ. ಈ ಶ್ಲೋಕ ಯಾರಿಗೆ ಅನ್ವಯಿಸುತ್ತದೆ? ಯಾರು ಆ ಪರಮಾತ್ಮ? ಇದು ತಿಳಿದುಕೊಳ್ಳಬೇಕೆಂದು ಅನೇಕ ದಿನಗಳಿಂದ ಅನ್ವೇಷಿಸುತ್ತಿದ್ದೇನೆ. ಸಾಮವೇದದಲ್ಲಿ 'ಲಿಪ್ಯ್ಯಗೋಪ್ತಾರಾಂ ಎಂದು ಒಂದು ಶ್ಲೋಕವಿದೆ. ಇದು ಯಾವ ಪರಮಾತ್ಮ ವೊಂದರ ಅವತಾರ ಸಂಬಂಧವಾದ ಜನನ ವಿಷಯವನ್ನು ತಿಳಿಸುತ್ತದೆ?' ಈ ವಿಧವಾಗಿ ನಾನು ಆತನನ್ನು ಪ್ರಶ್ನಿಸುತ್ತಿರುವಾಗ ಕ್ಷಣದಲ್ಲಿ ಆತನು ಅದೃಶ್ಯನಾಗಿ ಶಿಲುಬೆ ಮೇಲೆ ನೇತಾಡುತ್ತಾ ರಕ್ತ ಪ್ರೋಕ್ಷಿಸಲ್ಪಡುತ್ತಿರುವ ಶಿಲುಬೆ ಯಜ್ಞ ನಾನು ನೋಡಿದ್ದೇನೆ. ಭಯಕಂಪಿತನಾಗಿ ನೆಲದಮೇಲೆ ಸಾಷ್ಟಾಂಗಬಿದ್ದು ನಮಸ್ಕರಿಸಿ ಪ್ರಭು? ನನ್ನನ್ನು ಕ್ಷಮಿಸು. ಎಂದು ನಾನು ಹೇಳುತ್ತಿರುವಾಗ 'ನಂಬುವುದು ನಿನ್ನಿಂದಾದರೆ ನಂಬುವವನಿಗೆ ಸಮಸ್ತವೂ ಸಾಧ್ಯವೇ' ಎನ್ನುವ ಒಂದು ಗಂಭೀರ ಸ್ವರವನ್ನು ನಾನು ಕೇಳಿದೆನು. ಎದ್ದು ನಿಂತು ಆತನನ್ನು ಸ್ತುತಿಸಿದೆನು. ಆತನನ್ನು ಘನಪಡಿಸಿದೆನು. ನಿಸ್ಸಂದೇಹವಾಗಿ 'ಪ್ರಭು! ನಿನ್ನ ನಾಮ ಎಲ್ಲ ನಾಮಗಳಿಗಿಂತ ಮೇಲೆ ಇದೆ. ಮತ್ತೆಯಾವ ನಾಮದಲ್ಲಿ ನರನಿಗೆ ರಕ್ಷಣೆ ಇರುವುದಿಲ್ಲ. ನಿಮ್ಮ ನಾಮದಲ್ಲಿಯೇ ಪ್ರಭು! ನರನಿಗೆ ರಕ್ಷಣೆ ಲಭಿಸುತ್ತದೆ.' ಎಂದು ನಾನು ಆತನ ನಾಮವನ್ನು ಮಹಿಮೆಪಡಿಸಿದೆನು. ಕೂಡಲೆ ಪ್ರಭು ಅದೃಶ್ಯನಾಗಿ ನನ್ನ ಎದುರು ನಿಂತಿರುವುದು ನೋಡಿದೆನು. ಮತ್ತು ಪ್ರಭು ಪಾದಗಳಿಗೆ ನಮಸ್ಕರಿಸಿದೆನು, ನನಗೆ ತೃಪ್ತಿ ಉಂಟಾಗುವಂತೆ ಆತನಿಗೆ ನಮಸ್ಕರಿಸಿದೆನು. ಬಹಳ ಚೆನ್ನಾಗಿ ನಾನು ಆತನನ್ನು ನೋಡಿದೆನು. ಆತನ ಸೌಂದರ್ಯ ವರ್ಣಾತೀತ. ಆತನ ಮಾತುಗಳಲ್ಲಿರುವ ಮಾಧುರ್ಯ ನನ್ನ ಅಂತರಂಗಕ್ಕೆ ಶಾಂತಿಯನ್ನುಂಟು ಮಾಡಿದೆ. 'ಪ್ರಭು! ನೋಡಿದಿರಾ ನನ್ನ ದೇಹವನ್ನು? ನೀವು ದೇವರೆಂದು ಹೇಳಿರುವುದಕ್ಕೆ ಈ ಪ್ರಜೆಗಳು ನನ್ನನ್ನು ಹೇಗೆ ದಂಡಿಸಿದ್ದಾರೋ? ನಿಮ್ಮ ನಾಮವನ್ನು ನೀವು ಆಜ್ಞಾಪಿಸುವ ವಿಧವಾಗಿ ಪ್ರಕಟಿಸುವಾಗಲೆಲ್ಲಾ ನನಗೆ ಹೀಗೆಯೇ ನಡೆಯುತ್ತದಾ? ಎಂದು ನಾನು ಕೇಳಿದಾಗ! 'ನಿನ್ನೊಂದಿಗೆ ವ್ಯಾಜ್ಯಮಾಡುವವರು ನಶಿಸುವರೆಂದು' ನಾನು ಆತನ ಬಾಯಿಂದ ಬಂದ ಸ್ವರವನ್ನು ಕೇಳಿದೆನು. 'ನೀನು ನನ್ನ ದಾಸನು ಎನ್ನಲ್ಪಡುತ್ತೀಯಾ ನಾನು ನಿನ್ನನ್ನು ಏರ್ಪಡಿಸಿಕೊಂಡೆನು. ನೀನು

**ಹೋಗಿ ಸಮಸ್ತ ಜನರಿಗೂ ನಾನೇ ದೇವರೆಂದು ನೀನು ಕಣ್ಣಿನಿಂದ ನೋಡಿರುವುದನ್ನು ಪ್ರಕಟಿಸು. ನಾನು ನಿನಗೆ ಜೊತೆಯಾಗಿ ಇರುತ್ತೇನೆ.' ಎಂದು ಆಜ್ಞಾಪಿಸಿ ನನ್ನನ್ನು ಗರ್ಭಗುಡಿ ದ್ವಾರದವರೆಗು ನಡೆಸಿ 'ನೀನು ಬಲಗಡೆಗೆ ಹೋಗು' ಎಂದು ನನಗೆ ಹೇಳಿ ಆ ಕರುಣಾಮಯನು ಅದೃಶ್ಯನಾದನು. ನಾನು ಅಲ್ಲಿ ನಿಂತು ಆಲೋಚಿಸಿದೆನು ಬಲಗಡೆಗೆ ನಾನು ಹೋದಂತಾದರೆ ಆ ಮಾರ್ಗ ಕಾಡಿನ ಕಡೆ ಹೋಗುತ್ತದೆ. ಅಲ್ಲಿ ಗುಡ್ಡಗಳು, ಕಾಡು, ಗ್ರಾಮಗಳು ಹೊರತು ಮತ್ತೇನು ಇರುವುದಿಲ್ಲ. ನಾನು ಎಡಗಡೆಗೆ ಹೋದರೆ ನಮ್ಮ ಊರಿನಲ್ಲಿಂದ ರಸ್ತೆಮೇಲೆಗೆ ಹೋಗಿ ಬಸ್ಸಿನಲ್ಲಾಗಲೀ, ರೈಲ್‌ನಲ್ಲಾಗಲಿ ಪ್ರಯಾಣ ಮಾಡಬಲ್ಲೆನು."**

ಇಲ್ಲಿ ಗಮನಿಸಿದ್ದೀರಾ ಪ್ರಭು ಬಲಗಡೆ ಹೋಗೆಂದು ಹೇಳಿದರೆ ಕ್ಷಣವೂ ಸಹ ಆಗದ ಮುಂಚೆಯೇ ತಾನು ಎಡಗಡೆ ಹೋಗಬೇಕೆಂದು ಊಹೆ ಬಂದಿದೆ. ಪ್ರಭು ಹೇಳಿದಂತೆ ಅಲ್ಲದೆ ಎಡಕಡೆಗೆ ಹೋಗಿರುವುದರಿಂದ ಬಹಳ ತೊಂದರೆಗಳು ಬೀಳಬೇಕಾಗಿ ಬಂದಿದೆಯೆಂದು ಸಹ ತಾನೇ ಬರೆದುಕೊಂಡಿದ್ದಾನೆ. ದೇವರೇ ಕಾಣಿಸಿದಾಗ ಆತನ ಮಾತು ಏಕೆ ಕೇಳಲಿಲ್ಲವೋ ನೀವೇ ಯೋಚಿಸಿರಿ.

ಮೊದಲು ಯೇಸುಪ್ರಭು ಪ್ರತ್ಯಕ್ಷವಾದಾಗ ಆತನ ದಿವ್ಯವಾದ ಕಾಂತಿ ಕಿರಣಗಳು ನನ್ನ ಮೇಲೆ ಬೀಳುತ್ತಿದ್ದವು. ಆ ಕ್ಷಣದಲ್ಲಿಯೇ ನನ್ನ ಕೈಗೆ ಕಟ್ಟಿದ ಸರಪಳಿ ಕಿತ್ತುಹೋಗಿವೆಯೆಂದು ಮೊದಲ ಪೇರಾದಲ್ಲಿ ಬರೆದುಕೊಂಡ ಸೂರ್ಯ ನಾರಾಯಣರಾವು ಅದೇ ಪೇರಾದಲ್ಲಿಯೇ ಕೆಳಗೆ ಪ್ರಭು ನನ್ನ ದಕ್ಷಣ ಭುಜಹಿಡಿದು ಎಬ್ಬಿಸುತ್ತಿರುವಾಗ ನನ್ನ ಕಾಲಿಗೆ ಕೈಗೆ ಬಂಧಿಸಲ್ಪಟ್ಟಿರುವ ಸರಪಳಿಗಳು ಆಕಸ್ಮಿಕವಾಗಿ ಚೂರು ಚೂರಾಗಿ ಕೆಳಗೆ ಬಿದ್ದಿವೆ ಎಂದು ಬರೆದಿದ್ದಾನೆ. ಅಸತ್ಯವನ್ನು ಹೇಳುವವರಿಗೆ ಜ್ಞಾಪಕಶಕ್ತಿ ಹೆಚ್ಚಾಗಿ ಇರಬೇಕು. ಮೊದಲು ಏನು ಬರೆದಿದ್ದೇನೆಂದು ಜ್ಞಾಪಕವಿಲ್ಲದ ಸೂರ್ಯನಾರಾಯಣ ಕಾಂತಿಕಿರಣಗಳು ಮೇಲೆ ಬಿದ್ದಾಗ ಬಂಧನಗಳು ಮುರಿದಿವೆ ಎಂದು ಹೇಳಿದ ಮಾತು ಮರೆತು ಹೋಗಿ ಪ್ರಭು ಮುಟ್ಟಿದಾಗ ಮುರಿದಿವೆ ಎಂದು ಎರಡನೆ ಬಾರಿ ಬರೆದಿದ್ದಾನೆ. ಇದರಲ್ಲಿ ಅಸತ್ಯವಿದೆಯೆಂದು ಪ್ರತ್ಯಕ್ಷವಾಗಿ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಇಲ್ಲಿ ಅಸತ್ಯವನ್ನು ಹೇಳುವ ಅವಶ್ಯಕತೆ ಏನು ಬಂದಿದೆಯೋ.

ಒಂದು ವಾರ್ತಾ ಪತ್ರಿಕೆಯಲ್ಲಿ ಒಬ್ಬ ಕ್ರೈಸ್ತವ ಮತಪ್ರಚಾರಕನಾದ ಸುನಿಲ್ ಕುಮಾರ್ ಎನ್ನುವ ವ್ಯಕ್ತಿ ಹೇಳಿದ ವಿಷಯ ಕೆಳಗೆ ತಿಳಿಸುತ್ತಿದ್ದೇವೆ.

**(ಏಪ್ರಿಲ್ 18, 2005) :** "ಆತನು ಕ್ರೈಸ್ತವ ಮತಪ್ರಚಾರಕನು. ಪ್ರಪಂಚ ವ್ಯಾಪ್ತವಾಗಿ ಪ್ರಜೆಗಳಿಗೆ ದೇವರ ವಾಕ್ಯವನ್ನು ಹೇಳುತ್ತಿದ್ದಾನೆ. ಕ್ರಿಸ್ತು ತನ್ನೊಂದಿಗೆ ಮಾತನಾಡಿದ್ದಾರೆಂದು ಹೇಳುತ್ತಿರುವ ಸುನಿಲ್‌ಕುಮಾರ್ ಕಳೆದ ಎಂಟು ವರ್ಷಗಳಿಂದ ಕ್ರಿಸ್ತ ವಾಕ್ಯವನ್ನು ಪ್ರಕಟಿಸುತ್ತಿದ್ದೇನೆಂದಿದ್ದಾರೆ. 26ನೇ ವರ್ಷದಲ್ಲಿ ಕ್ರೈಸ್ತವ ಮತದೊಳಗೆ ಬದಲಾದ ತಾನು ಅಂದಿನಿಂದ ಕ್ರಿಸ್ತ ವಾಕ್ಯವನ್ನು ಪ್ರಜೆಗಳಿಗೆ ಹೇಳುತ್ತಿದ್ದೇನೆಂದು ಸುನಿಲ್‌ಕುಮಾರ್ ಹೇಳಿದ್ದಾರೆ. ಬ್ರಾಹ್ಮಣನಾದ ತಾನು ಕ್ರಿಸ್ತನನ್ನು ನಂಬಿದ್ದೇನೆಂದು ಕಳೆದ ಎಂಟುವರ್ಷದಿಂದ ಪ್ರಪಂಚವ್ಯಾಪ್ತವಾಗಿ ದೈವವಾಕ್ಯ ಪ್ರಚಾರದಲ್ಲಿ ಭಾಗವಹಿಸುತ್ತಿದ್ದೇನೆಂದು ಹೇಳಿದ್ದಾರೆ. ತಾನು ಎಷ್ಟೋ ಬಾರಿ ತಿರುಪತಿಗೆ ಹೋಗಿದ್ದೇನೆಂದು, ದೇವಾಲಯಗಳಲ್ಲಿ ಪೂಜಾರಿಗಳ ವೈಖರಿ ತನಗೆ ಇಷ್ಟವಾಗಲಿಲ್ಲವೆಂದು ಹೇಳಿದ್ದಾರೆ. ತನ್ನದು ಪ್ರೇಮ ವಿವಾಹವೆಂದು ಹೇಳಿದ ಸುನಿಲ್‌ಕುಮಾರ್ ಮದುವೆಗೆಮೊದಲೇ ಕ್ರಿಸ್ತ ತನ್ನೊಂದಿಗೆ ಮಾತನಾಡಿದ್ದಾರೆಂದು ತಿಳಿಸಿದ್ದಾರೆ. ಯೇಸನ್ನು ನಂಬಿದವರೇ ಪ್ರೀತಿಯನ್ನು ಹಂಚಬಲ್ಲರೆಂದು ಸುನಿಲ್ ಹೇಳಿದ್ದಾರೆ. ದುಬಾಯ್, ಸಿಂಗಪೂರ್‌ನಲ್ಲಿನ ತೆಲುಗುದವರಿಗೆ ದೇವರ ವಾಕ್ಯವನ್ನು ಪ್ರಕಟಿಸುತ್ತಿದ್ದೇನೆಂದಿದ್ದಾರೆ. ಯೇಸು ಒಬ್ಬನೇ ಮನುಷ್ಯನೊಂದಿಗೆ ಮಾತನಾಡುವ ದೇವರೆಂದು ಆತನು ಹೇಳಿದ್ದಾರೆ."

ನಮಗೆ ಪ್ರಭು ಕಾಣಿಸಿದ್ದಾನೆಂದು ಇಲ್ಲಿ ಹೇಳಿದ ಮೂವರಲ್ಲಿ ಇಬ್ಬರು ಬ್ರಾಹ್ಮಣರು ಒಬ್ಬರು ಕಡಿಮೆ ಕುಲದವರು ಆಗಿರುವುದು ವಿಶೇಷ. ಪ್ರಭು ಕಾಣಿಸಿದ್ದೇನೆಂದು ಕ್ರೈಸ್ತವಮತದೊಳಗೆ ಬದಲಾದ ಮೂವರು ಆ ಮತದಲ್ಲಿ ಬೋಧಕರಾಗಿ ಇರುವುದು ಇನ್ನೂ ವಿಶೇಷ. ಪ್ರಭು ದೇವರು ಎನ್ನುವುದರಲ್ಲಿ ತಪ್ಪಿಲ್ಲ ಆದರೆ ದೇವರಾದ ಪ್ರಭು ಕಾಣಿಸಿದ್ದಾನೆನ್ನುವುದು ಪೂರ್ತಿ ಅಸತ್ಯ. **ದೈವತ್ವವೂ ಸಹ ಒಂದು ಶಾಸ್ತ್ರೀಯತೆಯನ್ನು ಆಧಾರ ಮಾಡಿಕೊಂಡಿದೆ. ದೈವತ್ವಕ್ಕೆ ಆಧಾರವಾದುದು ಬ್ರಹ್ಮವಿದ್ಯಾಶಾಸ್ತ್ರ. ಬ್ರಹ್ಮವಿದ್ಯಾಶಾಸ್ತ್ರವನ್ನು ದೇವರೇ ಸ್ವತಃವಾಗಿ**

**ತಿಳಿಸಿದ್ದಾನೆ. ದೈವಪ್ರೋಕ್ತವಾದ ಆ ಶಾಸ್ತ್ರದ ಪ್ರಕಾರ ದೇವರು ಇಂದ್ರಿಯಾತೀತನು.** ಮನುಷ್ಯನಿಗೆ ಐದು ಇಂದ್ರಿಯಗಳು ಹೊರಗಿನ ವಿಷಯಗಳನ್ನು ತಿಳಿಸುತ್ತಿವೆ, ಕಣ್ಣು ದೃಶ್ಯವನ್ನು, ಕಿವಿ ಶಬ್ದವನ್ನು, ಮೂಗು ವಾಸನೆಯನ್ನು, ನಾಲಿಗೆ ರುಚಿಯನ್ನು, ಚರ್ಮ ಸ್ಪರ್ಶವನ್ನು ಶರೀರದಲ್ಲಿರುವ ಜೀವಿಗೆ ತಿಳಿಸುತ್ತಿವೆ. ಐದು ಇಂದ್ರಿಯಗಳಿಗು ತಿಳಿಯುವವು ಕೇವಲ ಪ್ರಪಂಚ ವಿಷಯಗಳು ಮಾತ್ರವೇ. ಪ್ರಪಂಚ ಪ್ರಕೃತಿ ಸ್ವರೂಪ. ಪ್ರಕೃತಿ ವಿಷಯಗಳು ಹೊರತು ಪರಮಾತ್ಮ ವಿಷಯಗಳು ಇಂದ್ರಿಯಗಳಿಗೆ ತಿಳಿದಿಲ್ಲ. ಇದನ್ನನುಸರಿಸಿ ಕಣ್ಣಿಗೆ ಪ್ರಕೃತಿ ಹೊರತು ದೇವರು ತಿಳಿಯುವುದಿಲ್ಲ. ದೇವರು ಇಂದ್ರಿಯಗಳಿಗೆ ಅತೀತನೆಂದು, ಅವುಗಳಿಗೆ ತಿಳಿಯುವುದಿಲ್ಲವೆಂದು ದೇವರೇ ಸ್ವತಃವಾಗಿ ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ತಿಳಿಸಿರುವಾಗ ಕೆಲವರು ದೇವರು ನಮಗೆ ಕಾಣಿಸಿದ್ದಾನೆಂದು ಹೇಳಿಕೊಳ್ಳುವುದು ಪೂರ್ತಿ ಅಸತ್ಯ. ಮತವನ್ನು ಪ್ರಚಾರ ಮಾಡುವುದರಲ್ಲಿ ಹಾಗೆ ಹೇಳುವುದು ಒಂದು ಭಾಗವಾಗಿರಬಹುದು. ಆದರೆ ಅದು ದೇವರ ಪ್ರಚಾರ ಮಾಡುವುದಕ್ಕೆ ಅಲ್ಲವೆಂದು ತಿಳಿಯಬೇಕು.

ಕ್ರೈಸ್ತವಮತದೊಳಗೆ ಸೇರಿದ ಬಹಳ ಜನ ತಮಗೆ ಪ್ರಭು ಕಾಣಿಸಿದ್ದಾನೆಂದು ಹೇಳುವುದು ಕೇಳುತ್ತಿದ್ದೇವೆ. ಈ ವಿಷಯವನ್ನು ಬಹಳಜನ ನಂಬುತ್ತಿದ್ದಾರೆ. ಹಾಗೆ ಕಾಣಿಸಿರುವುದು ವಾಸ್ತವವೇ ಆದರೇ ಅದು ದೇವರು ಅಲ್ಲವೆಂದು ಹೇಳಬಹುದು. ಏಕೆಂದರೆ ದೇವರಿಗೆ ರೂಪವಾಗಲೀ, ಹೆಸರಾಗಲೀ ಇಲ್ಲ. ರೂಪವಿರುವವನು ದೇವರಲ್ಲ. ಯಾವ ಆಕಾರವಿಲ್ಲದಂತೆ ಇರುವ ದೇವರು ಒಂದು ಸಮಯದಲ್ಲಿ ಮಾನವನಾಗಿ ಹುಟ್ಟಿ ತನ್ನ ಜ್ಞಾನವನ್ನು ಹೇಳಬೇಕಾಗಿ ಬರುತ್ತಿದೆ. ಆ ವಿಧವಾಗಿ ದೇವರು ಪ್ರಭು ಅವತಾರವಾಗಿ ಹುಟ್ಟಿದಾಗ ಪ್ರಭುವನ್ನು ಭಗವಂತನು ಎನ್ನಬಹುದು. ಆ ಜನ್ಮ ಮುಗಿದುಹೋದ ನಂತರ ಭಗವಂತನು ಪುನಃ ದೇವರಾಗುತ್ತಿದ್ದಾನೆಂದು ತಿಳಿದುಕೊಂಡಿದ್ದೇವೆ. ಒಂದು ಅವತಾರವಾಗಿ ಹುಟ್ಟಿ ಆ ಅವತಾರ ಮುಗಿದ ನಂತರ ದೇವರು ಪುನಃ ಆ ರೂಪದಲ್ಲಿ ಕಾಣಿಸುವುದಿಲ್ಲ. ಈ ವಿಷಯವನ್ನು ಸ್ವತಃವಾಗಿ ಯೇಸು ಪ್ರಭುವೇ ಬೈಬಲ್‌ನಲ್ಲಿ ಯೋಹಾನ್ ಸುವಾರ್ತೆ 7ನೇ ಅಧ್ಯಾಯ 33, 34 ವಾಕ್ಯಗಳಲ್ಲಿ ಹೀಗೆ ಹೇಳಿದ್ದಾನೆ.

**“ಇನ್ನು ಸ್ವಲ್ಪಕಾಲ ನಾನು ನಿಮ್ಮೊಂದಿಗೆ ಸಹ ಇರುವೆನು. ನಂತರ ನನ್ನನ್ನು ಕಳುಹಿಸಿದವನ ಹತ್ತಿರಕ್ಕೆ ಹೋಗುವೆನು. ನೀವು ನನ್ನನ್ನು ಹುಡುಕುವಿರಿ ಆದರೆ ನನ್ನನ್ನು ಕಂಡುಕೊಳ್ಳಲಾರರು. ನಾನೆಲ್ಲಿರುವೆನೋ ನೀವು ಅಲ್ಲಿಗೆ ಬರಲಾರರು.”**

ಹೀಗೆ ಪ್ರಭುವೇ ಸ್ವತಃವಾಗಿ ಹೇಳಿರುವಾಗ ಪ್ರಭು ಮಾತಿಗೆ ವಿರುದ್ಧವಾಗಿ ನಮಗೆ ಪ್ರಭು ಕಾಣಿಸಿದ್ದಾನೆನ್ನುವುದು ಸಮಂಜಸವಾ! ಪ್ರಭು ಭಕ್ತರಾದ ಕ್ರೈಸ್ತರು ಪ್ರಭು ವಾಕ್ಯಕ್ಕೆ ವಿರುದ್ಧವಾಗಿ ಹೇಳಬಹುದಾ! ಪ್ರಭು ವಾಕ್ಯದ ಪ್ರಕಾರ ಪ್ರಭು ಅವತಾರವನ್ನು ಮುಗಿಸಿ ದೇವರ ಹತ್ತಿರಕ್ಕೆ ಹೋದ ನಂತರ ಇನ್ನು ಕಾಣಿಸುವುದಿಲ್ಲವೆಂದು ತಿಳಿಯುತ್ತಿದೆ. ಇದರ ಪ್ರಕಾರ ದೇವರಾದ ಪ್ರಭು ನಂತರ ಕಾಣಿಸಲಿಲ್ಲವೆಂದು, ಕಾಣಿಸಿದ್ದಾನೆಂದು ಹೇಳುವವರು ಅಸತ್ಯವನ್ನು ಹೇಳುತ್ತಿದ್ದಾರೆಂದು ತಿಳಿಯುತ್ತಿದೆ. ಒಂದುವೇಳೆ ಭೂಮಿ ಮೇಲೆ ತನ್ನ ಅವಶ್ಯ ಬಂದಾಗ ಮತ್ತೊಂದು ಅವತಾರದಲ್ಲಿ ಹುಟ್ಟಬಲ್ಲನು, ಆದರೆ ಮೊದಲ ರೂಪದಿಂದ ಕಾಣಿಸುವುದಿಲ್ಲ ಶರೀರದೊಂದಿಗಿರುವ ಪ್ರಭು ಶರೀರವನ್ನು ಬಿಟ್ಟು ದೇವರಲ್ಲೈಕ್ಯವಾದ ನಂತರ ನೋಡಿದ್ದೇವೆನ್ನುವುದು ಬಹಳ ತಪ್ಪು. ದೇವರಾಗಿ ಬದಲಾದವನು ಎಂದಿಗೂ ಕಾಣಿಸುವುದಿಲ್ಲ ಕೇಳಿಸುವುದಿಲ್ಲ ಎನ್ನುವುದಕ್ಕೆ ಆಧಾರವಾಗಿ ಯೋಹಾನ ಸುವಾರ್ತೆ 5ನೇ ಅಧ್ಯಾಯ 37,38 ವಾಕ್ಯಗಳಲ್ಲಿ **“ನೀವು ಯಾವ ಕಾಲದಲ್ಲಾದರೂ ಆತನ ಸ್ವರ ಕೇಳಲಿಲ್ಲ, ಆತನ ಸ್ವರೂಪವನ್ನು ನೋಡಲಿಲ್ಲ”** ಎಂದು ಹೇಳಲಾಗಿದೆ. ಇದರ ಪ್ರಕಾರ ಕೂಡ ದೇವರಾದ ಪ್ರಭುವನ್ನು ಯಾರೂ ನೋಡಲಿಲ್ಲವೆಂದು ತಿಳಿಯುತ್ತಿದೆ.”

ಪ್ರಪಂಚದಲ್ಲಿ ದೇವರೇ ಅಲ್ಲದೆ ದೇವರಿಗೆ ವಿರುದ್ಧವಾದ ಮಾಯೆ ಸಹ ಇದೆ. ಮಾಯೆ ಅಥವಾ ಸಾತಾನ್ ಯಾವ ರೂಪದಲ್ಲಾದರೂ ಯಾವಾಗಾದರೂ ಕಾಣಿಸಬಲ್ಲದು. ಒಂದುವೇಳೆ ಯಾರಿಗಾದರೂ ಯೇಸುಪ್ರಭು ಕಾಣಿಸಿದ್ದಾನೆಂದರೇ ಅದು ದೇವರು ಅಲ್ಲ ಸಾತಾನೇ ಹಾಗೆ ಕಾಣಿಸಿರುತ್ತದೆ. ಮಾನವನನ್ನು ತನ್ನಕಡೆ ತಿರುಗಿಸಿಕೊಳ್ಳುವುದಕ್ಕೆ ಸಾತಾನ್ ದೇವರ ಅವತಾರದಲ್ಲಿ ಸಹ ಕಾಣಿಸಬಲ್ಲದು. ಹಾಗೆ ಕಾಣಿಸುವುದರಿಂದ ಆಗ ಏನು ಹೇಳಿದರೂ

ನಂಬಿ ತನ್ನ ಮಾರ್ಗದಲ್ಲಿ ನಡೆಯಬಲ್ಲರೆಂದು ಸಾತಾನಿಗೆ ತಿಳಿದಿದೆ. ಆದ್ದರಿಂದ ಯಾರಾದರೂ ತಾವು ಪ್ರಭುವನ್ನು ನೋಡಿದ್ದೇವೆಂದರೇ ಮೊದಲು ತಾವು ಯಾವ ಮಾರ್ಗದಲ್ಲಿ ಇದ್ದಾರೋ ನೋಡಿಕೊಳ್ಳಿ. ಅಂತಹವರು ತಮಗೆ ತಿಳಿಯದೇ ದೇವರ ವಾಕ್ಯಕ್ಕೆ ವಿರುದ್ಧವಾಗಿ ನಡೆಯುತ್ತಿರುವರು. ಸಾತಾನ್ ಪ್ರಭಾವದಿಂದ ತಮ್ಮಲ್ಲಿ ಮಹಿಮೆಗಳು ಉಂಟಾದರೇ ದೇವರಿಂದಲೇ ನನ್ನಲ್ಲಿ ಕೆಲವು ಕಾರ್ಯಗಳು ಈಡೇರುತ್ತಿವೆಯೆಂದು ಅಂದುಕೊಳ್ಳುತ್ತಿರುವರು. ದೇವರು ತನ್ನ ಮಹಿಮೆಗೋಸ್ಕರ ನನ್ನನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆಂದು ಸಹ ಅಂದುಕೊಳ್ಳುತ್ತಿರುವರು. ಆ ವಿಧವಾಗಿ ಸಾತಾನ್ ಅಂದುಕೊಳ್ಳುವಂತೆ ಮಾಡುತ್ತಿದೆಯೆಂದು ಯಾರಿಗೂ ತಿಳಿದಿಲ್ಲ. ಮತ್ತಾಯ ಸುವಾರ್ತೆ 7ನೇ ಅಧ್ಯಾಯ 22, 23 ವಾಕ್ಯಗಳಲ್ಲಿ ಪ್ರಭು ಹೇಳಿದ ಮಾತುಗಳಿಗೆ ವಿರುದ್ಧವಾಗಿ ಇದ್ದೇವೇನೋ ಆಲೋಚಿಸಿರಿ. **ನಿನ್ನ ನಾಮದಲ್ಲಿ ಅನೇಕ ಅದ್ಭುತಗಳು ಮಾಡಲಿಲ್ಲವೆ, ರೋಗಗಳು ಹೋಗಲಾಡಿಸಲಿಲ್ಲವೇ, ದೆವ್ವಗಳನ್ನು ಓಡಿಸಲಿಲ್ಲವೆ ಎಂದು ಯಾರಾದರೂ ಅಂದರೂ ಅಕ್ರಮ ಮಾಡುವವರಾ ನನ್ನ ಹತ್ತಿರದಿಂದ ಹೋಗಿರೆಂದು ಪ್ರಭು ಹೇಳುವಂತೆ ಮೇಲಿನ ವಾಕ್ಯಗಳಲ್ಲಿ ಇದೆ.** ನೀವು ಪ್ರಭು ಮಹಿಮೆಗ ಳೆಂದುಕೊಂಡಿರುವವು ಸ್ವತಃವಾಗಿ ಪ್ರಭುವಿನವೇ ಅಕ್ರಮಗಳೆಂದಿದ್ದಾ ನೆಂದರೆ ಆ ಕೆಲಸಗಳು ಸಾತಾನೇ ನಿಮ್ಮಿಂದ ನೆರವೇರುವಂತೆ ಮಾಡುತ್ತಿದೆಯೆಂದು ಏಕೆ ಅಂದುಕೊಳ್ಳಬಾರದು. ಹಾಗೆಯೇ ಪ್ರಭು ಮರಣಿಸಿದ ನಂತರ ಕೂಡ ಪ್ರಭು ಕಾಣಿಸಿದ್ದಾನೆಂದರೆ ಮತ್ತಾಯ ಸುವಾರ್ತೆ 7ನೇ ಅಧ್ಯಾಯದಲ್ಲಿ 21ನೇ ವಾಕ್ಯದಲ್ಲಿ **"ಪ್ರಭು ಪ್ರಭು ಎಂದು ನನ್ನನ್ನು ಕರೆಯುವ ಪ್ರತಿಯೊಬ್ಬನು ಪರಲೋಕ ರಾಜ್ಯದಲ್ಲಿ ಪ್ರವೇಶಿಸುವುದಿಲ್ಲ ಆದರೆ ಪರಲೋಕದಲ್ಲಿರುವ ನನ್ನ ತಂದೆ ಚಿತ್ತದ ಪ್ರಕಾರ ಮಾಡುವವನೇ ಪ್ರವೇಶಿಸುವನು."** ಎನ್ನುವ ವಾಕ್ಯವನ್ನು ಜ್ಞಾಪಕ ತಂದುಕೊಂಡರೇ ಪ್ರಭು ಅವತಾರ ಹೋದನಂತರ ಪ್ರಭುವನ್ನು ಅಲ್ಲದೆ ಪರಲೋಕ ತಂದೆಯನ್ನು ಕುರಿತು ಮಾತನಾಡಬೇಕೆಂದು, ಆತನ ಚಿತ್ತದ ಪ್ರಕಾರ ನಡೆಯಬೇಕೆಂದು ಅರ್ಥ ಅಲ್ಲವೆ! ಪರಲೋಕ ತಂದೆಗೆ ರೂಪನಾಮಗಳು ಇಲ್ಲ ಅಂತಹ ದೇವರನ್ನು ಮರೆಯುವಂತೆ ಸಾತಾನ್ ಪ್ರಭು ಆಕಾರವನ್ನು

ತೋರಿಸಿದೆಯೆಂದು ಏಕೆ ಅಂದುಕೊಳ್ಳಬಾರದು. ಯಾವುದು ಏನಾದರೂ ಪ್ರಭು ಕಾಣಿಸಿದ್ದಾನೆನ್ನುವುದು ಅಸತ್ಯ. ಕಾಣಿಸಿದ್ದಾನೆಂದರೆ ಅದು ಸಾತಾನ್ ಪ್ರಭಾವವೆಂದು ತಿಳಿಯುತ್ತಿದೆ. ದೇವರು ಪುನಃ ಆಕಾರದೊಂದಿಗೆ ಕಾಣಿಸಿದ್ದಾನೆನ್ನುವುದು ದೇವರ ವಾಕ್ಯಕ್ಕೆ ವಿರುದ್ಧವಾಗುತ್ತದೆ.

**10) ಪ್ರಶ್ನೆ :– ಒಬ್ಬ ಹಿಂದೂ ಕ್ರೈಸ್ತವನಾಗಿ ಬದಲಾಗುವುದು, ಬದಲಾದ ನಂತರ ಅಲ್ಲಿಗೆ ಸುಮ್ಮನಿರದೇ ಹಿಂದೂಮತವನ್ನು ಪ್ರೇಮಿಸುವಂತೆ ಪುನಃ ಹಿಂದುವಾಗಿ ಬದಲಾಗಬೇಕೆಂದುಕೊಂಡಂತೆ ಮೇಲ್ನೋಟಕ್ಕೆ ಹೇಳುತ್ತಾ ಕ್ರೈಸ್ತವ ಮತವನ್ನು ಪ್ರಚಾರ ಮಾಡುವುದಕ್ಕೆ ಹಿಂದೂ ಮತವನ್ನು ಎರೆಹುಳುವಿನಂತೆ ಬಳಸಿಕೊಳ್ಳುತ್ತಾ, ವೇದಗಳನ್ನು ದೊಡ್ಡದಾಗಿ ಹೇಳುತ್ತಾ ಅವೂ ಸಹ ಕ್ರೈಸ್ತವ ಮತವನ್ನು ಸೂಚಿಸುವಂತೆ ಬಹಳ ಬುದ್ಧಿವಂತಿಗೆಯಿಂದ ಬರೆದು ಪ್ರಚಾರ ಮಾಡಿದ ಒಂದು ಪತ್ರಿಕೆ ಹೀಗೆ ಇದೆ.**

## ನಾನು ಹಿಂದೂವಾಗಿ ಬದಲಾಗಬೇಕೆಂದುಕೊಳ್ಳುತ್ತಿದ್ದೇನೆ

ನಾನು ಈ ಮಧ್ಯಕಾಲದಲ್ಲಿ ನನ್ನಲ್ಲಿ ನಾನೇ ಬಹಳ ವ್ಯಥೆಪಡುತ್ತಿದ್ದೇನೆ.

ನನ್ನ ಸ್ವಂತ ದೇಶದಲ್ಲಿ, ನನ್ನ ಸ್ವಂತದವರ ಮಧ್ಯೆ, ನಾನ್ಯಾವುದೋ ಒಂದು ಅಪರಾಧ ಮಾಡಿದವನಂತೆ ಅನವಶ್ಯಕವಾಗಿ ಅವಮಾನ ಪಾಲಾಗಿದ್ದೇನೆ.

ಪ್ರತಿಯೊಬ್ಬನು ನನ್ನೊಬ್ಬ ಅಸಹ್ಯವಾದ ವ್ಯಕ್ತಿಯಾಗಿ, ಅಂಟಬಾರದವನಾಗಿ ನೋಡುತ್ತಿದ್ದಾನೆ. ಒಬ್ಬ ಮೋಸಗಾರನಾಗಿ, ಒಬ್ಬ ವಿದೇಶೀ ಗುಲಾಮನಂತೆ ಪರಿಗಣಿಸುತ್ತಿದ್ದಾರೆ. ನನ್ನನ್ನು ಒಬ್ಬ ದೇಶದ್ರೋಹನಾಗಿ, ನೀಚನಾಗಿ ಚಿತ್ರೀಕರಿಸುತ್ತಿದ್ದಾರೆ.

ಅಷ್ಟಕ್ಕೂ ನನ್ನವರ ಮಧ್ಯದಲ್ಲಿ ನಾನಿಷ್ಟು ಅವಮಾನಿಸಲ್ಪಡುವುದಕ್ಕೆ ಕಾರಣ, ನಾನು ಯೇಸುಕ್ರಿಸ್ತನನ್ನು ನನ್ನ ದೇವರಾಗಿ ಸ್ವೀಕರಿಸುವುದೇ. ನನ್ನ

ದೇಶ ಹಿಂದೂ ದೇಶ. ತಲತಲಾಂತರಗಳಿಂದ ಸಾವಿರ ವರ್ಷಗಳಿಂದ ಈ ದೇಶ ನಂಬಿದ ಮತ, ಹಿಂದೂಮತ. ಸಾವಿರ ವರ್ಷಗಳಿಂದ ಈ ನೆಲದ ಮೇಲೆ ಬೇರೂರಿಕೊಂಡ ಹಿಂದೂ ಮತವನ್ನಲ್ಲಗಳೆದು, ಎಲ್ಲೋ ವಿದೇಶೀ ನೆಲದ ಮೇಲೆ ಹುಟ್ಟಿದ ಕ್ರೈಸ್ತವ ಮತವನ್ನು ನಾನು ಆಚರಿಸುವುದು. ಸಹಜವಾಗಿಯೇ ನನ್ನ ಭಾರತೀಯರಿಗೆ ನೋವನ್ನುಂಟುಮಾಡಿದೆ. ಅವರ ನೋವನ್ನು ನೋಡುತ್ತಿದ್ದರೆ, ನನಗೂ ನೋವಾಗಿದೆ.

ನನ್ನವರ ದೃಷ್ಟಿಯಲ್ಲಿ ನಾನು ಅನವಶ್ಯಕವಾಗಿ ಕೆಟ್ಟವನು ಏಕೆ ಆಗಬೇಕು? ಯಾವುದೋ ನಾಲ್ಕು ತಲಾಂತರಗಳ ಹಿಂದೆ ನಮ್ಮ ಪೂರ್ವೀಕರು ಯಾವ ಕಾರಣದಿಂದಲೋ, ಬ್ರಿಟೀಷ್‌ನವರ ಕಾಲದಲ್ಲಿ ಕ್ರೈಸ್ತವಮತದೊಳಗೆ ಬದಲಾಗಿದ್ದಾರೆ. ಈಗ ನೋಡಿದರೆ ದಿನಗಳು ಬದಲಾಗಿವೆ. ಪ್ರಸ್ತುತ ಕಾಲದಲ್ಲಿ ಕ್ರೈಸ್ತನೆಂದು ಹೇಳಿಕೊಳ್ಳುವುದು ಯಾವಮಾತ್ರ ಗೌರವವಾಗಿ ಇಲ್ಲ.

ಅಸಲು ಇದೆಲ್ಲಾ ಯಾಕೆ? ಯಾವ ಮತವನ್ನು ಆಚರಿಸಿದರೆ ಏನು? ಚಿತ್ತಶುದ್ಧಿ ಇದ್ದರೆ ಸಾಲುವುದಿಲ್ಲವೆ? ಮತಕ್ಕೋಸ್ಕರ, ನನ್ನ ಸುತ್ತಾ ಇರುವ ಸಮಾಜಕ್ಕೆ ಎದುರು ಈಜುವುದು ಏಕೆ? ನನ್ನ ಸ್ವಂತದವರಿಗೆ ನಾನು ಶತ್ರುವಾಗುವುದು ಏಕೆ?

ಅದು ಅಲ್ಲದೆ – ನನಗೆ ದೇಶಾಭಿಮಾನ ಹೆಚ್ಚು ! ನನ್ನ ಈ ಭೂಮಿ ಮೇಲೆ ಹುಟ್ಟಿದ ಮತವನ್ನು ಪ್ರಪಂಚಕ್ಕೆ ಸಾರಿ ಹೇಳುವುದುನನಗೆ ಗೌರವವಾಗಿ ಇರುತ್ತದೆ ಆದರೆ, ಹೊರೆ ದೇಶದವರ ಮತವನ್ನು ನಾನು ನೆತ್ತಿಯ ಮೇಲೆ ಇಟ್ಟುಕೊಳ್ಳುವುದು ನನಗೆ ಏನಷ್ಟು ಗೌರವವಾಗಿ ಇರುತ್ತದೆ?

ನನಗೆ, ನನ್ನವರ ಮಧ್ಯದಲ್ಲಿ ಮತ್ತೆ ಗೌರವ ಪಡೆಯಬೇಕೆಂದು ಇದೆ! ಅದಕ್ಕೇ, ನಾನು ಪುನಃ ಹಿಂದೂವಾಗಿ ಬದಲಾಗಬೇಕೆಂದುಕೊಳ್ಳುತ್ತಿದ್ದೇನೆ.

ಆದರೆ ನಾನು ಹಿಂದೂವಾಗಿ ಬದಲಾಗಬೇಕೆಂದರೆ ಏನು ಮಾಡಬೇಕೋ ನನಗೆ ಅರ್ಥವಾಗಲಿಲ್ಲ. ಯಾವ ಗ್ರಂಥವನ್ನು ನಾನು ಪ್ರಾಮಾಣಿಕ

ವಾದುದಾಗಿ ಆರಿಸಬೇಕು? ಯಾವ ದೇವರನ್ನು ಸೃಷ್ಟಿ, ಸ್ಥಿತಿ ಲಯಕಾರಕನಾಗಿ ಆರಿಸಬೇಕು? ನಾನು ಅಯೋಮಯದಲ್ಲಿ ಬಿದ್ದಿದ್ದೇನೆ.

ಏನಾದರೂ ಸರಿ – ನಾನು ಹಿಂದುವಾಗಿ ಬದಲಾಗಿ, ನನ್ನ ದೇಶದಲ್ಲಿ ನಾನು ಪುನಃ ಗೌರವನೀಯವಾದ ವ್ಯಕ್ತಿಯಾಗಿ ಜೀವಿಸಬೇಕೆನ್ನುವ ಆಸೆ ಮಾತ್ರ ಸಾಯಲಿಲ್ಲ.

ಒಂದಕ್ಕೊಂದು ಪೂರ್ತಿಯಾಗಿ ವಿರುದ್ಧವಾದ ಪುರಾಣ ಗ್ರಂಥಗಳನ್ನು ಸ್ವಲ್ಪ ಪಕ್ಕದಲ್ಲಿಟ್ಟು ಅಸಲು ಹಿಂದೂಮತಕ್ಕೆ "ಬುನಾದಿ"ಯಂತಹ ವೇದಗಳ ಮೇಲೆ ದೃಷ್ಟಿ ನಿಮಗ್ನ ಮಾಡಬೇಕೆಂದು ತೀರ್ಮಾನಿಸಿದ್ದೇನೆ.

ಆರ್ಯಸಮಾಜ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರು ಹೇಳಿದ ಮಾತು ಸಹ ಅದೇ ಅಲ್ಲವೆ?

"ಪುರಾಣ ಗ್ರಂಥಗಳು ಪ್ರಾಮಾಣಿಕವಾದ ದೇವೋಕ್ತಿಗಳಲ್ಲ – ವೇದಗಳೇ ಪ್ರಾಮಾಣಿಕವಾದವು. ಆದ್ದರಿಂದ ಪುರಾಣ ಗ್ರಂಥಗಳನ್ನು ಬಿಟ್ಟು, ವೇದಗಳನ್ನು ಪರಿಶೋಧಿಸಿರಿ. ವೈದಿಕ ಮಾರ್ಗ ಅವಲಂಭಿಸಿರಿ" ಎಂದು ಹೇಳಿದ್ದಾರೆ – ದಯಾನಂದ ಸರಸ್ವತಿಯವರು.

ಆ ಮಾತುಗಳು ಹೇಳಿರುವುದಕ್ಕೆ ದಯಾನಂದ ಸರಸ್ವತಿಯವರನ್ನು ದೇಶದ್ರೋಹಿ ಎಂದಾಗಲಿ ವಿದೇಶೀಗುಲಾಮ ಎಂದಾಗಲೀ ಯಾರಾದರೂ ಹೇಳಬಲ್ಲಿರಾ?

ಅಪಚಾರ! ಅಪಚಾರ!! ದಯಾನಂದ ಸರಸ್ವತಿಯವರನ್ನು ಹಿಂದೂಮತ ಸಂಸ್ಕರ್ತರಾಗಿ ಆಧುನಿಕ ಪ್ರವಕ್ತರಾಗಿ ಯಾವತ್ ಭಾರತೀಯ ಸಮಾಜ ಗೌರವಿಸುತ್ತಾ ಇದೆ.

ಆದ್ದರಿಂದ ನಾನು ಸ್ವಾಮೀದಯಾನಂದ ಸರಸ್ವತಿಯವರ ಸಂದೇಶವನ್ನನುಸರಿಸಿ, ವೇದ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಮಾರ್ಗದಲ್ಲಿಯೇ ಆ

ಪರಮಾತ್ಮನನ್ನು ಸೇರಿಕೊಳ್ಳಬೇಕೆಂದು, ಆತನನ್ನು ತಿಳಿದುಕೊಳ್ಳಬೇಕೆಂದು ಸಂಕಲ್ಪಿಸಿದ್ದೇನೆ. ವೇದಕಾಲದಲ್ಲಿ ಭಾರತೀಯ ಋಷಿಪುಂಗವರು ನಂಬಿದ ಸಿದ್ಧಾಂತದ ಪ್ರಕಾರವೇ ನಾನು ದೇವರನ್ನು ಸೇರಿಕೊಳ್ಳಬೇಕೆಂದು ಆಶಿಸಿದ್ದೇನೆ.

ಈ ಉದ್ದೇಶದಿಂದ ಪರಿಶೋಧನೆ ಸಾಗಿಸಿದ ನನಗೆ ಎಲ್ಲೂ ಇಲ್ಲದ ಆಶ್ಚರ್ಯ ಉಂಟಾಯಿತು – ಪ್ರಸ್ತುತ ಕಾಲದ ಭಾರತೀಯ ಸಮಾಜ, ವೇದಕಾಲದ ಹಿಂದೂಮತ ಸಿದ್ಧಾಂತಗಳನ್ನು ಬಿಟ್ಟು, ದಾರಿ ತೊಲಗಿ ಹೋಗಿದೆಯೆಂದು ನನಗೆ ಅರ್ಥವಾಯಿತು.

ವೇದಕಾಲದ ಹಿಂದೂಮತ ಸಿದ್ಧಾಂತದ ಪ್ರಕಾರ, ಮಾನವನು ಪರಮಾತ್ಮನ ಸನ್ನಿಧಿಗೆ ಸೇರುವಾಗ ಪ್ರಾಣಿರಕ್ತ ಪ್ರೋಕ್ಷಣ ತಪ್ಪುವುದಿಲ್ಲ ಎಂದು ನಾನು ಗಮನಿಸಿದ್ದೇನೆ.

ವೇದಕಾಲದಲ್ಲಿ ಹಿಂದೂಗಳು, ಬಲಿಗಳನ್ನು ಸಮರ್ಪಿಸಿದ್ದಾರೆ. ಯಜ್ಞಗಳು ನಿರ್ವಹಿಸಿದ್ದಾರೆ. “ಸರ್ವಪಾಪಪರಿಹಾರೋ ರಕ್ತಪ್ರೋಕ್ಷಣ ಮವಶ್ಯಮ್” ಎಂದರೇ “ರಕ್ತ ಸೋರಿಸದೆ ಪಾಪಕ್ಷಮಾಪಣ ಉಂಟಾಗುವುದಿಲ್ಲ” ಎಂದು ಸಾರಿ ಹೇಳಿದ್ದಾರೆ.

ಸರ್ವವಿಶ್ವಪಾಪ ಪರಿಹಾರಕ್ಕಾಗಿ ಒಂದು ಯಜ್ಞ ನಡೆಯಬೇಕಾಗಿದೆ ಯೆಂದು ವೇದಕಾಲದ ಹಿಂದೂ ಋಷಿಗಳು ನಂಬಿದ್ದಾರೆ. ಆ ಯಜ್ಞಕ್ಕೆ “ಅಜಾಮೇಧಂ” ಎಂದು ಹೆಸರು ಇಟ್ಟಿದ್ದಾರೆ. ಒಂದು ಮಚ್ಚೆ ಇಲ್ಲದ ಮೇಕೆಯನ್ನು ತರಬೇಕು. ಅದರ ತಲೆಮೇಲೆ ಮುಳ್ಳನ್ನು ಸುತ್ತಿ ಕಿರೀಟದಂತೆ ಇಡಬೇಕು. ಆ ಮೇಕೆಯನ್ನು ಒಂದು ಹಲಗೆಗೆ ಮೊಳೆಗಳಿಂದ ಹೊಡೆದು ನೇತಾಕಬೇಕು. ಅದರ ಎಲುಬುಗಳು ಮುರಿಯದಂತೆ ಜಾಗ್ರತೆಯಾಗಿ ಅದರ ರಕ್ತವೆಲ್ಲಾ ಸೋರಿಸಬೇಕು. ಹಾಗೆ ಆ ಮೇಕೆ ಸತ್ತುಹೋದ ನಂತರ ಪುನಃ ಅದಕ್ಕೆ ಪ್ರಾಣ ಕೊಡಬೇಕು. ಅದು “ಅಜಾಮೇಧಂ” ಎಂದರೆ!

ಮತ್ತೆ ಮೊದಲಿಗೆ ಬಂದಿದೆ, ವ್ಯವಹಾರ! ವೇದಕಾಲದ ಹಿಂದೂಗಳ ಮತವನ್ನು ನಾನೂ ನಂಬಿದರೇ – ಸಾಯುವಂತೆ ಪುನಃ ನಾನು ಯೇಸುಕ್ರಿಸ್ತನೇ

ನನ್ನ ದೈವವಾಗಿ ನಂಬಿಕೊಳ್ಳಬೇಕಾಗಿ ಬರುತ್ತದೆ! ಏಕೆಂದರೇ ಸಾಮವೇದ ಪ್ರವಚನದ ಪ್ರಕಾರ ಸರ್ವಲೋಕ ಪಾಪಪರಿಹಾರಾರ್ಥಂ ತನ್ನ ರಕ್ತವನ್ನು ಸೋರಿಸಿ ಬಲಿಯಾಗಿ ಮರಣಿಸಿ ಎದ್ದವನು ಯೇಸುಕ್ರಿಸ್ತ ಒಬ್ಬನೇ!

ಈಗ ನಾನು ಕ್ರಿಸ್ತನಿಗೆ ದೂರವಾದರೇ ಹೊರತು, ನನ್ನ ಸೋದರ ಭಾರತೀಯರು ನನ್ನನ್ನು ಗೌರವಿಸುವುದಿಲ್ಲ, ಆದರಿಸುವುದಿಲ್ಲ ಹಾಗೆ ನಾನು ಕ್ರಿಸ್ತನಿಗೆ ದೂರವಾಗಬೇಕೆಂದರೆ ವೇದಗಳನ್ನು ತೃಣೀಕರಿಸುವುದೊಂದೇ ಮಾರ್ಗ.

ಅಂತಹ ದಾರುಣಕ್ಕೆ ನಾನು ಮಾಡಲಾರೆನು, ವೇದಗಳನ್ನು ನಾನು ತೃಣೀಕರಿಸಲಾರೆನು ವೇದಗಳಲ್ಲಿ ಹೇಳಲ್ಪಟ್ಟ ರಕ್ತಪ್ರೋಕ್ಷಣ, ಯಜ್ಞಕ್ಕೆ ಅವಶ್ಯ ವಿಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಹಾಗೆ ಹೇಳುವುದು ಸನಾತನ ಹಿಂದೂ ಧರ್ಮಕ್ಕೆ ತೀರದ ದ್ರೋಹ ಮಾಡುವುದೇ

ನಮ್ಮ ವೇದಗಳಲ್ಲಿ ಯಜ್ಞವನ್ನು ಕುರಿತಿರುವ ಪ್ರಸ್ತಾವನೆ, ವಿವರಣೆ ಎಷ್ಟು ಸ್ಪಷ್ಟವಾಗಿ ಇದೆಯೆಂದರೇ ವೇದಗಳನ್ನು ಗೌರವಿಸುವವರು ಕ್ರಿಸ್ತ ಪ್ರಭುವನ್ನು ಯಜ್ಞಪುರುಷನಾಗಿ ವಿಶ್ವವಿಮೋಚಕನಾಗಿ ಜಗದ್ರಕ್ಷಕನಾಗಿ ಅಂಗೀಕರಿಸುವುದು ತಪ್ಪುತ್ತಿಲ್ಲ. ಕ್ರಿಸ್ತ ಪ್ರಭು ಬಗ್ಗೆ ಅಕಾರಣದ್ವೇಷ ಬೆಳಸಿಕೊಂಡ ಕೆಲವರು ಭಾರತೀಯ ಪಂಡಿತರಿಗೆ ಈ ಪರಿಸ್ಥಿತಿ ನುಂಗಲಾರದ ತುತ್ತಾಗಿದೆ. ವೇದಗಳಲ್ಲಿ ಅಡಗಿದ ಕ್ರಿಸ್ತ ಶಿಲುಬೆ ಯಜ್ಞವನ್ನು ಮರೆಮಾಡುವುದಕ್ಕೆ ಸದರು ಪಂಡಿತರು ಒಂದು ವಿತಂಡವಾದವನ್ನು ಈ ಮಧ್ಯದಲ್ಲಿ ಪ್ರಚಾರ ಮಾಡುತ್ತಿದ್ದಾರೆ. ವೇದಕಾಲದ ಯಜ್ಞಗಳಲ್ಲಿ ಪ್ರಾಣಿ ರಕ್ತವನ್ನು ಸೋರಿಸುವ ಹಿಂಸಾತ್ಮಕ ವಿಧಾನ ಇಲ್ಲವೇ ಇಲ್ಲವೆಂದು ಆರ್ಯರು ತಾವು ಬೆಳೆಸಿದ ವ್ಯವಸಾಯ ಫಲಗಳನ್ನು, ಧಾನ್ಯವನ್ನು ದೇವತೆಗಳಿಗೆ ಅರ್ಪಿಸಿವುದನ್ನೇ ಅವರು “ಯಜ್ಞ” ಎಂದು ಕರೆದಿದ್ದಾರೆಂದು ಅವರ ವಾದನೆ.

ಆದರೇ ಇದೆಲ್ಲಾ ಅಸಲು ಸತ್ಯವನ್ನು ಮರೆ ಮಾಡುವುದಕ್ಕೆ ಕೆಲವರು ಮಾಡುತ್ತಿರುವ ವ್ಯರ್ಥ ಪ್ರಯತ್ನ, ವೃಥಾ ಪ್ರಯಾಸ ಹೊರತು ಮತ್ತೇನು ಅಲ್ಲ.

ಆರ್ಯರು ಸಸ್ಯದ್ರವ್ಯಗಳನ್ನು ದೇವತೆಗಳಿಗೆ ಅರ್ಪಿಸಿದ ಮಾತು ವಾಸ್ತವವೇ ಆದರೇ ಪಾಪಪರಿಹಾರಕ್ಕೋಸ್ಕರ ಮಾತ್ರ ಅವರು ಪ್ರಾಣಿ ರಕ್ತ ಪ್ರೋಕ್ಷಣೆಯನ್ನು ನಡೆಸಿದ್ದಾರೆನ್ನುವುದಕ್ಕೆ ಖಚಿತವಾದ ಆಧಾರಗಳಿವೆ. ಸಂದೇಹವಿಲ್ಲ. "ರಕ್ತ ಸೋರಿಸದಂತೆ ಪಾಪ ಕ್ಷಮಾಪಣೆ ಉಂಟಾಗುವುದಿಲ್ಲ." ಎಂದು ಪ್ರಾಚೀನ ಭಾರತೀಯ ವೇದ ಋಷಿಗಳು ನಂಬಿದ್ದಾರೆ. (ಈ ವಿಷಯದಲ್ಲಿ ಸತ್ಯವನ್ನು ರುಜುಗಳೊಂದಿಗೆ ಸಹ ತಿಳಿದುಕೊಳ್ಳಬೇಕೆಂದು ಕೋರುವವರು ನನ್ನನ್ನು ಸಂಪರ್ಕಿಸಬಹುದು.)

ದೇಶಭಕ್ತನಾದ ನಾನು, ಸನಾತನ ಹಿಂದೂ ಧರ್ಮವನ್ನು, ವೇದಗಳನ್ನು ಗೌರವಿಸುವ ನಾನು, ಸರ್ವ ಲೋಕ ಪಾಪ ಪರಿಹಾರಕ್ಕೋಸ್ಕರ ಯಜ್ಞವಾಗಿ ಪುನಃ ಎದ್ದ ಯೇಸುವನ್ನು ಬಿಡುವುದು ಹೇಗೆ ನ್ಯಾಯವಾಗುತ್ತದೋ ನನಗೆ ಅರ್ಥವಾಗುತ್ತಿಲ್ಲ! ಯಜ್ಞ ಬೇಕಾಗಿಲ್ಲವೆಂದು ಈಗ ವಾದಿಸುವುದು, ವೇದ ಋಷಿಗಳನ್ನು ಹುಚ್ಚರಂತೆ ಜಮಕಟ್ಟುವುದೇ ಆಗುತ್ತದೆ. ವೇದ ಕಾಲದ ಹಿಂದೂ ಋಷಿಗಳ ಬಗ್ಗೆ ನನ್ನ ಗುಂಡಿಗೆಯನ್ನು ಅಪಾರ ಗೌರವವನ್ನು ಬೆಳೆಸಿಕೊಂಡ ನಾನು ಯಜ್ಞಪುರುಷನಾದ ಯೇಸು ಕ್ರಿಸ್ತನಲ್ಲಿ ನೆರವೇರಿದ "ಅಜಾಮೇಧಂ"ದಲ್ಲಿ ವಿಶ್ವಾಸವಿಡುವುದು ತಪ್ಪುತ್ತಿಲ್ಲ. ನನ್ನ ವಿಶ್ವಾಸವನ್ನು ನನ್ನ ಸೋದರ ಭಾರತೀಯರಿಗೆ ಹೇಳುವುದು ತಪ್ಪುತ್ತಿಲ್ಲ. ನನ್ನನ್ನು ಇನ್ನೇನು ಮಾಡೆನ್ನುತ್ತೀರಾ??

**ರಚನೆಕಾರರ ವಿಳಾಸ**

ಅದ್ದಂಕಿ ರಂಜಿತ್ ಓಫೀರ್

ಎಮ್. ಐ. ಜಿ 877, ಕೆ.ಪಿ.ಹೆಚ್.ಬಿ. ಕಾಲನಿ,

ಹೈದರಾಬಾದ್–500 072, ಫೋನ್ : 040–3058536

**ಪ್ರಕಾಶನ**

**ಪಿ. ಸಂಗೀತರಾವ್**

ಅದ್ದೇಪಲ್ಲಿ (ಪೋಸ್ಟ್), ಭಟ್ಟಿಪ್ರೋಲು (ಪೋಸ್ಟ್&ಮಂಡಲ್),

ಗುಂಟೂರ್ ಜಿಲ್ಲೆ. ಪಿನ್–522 256. ಆಂಧ್ರ ಪ್ರದೇಶ್.

**ಇದನ್ನು ನೋಡಿದ ನಂತರ ಮತಾತೀತರಾದ ನೀವೇನನ್ನುತ್ತೀರೋ ತಿಳಿಸಬಲ್ಲಿರಾ?**

**ಉತ್ತರ :–** ಇದು ಓದಿದ ನಂತರ ಅರ್ಥವಾಗಿರುವುದೇನೆಂದರೇ ಮೊದಲು ಹಿಂದೂ ಮತದ ಮೇಲೆ ಅಭಿಮಾನವಾಗಿ ಪ್ರೇಮವನ್ನು ವ್ಯಕ್ತಪಡಿಸಿದ ವಿಧಾನ ಒಂದು ವ್ಯೂಹದ ಪ್ರಕಾರ ಹೇಳಿರುವುದು. ಕ್ರೈಸ್ತವ ಮತಪ್ರಚಾರದಲ್ಲಿ ಭಾಗವೇ ಮೊದಲು ನಾನು ಪುನಃ ಹಿಂದೂ ಆಗಬೇಕೆಂದುಕೊಳ್ಳುವುದು. ಮೊದಲು ಹಿಂದೂ ಮತ ಬಿಟ್ಟು ಕ್ರೈಸ್ತವನಾಗಿ ಬದಲಾದಾಗಲೇ ಹಿಂದೂ ಮತದ ಮೇಲೆ ಇಲ್ಲದ ಅಭಿಮಾನ ನಂತರ ಬಂದಿದೆಯೆಂದು ಹೇಳುವುದು ಇತರರನ್ನು ಮೋಸಗೊಳಿಸುವುದಕ್ಕೆಂದು ತಿಳಿಯುತ್ತಿದೆ. ಹಿಂದೂಮತದಲ್ಲಿನ ಜ್ಞಾನವನ್ನು ತಿಳಿಯದ ಸ್ವಾಮಿಗಳು ಕೆಲವರು ಮಾಡಿದ ಪ್ರಚಾರಗಳನ್ನು ಆಧಾರವಾಗಿ ಮಾಡಿಕೊಂಡು ಅವುಗಳ ಬಲಹೀನತೆಯನ್ನು ಹೊರಗೆ ಹೇಳುತ್ತಾ ಹಿಂದೂ ಮತವನ್ನೇ ಹೀಯಾಳಿಸುವುದು ನಡೆದಿದೆ. **ಹಿಂದೂಮತಕ್ಕೆ ಬುನಾದಿಯಂತಹವು ವೇದಗಳೆಂದು ಹೇಳುವುದು,** ದಯಾನಂದ ಸರಸ್ವತಿ ಸಂದೇಶವನ್ನನುಸರಿಸಿ ವೇದಗ್ರಂಥಗಳು ಹೇಳಿದ ಮಾರ್ಗದಲ್ಲಿಯೇ ಪರಮಾತ್ಮನನ್ನು ಸೇರಿಕೊಳ್ಳಬೇಕೆಂದು ಹೇಳುವುದು, ಆ ಮಾತುಗಳು ಹೇಳಿದ ದಯಾನಂದ ಸರಸ್ವತಿಯನ್ನು ದೇಶದ್ರೋಹಿ ಎಂದಾಗಲಿ ವಿದೇಶೀ ಗುಲಾಮ ಎಂದಾಗಲೀ ಯಾರಾದರೂ ಅನ್ನಬಲ್ಲರಾ ಎಂದು ಹೇಳುವುದು ನೋಡಿದರೇ ಹಿಂದೂಗಳ ಬೆರಳಿನಿಂದ ಹಿಂದೂಗಳ ಕಣ್ಣನ್ನೇ ತಿವಿದಂತಿದೆ.

ಮಾನವರಿಗಿರುವ ಮೂರುಗುಣಗಳ ವಿಷಯಗಳೇ ವೇದಗಳೆಂದು **"ತ್ರೈಗುಣ್ಯ ವಿಷಯಾ ವೇದಾ"** ಎನ್ನುವ ಭಗವದ್ಗೀತೆ ಮಾತಿಗೆ, ದಯಾನಂದ ಸರಸ್ವತಿ ವೇದಗಳೇ ದೇವರನ್ನು ತಿಳಿಯುವುದಕ್ಕೆ ಆಧಾರವೆಂದು ಹೇಳುವುದು ವಿರುದ್ಧವಲ್ಲವೆ! ಗುಣವಿಷಯಗಳೇ ವೇದಗಳೆಂದು, **"ಗುಣಮಯಿ ಮಮ ಮಾಯಾ"** ಗುಣಗಳೇ ಮಾಯೆ ಎಂದು, ಗುಣಗಳೊಂದಿಗೆ ಕೂಡಿಕೊಂಡ ಮಾಯೆಯನ್ನು ದಾಟುವುದು ದುಸ್ಸಾಧ್ಯವೆಂದು, ಗುಣಗಳೊಂದಿಗೆ ಕೂಡಿದ

ವೇದಗಳನ್ನು ಬಿಟ್ಟಾಗಲೇ ದೇವರನ್ನು ತಿಳಿಯಬಹುದೆಂದು ಗೀತೆಯಲ್ಲಿ ದೇವರು ಹೇಳಿರುವಾಗ ವೇದಗಳು ಮುಖ್ಯವೆಂದು ದಯಾನಂದ ಸರಸ್ವತಿ ಹೇಗೆ ಹೇಳಬಲ್ಲನು. ಒಂದು ವೇಳೇ ಹೇಳಿದ್ದರೇ ಹಿಂದೂಮತದಲ್ಲಿನ ನಿಗೂಢವಾದ ಜ್ಞಾನ ಆತನಿಗೂ ಸಹ ತಿಳಿದಿಲ್ಲವೆಂದೇ ಹೇಳಬಹುದು.

ವೇದಗಳು ಪ್ರಪಂಚಕ್ಕೆ ಸಂಬಂಧಿಸಿರುವವು. ಅವುಗಳನ್ನು ಆಧಾರ ಮಾಡಿಕೊಂಡವರು ಮಾಯಾ ಪ್ರಪಂಚದಲ್ಲಿಯೇ ಇರಬಲ್ಲರು. ಆದರೆ ದೈವ ಸಂಬಂಧವಾದ ಮೋಕ್ಷವನ್ನು ಹೊಂದಲಾರರು. **ವೇದಗಳನ್ನು ಹಿಡಿದುಕೊಂಡು ದೇವರನ್ನು ತಿಳಿದುಕೊಳ್ಳಬೇಕೆಂದುಕೊಳ್ಳುವುದು ನಾಯಿ ಬಾಲ ಹಿಡಿದು ಗೋದಾವರಿ ಈಜಬಲ್ಲೆನೆಂದುಕೊಳ್ಳುವುದು ಒಂದೇ ಆಗುತ್ತದೆ**. ವೇದ ಸಿದ್ಧಾಂತಗಳನ್ನು ಅನುಸರಸಿ ಮಾನವನು ಪರಮಾತ್ಮನನ್ನು ಸೇರುವುದಕ್ಕೆ ಪ್ರಾಣಿರಕ್ತ ಪ್ರೋಕ್ಷಣಂ ಖಂಡಿತ ಎಂದು ಅದ್ದಂಕಿ ರಂಜಿತ್ ಬರೆಯುವುದು ಹಾಸ್ಯಾಸ್ಪದ. ಕರ್ಮ ಯೋಗದಿಂದಾ ಗಲೀ, ಬ್ರಹ್ಮಯೋಗದಿಂದಾಗಲೀ ದೇವರು ತಿಳಿಯುತ್ತಾನೆಂದು ಬ್ರಹ್ಮವಿದ್ಯಾ ಶಾಸ್ತ್ರವಾದ ಗೀತೆಯಲ್ಲಿ ಹೇಳಿದ್ದಾರೆ ಆದರೆ ಪ್ರಾಣಿ ರಕ್ತ ಸೋರಿಸುವುದರಿಂದ ಮನುಷ್ಯನಿಗೆ ದೇವರು ತಿಳಿಯುವುದಿಲ್ಲ. ಈ ಮಾತುಗಳು ದೈವಜ್ಞಾನ ಯಾವಮಾತ್ರ ತಿಳಿಯದವರು ಬರೆದಿರುವವಾಗಿ ಅರ್ಥವಾಗುತ್ತಿದೆ.

ಯಜ್ಞವನ್ನು ಕುರಿತು ಬರೆಯುತ್ತಾ ರಕ್ತದಿಂದ ಮಾಡಬೇಕೆಂದು ಬರೆದಿದ್ದಾರೆ. ಯಜ್ಞಗಳೆಂದರೇ ಇಲ್ಲಿಯವರೆಗು ಹಿಂದೂ ಸ್ವಾಮಿಗಳಿಗೇ ಸರಿಯಾಗಿ ಅರ್ಥವಾಗಲಿಲ್ಲ. ಅಂತಹ ಯಜ್ಞಗಳನ್ನು ಕುರಿತು ಇತರೆ ಮತಸ್ಥರು ಮಾತನಾಡುವುದು **ಅಟ್ಟಕ್ಕೆ ಹತ್ತದವನು ಬೆಟ್ಟಕ್ಕೆ ಹತ್ತಿಯಾನೆ.** ಯಜ್ಞಗಳು ಎರಡು ವಿಧಗಳೆಂದು, ಅವು ಶರೀರದೊಳಗೆ ನಡೆಯುತ್ತಿವೆಯೆಂದು **ತ್ರೈತಸಿದ್ಧಾಂತ ಭಗವದ್ಗೀತೆಯಲ್ಲಿ** ಸ್ಪಷ್ಟವಾಗಿ ಹೇಳಲಾಗಿದೆ. ನಾನೂ ಸಹ ಪ್ರಭುವನ್ನು ದೇವರಾಗಿ ಭಾವಿಸಿ ಆತನನ್ನು ಕುರಿತು ಆತನ ಬೋಧನೆಗಳ ಕುರಿತು ಎಷ್ಟೋ ದೊಡ್ಡದಾಗಿ

ಹೇಳುತ್ತಿರುವವನೇ. ಆದರೂ ನಾವು ಮತಕ್ಕೆ ಅತೀತವಾದ ದೇವರನ್ನು ಪ್ರಭುವಿನಲ್ಲಿ ನೋಡಿದ್ದೇವೆ.

**"ಸರ್ವ ಪಾಪಪರಿಹಾರೋ ರಕ್ತಪ್ರೋಕ್ಷಣ ಮಾವಶ್ಯಮ್"** ಎಂದು ಒಂದು ಮಾತನ್ನು ತೆಗೆದುಕೊಂಡು ನಮ್ಮ ಪಾಪ ಹೋಗುವುದಕ್ಕೆ ಪ್ರಭು ರಕ್ತ ಸೋರಿಸಿದ್ದಾನೆಂದು ಹೇಳುತ್ತಿದ್ದಾರೆ. ಪಾಪ ಹೋಗಬೇಕೆಂದರೆ ರಕ್ತ ಸೋರಬೇಕೆಂದು ಹೇಳಿದ್ದಾರೆ ಆದರೆ ಇಂತಹವರ ರಕ್ತವೆಂದು ಆ ಶ್ಲೋಕ ಪದದಲ್ಲಿ ಇಲ್ಲವಲ್ಲವೆ! ಪಾಪ ಅನುಭವಿಸಿದರೆ ಹೊರತು ಮುಗಿಯುವುದಿಲ್ಲ. ಆ ವಿಷಯವನ್ನು ನಾವು ತಿಳಿದುಕೊಳ್ಳುವಂತೆ ದೇವರು ಪ್ರತ್ಯಕ್ಷವಾಗಿ ತೋರಿಸುತ್ತಿದ್ದಾನೆ. ಉದಾಹರಣೆಗೆ ಒಬ್ಬನು ಬಸ್ಸಿನಕೆಳಗೆ ಬಿದ್ದು ಗಾಯಗಳಾಗಿ ರಕ್ತ ಸೋರುತ್ತಿರುವಾಗ, ಇತರೆ ಪ್ರಮಾದಗಳು ನಡೆದಾಗ ನಾವು ಆತನನ್ನು ನೋಡಿದಾಗ **ಪಾಪ ಎಷ್ಟು ಕೆಲಸ ಆಯಿತು** ಎಂದು ನಾವು ಅನ್ನುತ್ತಿರುತ್ತೇವೆ. ಇಲ್ಲಿ ನಮಗೆ ತಿಳಿಯದಂತೆಯೇ ಪಾಪ ಎಂದು ನುಡಿಯುತ್ತಿದ್ದೇವೆ. ಇದನ್ನನುಸರಿಸಿ ಅವನು ರಕ್ತ ಸೋರಿಸುತ್ತಾ ಬಾಧೆಪಡುವುದು ಪಾಪದಿಂದಲೇ ಎಂದು ದೇವರು ನಮ್ಮೊಳಗಿನಿಂದಲೇ ನೆನಪುಮಾಡಿದಂತಿದೆ. ಪಾಪ ಪರಿಹಾರವಾಗಬೇಕೆಂದರೆ ಅದರ ಫಲಿತವಾದ ಬಾಧೆಯನ್ನು ಅನುಭವಿಸಬೇಕಾಗಿದ್ದೇ. **ಯಾರು ಬಾಧಪಟ್ಟರೇ ಅವನ ಪಾಪ ಮುಗಿದುಹೋಗುತ್ತದೆ. ಇದು ಶಾಸ್ತ್ರಬದ್ಧವಾದ ಸೂತ್ರ.** ರಕ್ತ ಸೋರುವುದರಿಂದ ಪಾಪ ಹೋಗುತ್ತದೆಂದು ನಾವು ಸಹ ಒಪ್ಪಿಕೊಳ್ಳುತ್ತಿದ್ದೇವೆ. ಆದರೆ ಯಾರನ್ನೋ ಸಾಯಿಸಿ ನಮ್ಮ ಪಾಪ ಹೋಗುತ್ತದೆಂದುಕೊಳ್ಳುವುದು ತಪ್ಪು. ನಿನ್ನ ಪಾಪ ಹೋಗುತ್ತದೆಂದು ಇತರರನ್ನು ಹಿಂಸಿಸಿದರೂ, ಅವರ ರಕ್ತವನ್ನು ಸೋರುವಂತೆ ಮಾಡಿದರೂ ಹೊಸ ಪಾಪ ಬಂದು ಸೇರುತ್ತದೆ ಆದರೆ ಹಳೆದು ಹೋಗುವುದಿಲ್ಲ. **ಪ್ರಭುವನ್ನು ಸಾಯಿಸಿ ಪಾಪವನ್ನು ಮೂಟೆಗಟ್ಟಿಕೊಂಡ ಕೈಪಾವಂತಹ ಗುರುಗಳು ಆತನ ಮರಣದಿಂದ ನಮ್ಮ ಪಾಪ**

**ಹೋಗಿದೆಯೆಂದು ಮಾತನಾಡಿದ ಮಾತುಗಳನ್ನು ಇಂದಿನ ಕ್ರೈಸ್ತರು ಮಾತನಾಡುವುದು ಶೋಚನೀಯ.**

ನಾವು ನಿತ್ಯವೂ ಅನುಭವಿಸುತ್ತಿರುವ ಬಾಧೆಗಳು ಪಾಪಕಳಂಕಗಳು ಅಲ್ಲವೆ! ಪ್ರಭು ಮರಣದೊಂದಿಗೆ ನಮ್ಮ ಪಾಪಗಳು ಹೋಗಿದ್ದರೇ ಈದಿನ ಯಾವ ಕ್ರೈಸ್ತನಾದರೂ ಪಾಪ ಅನುಭವಿಸದಂತೆ, ಬಾಧೆಪಡದಂತೆ, ರಕ್ತ ಸೋರದಂತೆ ಭೂಮಿ ಮೇಲೆ ಇದ್ದಾನಾ? ಪ್ರಭುವನ್ನು ಬಲವಂತವಾಗಿ ಸಾಯಿಸಿ ಪಾಪ ಮೂಟೆಕಟ್ಟಿಕೊಂಡ ಮನುಷ್ಯರು ಆತನ ಜ್ಞಾನದಿಂದ ಆ ಪಾಪವನ್ನು ಕಳೆದುಕೊಳ್ಳಬೇಕು ಆದರೆ ನನಗೆ ಪಾಪವೇ ಇಲ್ಲ ಎಂದುಕೊಳ್ಳುವುದು ತಪ್ಪು. **ಪಾಪಪುಣ್ಯಗಳು ಕಣ್ಣಿಗೆ ಕಾಣಿಸುವವು ಅಲ್ಲ.** ಕಾಣಿಸದವುಗಳನ್ನು ಕುರಿತು ಹೋಗಿದೆ ಎಂದುಕೊಳ್ಳುವುದಕ್ಕಿಂತ ಇದೆಯೆಂದು ಪಾಪಭೀತಿ ಹೊಂದಿ ಪ್ರಭು ತಿಳಿಸಿದ **ಜೀವಜಲ** ಎನ್ನುವ ಜ್ಞಾನದಿಂದ ಪಾಪವನ್ನು ತೊಳೆದುಕೊಳ್ಳುವವನು ನಿಜವಾದ ಕ್ರೈಸ್ತವನೆಂದು ನಾವು ನಂಬುತ್ತಿದ್ದೇವೆ. ಹಾಗಲ್ಲದೆ ನಮ್ಮ ಬುದ್ಧಿಯನ್ನು ಮತ ಪ್ರಚಾರಕ್ಕೆ ವಿನಿಯೋಗಿಸುತ್ತಾ ಪ್ರಭು ಹೇಳಿದ ಮಾತುಗಳನ್ನು ವಕ್ರಮಾರ್ಗ ಹಿಡಿಸುವವನು ಎಂದಿಗೂ ಪ್ರಭು ಭಕ್ತನು ಆಗಲಾರನು.

**ಅಸತ್ಯವನ್ನು ಸಾವಿರಮಂದಿ ಹೇಳಿದರೂ ಅದು ಸತ್ಯವಲ್ಲ,**

**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ ಅದು ಅಸತ್ಯವಲ್ಲ.**

| ಕ್ರೈಸ್ತವ ಮತದಲ್ಲಿ | | | ಹಿಂದೂಮತದಲ್ಲಿ |
|---|---|---|---|
| 1. | ತಂದೆ | – | ದೇವರು |
| 2. | ಪರಲೋಕ ತಂದೆ | – | ಪರಮಾತ್ಮ |
| 3. | ಪರಿಶುದ್ಧಾತ್ಮ | – | ಪರಮಾತ್ಮ |
| 4. | ಕುಮಾರನು | – | ಭಗವಂತನು |
| 5. | ಪ್ರವಕ್ತ | – | ಭಗವಂತನು |
| 6. | ಬಾಪ್ತಿಸ್ಮ | – | ಉಪದೇಶ |
| 7. | ಜೀವ ಜಲ | – | ದೇವರ ಜ್ಞಾನ |
| 8. | ಆಜ್ಞೆಗಳು | – | ಧರ್ಮಗಳು |
| 9. | ನಿಬಂಧನ ರಕ್ತ | – | ಜ್ಞಾನಶಕ್ತಿ (ಜ್ಞಾನ) |
| 10. | ನಿತ್ಯ ಜೀವ | – | ಮೋಕ್ಷ |
| 11. | ಅಪೋಸ್ತರು | – | ಭಕ್ತರು |
| 12. | ಅಪವಿತ್ರಾತ್ಮ | – | ದೆವ್ವ |
| 13. | ಸ್ವಸ್ಥತೆಪಡಿಸುವುದು | – | ಆರೋಗ್ಯಪರನನ್ನು ಮಾಡುವುದು |
| 14. | ಸಾತಾನು | – | ಮಾಯೆ |
| 15. | ಪರಿಶಯ್ಯರು | – | ಅಜ್ಞಾನಿಗಳು |
| 16. | ಸರ್ಪಸಂತಾನ | – | ಮಾಯೆ ಮಾರ್ಗದಲ್ಲಿನವರು |
| 17. | ಶೋಧಿಸುವುದು | – | ಪರೀಕ್ಷಿಸುವುದು |
| 18. | ವಿಶ್ವಾಸ | – | ಭಕ್ತಿ |
| 19. | ಪಕ್ಕದವನು | – | ನಿನಗೆ ಪಕ್ಕದಲ್ಲೇ ಇರುವ ಆತ್ಮ |
| 20. | ಪರಲೋಕ, ಪರಲೋಕರಾಜ್ಯ | – | ಮೋಕ್ಷ |
| 21. | ಶಿಲುಬೆ | – | ಹಾವು |
| 22. | ರಕ್ಷಣೆ | – | ಪಾಪವಿಮುಕ್ತಿ |

# ಇಂದೂ– ಹಿಂದೂ

**ಇಂದೂ = ಚಂದ್ರನು = ಜ್ಞಾನಿ**
**ಹಿಂದೂ = ಅರ್ಥರಹಿತ = ಜ್ಞಾನವಿಲ್ಲದ** } ಪ್ರಬೋಧಾನಂದ ಯೋಗೀಶ್ವರರು

**ಹಿಂದೂ = ಕಳ್ಳ = ದಯಾನಂದ ಸರಸ್ವತಿ (ಗುರೂಜೀ ಸಮಗ್ರ ಗ್ರಂಥಾವಲಿ)**

**ಹಿಂದೂ = ಬೇವಕೂಫ್ = ನೃಸಿಂಹ ಭಾರತಿ (ಹೈಂದವ ಶಂಖಾರಾವಮು)**

▶ ಚಿನಜೀಯರ್ ಮುಂತಾದ ಬಹಳ ಮಂದಿ ಸ್ವಾಮೀಜಿಯರು ಹಿಂದೂ ಶಬ್ದವನ್ನು ಬಳಸಬಾರದೆಂದಿದ್ದಾರೆ. ಆ ಪದವನ್ನು ಬಳಸಿದರೇ ನಮ್ಮ ತಲೆಯನ್ನು ನಾವೇ ಕಡೆದುಕೊಂಡಂತೆ ತಮ್ಮ ಉಪನ್ಯಾಸಗಳಲ್ಲಿ ಹೇಳಿದ್ದಾರೆ. ಬಹಳ ಮಂದಿ ಸ್ವಾಮೀಜಿಯರು ಈ ಶಬ್ದವನ್ನು ವಿದೇಶೀಯರಾದ ಮುಸ್ಲೀಮ್‌ರು ನಮಗೆ ಅತ್ತಗಟ್ಟುತ್ತಿದ್ದಾರೆ. ಅವರ ಭಾವದಲ್ಲಿ ಹಿಂದೂ ಎಂದರೇ ಬುದ್ಧಿ ಕಡಿಮೆಯವರೆಂದು ಅರ್ಥವಂತೆ.

▶ ಬೃಹಸ್ಪತಿ ಆಗಮವನ್ನು ಅನುಸರಿಸಿ ಪೂರ್ವದಲ್ಲಿ ಈದಿನ ನಾವು ಕರೆಯುವ ಹಿಂದೂ ಸಮುದ್ರವನ್ನು "ಇಂದೂ ಸರೋವರವೆಂದು" ಕರೆಯುತ್ತಿದ್ದರು.

▶ ನೆಹ್ರೂ ತನ್ನ ಮಗಳಾದ ಇಂದಿರಾಗಾಂಧೀಯನ್ನು ಪ್ರೀತಿಯಿಂದ ಇಂದೂ ಎಂದು ಕರೆಯುತ್ತಿದ್ದನು. ಇಂದೂ ಎಂದರೇ 'ಜ್ಞಾನಿ' ಎಂದು ಅರ್ಥ.

▶ ಕಾಶೀ ಇನ್ನೂ ಮುಂತಾದ ನತರಗಳು ಅರ್ಧ ಚಂದ್ರಾಕಾರದ ಆಕೃತಿಯಲ್ಲಿ ಡೊಂಕು ತಿರಿಗಿವೆ. ಚಂದ್ರನನ್ನು 'ಇಂದೂ' ಎನ್ನುತ್ತಾರೆ.

▶ ಹಿಂದೂ ಸಮುದ್ರ ಜ್ಞಾನ ನಿಲಯಕ್ಕೆ ಗುರುತು ಆದ್ದರಿಂದ ಅದನ್ನು ಪೂರ್ವದಲ್ಲಿ 'ಇಂದೂ ಮಹಾ ಸಮುದ್ರ'ವಾಗಿ ಕರೆಯುತ್ತಿದ್ದರು. ("ತ್ರೈತಾಕಾರ ರಹಸ್ಯ" ಎಂಬ ಗ್ರಂಥದಲ್ಲಿ ಇದೆ.)

▶ ಭಾರತ ದೇಶ ಪೂರ್ವದಲ್ಲಿ ಜ್ಞಾನವಿರುವ ದೇಶ. ಆದ್ದರಿಂದ ಭಾರತದೇಶವನ್ನು ಇಂದೂ ದೇಶವೆಂದೂ, ಭಾರತೀಯರನ್ನು ಇಂದೂಗಳೆನ್ನುತ್ತಿದ್ದರು.

**visit website : www.thraithashakam.org**

ತಪ್ಪದೆ ಓದಿರಿ! ಓದಿಸಿರಿ!!

# ದೇವಾಲಯ ರಹಸ್ಯಗಳು

ಪ್ರಪಂಚ ಪಟದಲ್ಲಿ ಭಾರತದೇಶ ಆಧ್ಯಾತ್ಮಿಕಕ್ಕೆ ಹುಟ್ಟಿದ ಮನೆಯಂತೆ ಹೇಳಿದ್ದರೂ ದಕ್ಷಿಣ ಭಾರತದೇಶ ಸ್ವಚ್ಛವಾದ ದೈವ ಜ್ಞಾನಕ್ಕೆ ಬೆನ್ನೆಲುಬಿನಂತಹದು. ದಕ್ಷಿಣ ಭಾರತದೇಶದಲ್ಲಿ ನಿರ್ಮಿಸಲಾಗಿರುವ ದೇವಾಲಯಗಳು, ಸೃಷ್ಠಿ ಆದಿಯಲ್ಲಿ ದೇವರ ಜ್ಞಾನಕ್ಕೆ ಸಂಕೇತಗಳಾಗಿ ಸಂದೇಶಗಳಾಗಿ ಪ್ರಕಾಶಿಸುತ್ತಿವೆ. ದೇವಾಲಯಗಳಲ್ಲಿನ ವಿಧಿವಿಧಾನಗಳಿಗೆ ಸರಿಯಾದ ಅರ್ಥ ತಿಳಿಯದ ದುರದೃಷ್ಟಕರ ಪರಿಸ್ಥಿತಿಯಲ್ಲಿ ಈದಿನ ನಾವಿದ್ದೇವೆ. ನಮ್ಮ ನಂತರ ಪೀಳಿಗೆಯವರು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳಲಾರದ ಸ್ಥಿತಿಯಲ್ಲಿ ದೇವಾಲಯಗಳ ನಿರ್ಮಾಣವನ್ನು ಕೈಯ್ಯಾರಾ ನಾವೇ ಪ್ರಶ್ನಾರ್ಥಕ ಮಾಡಿಕೊಳ್ಳುತ್ತಿವೆ. ಆಧ್ಯಾತ್ಮಿಕ ರಹಸ್ಯಗಳನ್ನು ದೇವಾಲಯಗಳಲ್ಲಿ ಹೆಜ್ಜೆ ಹೆಜ್ಜೆಗೂ ಆದಿನದ ಜ್ಞಾನಿಗಳು ನಿಕ್ಷಿಪ್ತ ಮಾಡಿರುವಾಗ, ಅವುಗಳನ್ನು ಅನ್ವೇಷಿಸುವವರಿಗೆ ಆ ರಹಸ್ಯಗಳು ತಿಳಿಯದಂತಾಗಿರುವ ಸಮಯದಲ್ಲಿ ಮರುಭೂಮಿಯಲ್ಲಿ ಒಯಾಸಿಸ್ಸಿನ ಹಾಗೆ ಲಭಿಸುವ ಅಪರೂಪವಾದ ಆಧ್ಯಾತ್ಮಿಕ ಗ್ರಂಥವೇ **"ದೇವಾಲಯ ರಹಸ್ಯಗಳು."**

ಈ ಗ್ರಂಥದಲ್ಲಿ ದೇವಾಲಯ ಗೋಪುರದಿಂದ ಹಿಡಿದು ಗರ್ಭಗುಡಿಯಲ್ಲಿ ಸಾಕಾರ ಪ್ರತಿಮೆವರೆಗೂ, ಮತ್ತೂ ಆ ಪ್ರತಿಮೆಗೆ ಮಾಡುವ ಪೂಜಾ ವಿಧಾನದಲ್ಲಿನ ಪ್ರತಿಯೊಂದು ಕಾರ್ಯಕ್ಕೂ ಸುಲಭ ಶೈಲಿಯಲ್ಲಿ, ಶಾಸ್ತ್ರಬದ್ಧವಾದ ವಿವರ ಕೊಡಲಾಗಿದೆ. ಇಲ್ಲಿಯವರೆಗೂ ಯಾರೂ ಬಿಚ್ಚಿ ಹೇಳಲಾರದ ಆಧ್ಯಾತ್ಮಿಕ ರಹಸ್ಯಗಳ ಗುಟ್ಟನ್ನು ಮೊಟ್ಟಮೊದಲ ಬಾರಿ ಪ್ರಬೋಧಾನಂದ ಯೋಗೀಶ್ವರರು ಪ್ರಪಂಚಕ್ಕೆ ತಿಳಿಯುವಂತೆ ಮಾಡಿದ್ದಾರೆ.

**ರಚಿತ : ತ್ರಿಮತ ಐಕ್ಯೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

1. ತಿಳಿಯದ ಆಕಾಶ ಒಂದಾಗಿದ್ದು ತಿಳಿಯುವ ಸೂರ್ಯ, ಚಂದ್ರ, ನಕ್ಷತ್ರಗಳು ಮೂರು (ತ್ರೈತ) ಇವೆ.
2. ತಿಳಿಯದ ಕಾಲ ಒಂದಾಗಿದ್ದು ತಿಳಿಯುವ ದಿನ, ಮಾಸ, ಸಂವತ್ಸರ ಮೂರು (ತ್ರೈತ) ಇವೆ.
3. ತಿಳಿಯದ ಪರಮಾತ್ಮ ಒಂದಾಗಿದ್ದು ತಿಳಿಯುವ ಅಂಡಜ, ಪಿಂಡಜ, ಉದ್ಭಿಜ ಮೂರು (ತ್ರೈತ) ಇವೆ.

## ನಿಜವಾದ ರಚನಕಾರರು ಯಾರೋ ಗೊತ್ತಾ?

### ಸಂಚಲನಾತ್ಮಕ ರಚನಕಾರ

| | | |
|---|---|---|
| ಸಂ | = | ಒಳ್ಳೆ |
| ಚಲನೆ | = | ಚೈತನ್ಯ ಹೊಂದಿದ |
| ಆತ್ಮಕ | = | ಎರಡನೆ ಆತ್ಮ |
| ರಚನಕಾರ | = | ಬರೆಸಿದವನು |

ತಪ್ಪದೆ ಓದಿರಿ! ಓದಿಸಿರಿ!!

# ದ್ರಾವಿಡ ಬ್ರಾಹ್ಮಣ

ತ್ರೇತಾಯುಗದಲ್ಲಿ ಭಾರತದೇಶ ಸ್ಥಿತಿಯನ್ನು ಕಣ್ಣಿಗೆ ಕಾಣಿಸುವಂತೆ ಶಾಸ್ತ್ರಬದ್ಧವಾಗಿ ವಿವರಿಸುತ್ತಾ, ಭಾರತದೇಶವನ್ನೇ ಇಂದೂದೇಶ ಅಥವಾ ದ್ರಾವಿಡ ದೇಶವೆನ್ನುತ್ತಿದ್ದರೆಂಬ ವಿಷಯವನ್ನು ತಿಳಿಸುತ್ತಾ, ದೈವಜ್ಞಾನ ತಿಳಿದ ವ್ಯಕ್ತಿಯನ್ನು ಮಾತ್ರವೇ ಬ್ರಾಹ್ಮಣ ಎನ್ನಬೇಕೆಂದು ತಿಳಿಸುತ್ತಾ, ತ್ರೈತ ಸಿದ್ಧಾಂತ ತಿಳಿದ ಜ್ಞಾನಿಯನ್ನೇ ದ್ರಾವಿಡ ಬ್ರಾಹ್ಮಣ ಎನ್ನಬೇಕೆಂದು ತಿಳಿಸಿದ ಸಂಚಲನಾತ್ಮಕ ಗ್ರಂಥವೇ ದ್ರಾವಿಡ ಬ್ರಾಹ್ಮಣ. ಆಚಾರ್ಯ ಪ್ರಬೋಧಾನಂದರ ಈ ಗ್ರಂಥದಲ್ಲಿ ಆರ್ಯರು ಯಾವ ರೀತಿಯಲ್ಲಿ ದ್ರಾವಿಡರನ್ನು ದರೋಡೆ ಮಾಡಿರುವುದೂ, ಧರ್ಮಗಳನ್ನು ಅಧರ್ಮಗಳಾಗಿ ಬದಲಾಯಿಸಿರುವುದೂ, ಕುಲವ್ಯವಸ್ಥೆಯನ್ನು ಸೃಷ್ಟಿಸಿ ಭಾರತದೇಶದಲ್ಲಿನ ಸ್ವಚ್ಛವಾದ ತ್ರೈತಸಿದ್ಧಾಂತ ಜ್ಞಾನವನ್ನು ಕಣ್ಮರೆ ಮಾಡಿರುವುದೂ ಸವಿವರವಾಗಿ ತಿಳಿಸಿದ್ದಾರೆ. ಈದಿನ ದಕ್ಷಿಣ ಭಾರತದೇಶಕ್ಕೆ ಪರಿಮಿತವಾದ ದ್ರಾವಿಡರ ಮೇಲೆ ಉತ್ತರ ಭಾರತದೇಸವನ್ನು ಆಕ್ರಮಿಸಿಕೊಂಡ ಆರ್ಯ ಜಾತಿ ಇಂದಿಗೂ ಆಧಿಪತ್ಯ ನಡೆಸುತ್ತಿರುವುದನ್ನು ನಗ್ನ ಸತ್ಯವನ್ನು ಈ ಗ್ರಂಥದಿಂದ ತಿಳಿಯಬಹುದು. ಮಾನವಾಕಾರದಲ್ಲಿರುವ ಭಾರತದೇಶದ ಚಿತ್ರ ಪಟ ಗ್ರಂಥದೊಳಗೆ, ಹೊರಗೆ ಚಿತ್ರಿಸಲಾಗಿದ್ದು ಪಾಠಕರನ್ನು ನಿಶ್ಚೇಷ್ಟರಾಗಿ ಮಾಡುವುದು.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತಪ್ಪದೆ ಓದಿರಿ! ಓದಿಸಿರಿ!!

# ಶ್ರೀ ಕೃಷ್ಣನು ದೇವರಾ – ಭಗವಂತನಾ

ಈ ಗ್ರಂಥದಿಂದ ಕೃಷ್ಣನೆಂದರೇ ಏನೋ ಯಾರೋ ತಿಳಿದುಹೋಗುವುದು. ದೈವ ಮಾನವನ ರೂಪವನ್ನು ತೆಗೆದುಕೊಳ್ಳುವನು ಎನ್ನುವುದಕ್ಕೆ ಇದು ಒಂದು ನಿದರ್ಶನ. ಇದರಿಂದ ಎಷ್ಟೋ ಜ್ಞಾನವನ್ನು ತಿಳಿದುಕೊಳ್ಳುವುದೇ ಅಲ್ಲದೇ, ಇಲ್ಲಿಯವರೆಗೂ ತಿಳಿಯದ ಆಧ್ಯಾತ್ಮಿಕ ರಹಸ್ಯಗಳೆಷ್ಟೋ ತಿಳಿಯುವುದು. ಈ ಜ್ಞಾನದಿಂದ ದೇವರು ಬೇರೆ, ಭಗವಂತನು ಬೇರೆಯೆಂದು ತಿಳಿಯುತ್ತಿದೆ. ಕೃಷ್ಣನು ಮನುಷ್ಯನೇ ಆದರೂ ಆತನ ಮರಣದಲ್ಲಿ ನಡೆದ ರಹಸ್ಯ ಇಲ್ಲಿಯವರೆಗೂ ಯಾರಿಗೂ ತಿಳಿದಿಲ್ಲ. ಆತನ ಮರಣ ರಹಸ್ಯವನ್ನು ಈ ಗ್ರಂಥದಿಂದ ತಿಳಿದುಕೊಂಡರೇ ಭೂಮಿ ಮೇಲೆ ಮತ ಭೇದಗಳು ಯಾವ ಮಾತ್ರ ಇರುವುದಿಲ್ಲ. ಮತಕಲಹಗಳು ಮಾಯವಾಗಿ ಹೋಗುತ್ತವೆ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**